CC-0. In Public Domain. Digitized by eGangotri

ಶ್ರೀ ಶಾಂಕರದರ್ಶನಸಾರ



ಜಗದ್ಗುರು ಶ್ರೀಮಚ್ಛಂಕರ ಭಗವತ್ಪಾದರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಾಂಕರದರ್ಶನಸಾರ

ಲೇಖಕರು
ವಿದ್ವಾನ್.ಕೆ. ಕೃಷ್ಣ ಜೋಯಿಸ್

ಪ್ರಕಾಶಕರು
ಯಡತೊರೆ ಶ್ರೀ ಮಹಾ ಸಂಸ್ಥಾನ
ಶ್ರೀ ಯೋಗಾನಂದೇಶ್ವರಸರಸ್ವತೀಮಠ
ಕೃಷ್ಣರಾಜನಗರ ಪ್ರೋಸ್, ಮೈಸೂರು ಜಿಲ್ಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

All rights are reserved. No. part of this book may be produced in any form without permission in writing from the editor except by reviewer who wishes to quote brief passages in connection with a review written for inclusion in a magazine or a news paper.

-Editor

ಲೇಖಕರು :

ವಿದ್ವಾನ್. ಪಂಡಿತ ಪ್ರವರ, ಕೆ. ಕೃಷ್ಣ ಜೋಯಿಸ್

ಶ್ರೀ ಶಾಂಕರದರ್ಶನಸಾರ

ಯಡತೊರೆ ಶ್ರೀ ಜಗದ್ಗುರು ಮಹಾಸಂಸ್ಥಾನದಿಂದ ಪ್ರಕಾಶಿತ

ಮುದ್ರಣ : ಪ್ರಜೋತ್ಪತಿ ನಾಮ ಸಂವತ್ಸರ,
(ಶಕ ೧೯೧೪. ಕ್ರಿ. ಶಕ ೧೯೯೧)

ಬೆಲೆ : ರೂ. ೧೫ ೦೦

ಪ್ರತಿಗಳು : ೧೦೦೦

ಮುದ್ರಕರು :

ಸತ್ಯನಾರಾಯಣ ಶಾಸ್ತ್ರಿ
ಮೈತ್ರಿ ಪ್ರಿಂಟರ್ಸ್ ಅಂಡ್ ಬೈಂಡರ್ಸ್,
1465, 40 ಅಡಿ ರಸ್ತೆ
ಮುನೇಶ್ವರ ಬ್ಲಾಕ್, ಬೆಂಗಳೂರು-560026
ಫೋನ್ : 604899/607266

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ

ಶ್ರೀ ಶ್ರೀ ಶ್ರೀ ಗಣಪತಿ ಭಾರತೀ ಮಹಾಸ್ವಾಮಿಗಳವರು

ಕಾವೇರೀಹೇಮಾವತೀತೀರವಾಸ

ಶ್ರೀ ಜಗದ್ಗುರು ಮಹಾಸಂಸ್ಥಾನಂ ಶ್ರೀಯೋಗಾನಂದೇಶ್ವರಸರಸ್ವತೀಮಠ

ಕೃಷ್ಣರಾಜನಗರ ಪೋಸ್ಟ್ : : ಮೈಸೂರು ಜಿಲ್ಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಖ್ಯೆ

ಸಂಸ್ಥಾನದ ಮೊಕ್ಕಾಂ
ಕೃಷ್ಣರಾಜನಗರ

ದಿನಾಂಕ : 17-4-1991

ಶ್ರೀ ಜಗದ್ಗುರು ಮಹಾಸಂಸ್ಥಾನಂ
ಶ್ರೀ ಯೋಗಾನಂದೇಶ್ವರ ಸರಸ್ವತೀಮಠ

ಚಂದ್ರಮೌಳಿರಸ್ತೆ. ಕೃಷ್ಣರಾಜನಗರ ಟೌನ್, ಮೈಸೂರು ಜಿಲ್ಲಾ,
ಕರ್ನಾಟಕ ರಾಜ್ಯ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ
ಪ್ರಮಾಣಪಾರಾವಾರಪಾರೀಣ ಯಮನಿಯಮಾಸನ ಪ್ರಾಣಾಯಾಮ
ಪ್ರತ್ಯಾಹಾರ ಧ್ಯಾನಧಾರಣಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠಾ-
ಗರಿಷ್ಠತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾಪ್ರಾಪ್ತ
ಷಡ್ದರ್ಶನಸ್ಥಾಪನಾಚಾರ್ಯ ವ್ಯಾಖ್ಯಾನ ಸಿಂಹಾಸನಾಧೀಶ್ವರ ಸಕಲ
ವೇದಾರ್ಥ ಪ್ರಕಾಶ ಸಾಂಖ್ಯತ್ರಯೀಪ್ರತಿಪಾಲಕ ಸಕಲನಿಗಮಾಗಮ
ಸಾರಹೃದಯ ವೈದಿಕಮಾರ್ಗಪ್ರವರ್ತಕ ಸರ್ವತಂತ್ರಸ್ವತಂತ್ರಾದಿ
ರಾಜಧಾನೀ ಶ್ರೀಮದ್ವಿದ್ಯಾ ನಗರಮಹಾರಾಜಧಾನೀ ಕರ್ನಾಟಕ
ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಶ್ರೀಮದ್ರಾಜಾಧಿರಾಜ
ಗುರುಭೂಮಂಡಲಾಚಾರ್ಯ ಶ್ರೀಮಚ್ಛಂಕರಾಚಾರ್ಯಶಿಷ್ಯ ಪರಂಪರಾಪ್ರಾಪ್ತ
ಕಾವೇರೀ ಹೇಮಾವತೀತೀರವಾಸ ಶ್ರೀ ನರಸಿಂಹಪುರವರಾಧೀಶ್ವರ
ಶ್ರೀಶ್ರೀ ಚತುರ್ಥಾಜಪಟ್ಟಾಭಿರಾಮಸ್ವಾಮಿ ಶ್ರೀಶ್ರೀ ನೀಲಕಂಠೇಶ್ವರ
ಸ್ವಾಮಿ ಯಡತೊರೆ (ಕೃಷ್ಣರಾಜನಗರ)

Sri Vidyabharathi Book Centre, Sringeri

ಶ್ರೀ ಯೋಗಾನಂದೇಶ್ವರಸರಸ್ವತೀಮಠಪೀಠಾಧೀಶ್ವರ

CC-O. In Public Domain. Digitized by eGangotri

ಶ್ರೀ ಶ್ರೀ ಶ್ರೀರಾಮಬ್ರಹ್ಮಾನಂದಸರಸ್ವತೀ ಸ್ವಾಮಿನಾಂ
ದಿವ್ಯಪಾದಪದ್ಮಾರಾಧಕ
ಶ್ರೀ ಶ್ರೀ ಶ್ರೀವಾಸುದೇವಯೋಗಾನಂದತೀರ್ಥಸ್ವಾಮಿಪರಿಗೃಹೀತ
ಶ್ರೀ ಶ್ರೀ ಶ್ರೀ ಗಣಪತಿ ಭಾರತೀ ಸ್ವಾಮಿಭಿಃ
ಶ್ರೀಮದ್ರಮಾರಮಣಚರಣಾರವಿಂದನಿಷ್ಯಂದಮಕರಂದತುಂದಿಲೇಂದೀ
ವರೇಂದಿರಾಯಮಾನಮಾನಸಾಸ್ಮದತ್ಯಂತಪ್ರಿಯಮುಖ್ಯ ಶಿಷ್ಯಾಣಾಂ

ಬೆಂಗಳೂರು ನಗರೇ ವಿದ್ಯಮಾನಾನಾಂ ಪಂಡಿತಪವರೇ
ತ್ಯಾದಿಬಿರುದಾಂಕಿತಾನಾಂ ವೇ। ಬ್ರಂ। ಶ್ರೀ। ಕೆ. ಕೃಷ್ಣಜೋಯಿಸ
ಮಹೋದಯಾನಾಂ ವಿಷಯೇ ಶಿವಪೂಜಾದ್ಯನುಷ್ಠಾನ ಸವನತ್ರ
ಯೇಷು ನಾರಾಯಣಸ್ಮರಣಪೂರ್ವಕ ವಿರಚಿತಾಶೀಃಪರಂಪರಾಸ್ಸ-
ಮುಲ್ಲಸಂತುತರಾಮ್

ಈ ಪ್ರಕಾರವಾಗಿ ಕೃಷ್ಣರಾಜನಗರದ ಶ್ರೀಮಠದಲ್ಲಿ ನಿಂತು
ಇತೋಪ್ಯಧಿಕ ಧನಕನಕ ವಸ್ತುವಾಹನಾದ್ಯೈಶ್ವರ್ಯಾದಿ
ಶ್ರೇಯೋಭಿವೃದ್ಧಿಯುಂ ಕುರಿತು ತಪಸ್ಸುಮಾಡುತ್ತಲಿದ್ದೇವೆ.

ಸಂಪ್ರತಿ, ತಾವು ರಚಿಸಿರುವ "ಶ್ರೀ ಶಾಂಕರದರ್ಶನ ಸಾರ" ವೆಂಬ
ಗ್ರಂಥವು ಆಸ್ತಿಕರ ಉಪಯೋಗಕ್ಕೆ ಬರಲೆಂಬ ಉದ್ದೇಶದಿಂದ
ಅದನ್ನು ಮುದ್ರಣ ಮಾಡುವ ಉದ್ದೇಶದಿಂದ ಅದರ ಪ್ರತಿಯನ್ನು
ಶ್ರೀಗಳ ಅವಲೋಕನಕ್ಕಾಗಿ ಕಳಿಸಿದ್ದು ಸರಿಯಷ್ಟೆ. ತಮ್ಮ ಈ
ಗ್ರಂಥವು ಮುದ್ರಿತವಾಗಿ ಶ್ರೀ ಶಾಂಕರಸಿದ್ಧಾಂತದ ಹಿರಿಮೆಯನ್ನು
ಎಲ್ಲರೂ ತಿಳಿಯುವಂತಾಗಲೆಂದೂ ಅದರ ಅನುಭವ ಎಲ್ಲರಿಗೂ
ಸಿಗಲೆಂದೂ ಆಶಿಸಿ, ಆಶೀರ್ವಾದ ಪೂರ್ವಕ ಪ್ರಸಾದ ಕಳಿಸಿರುತ್ತೆ.

Sri Vidyabharathi Book Centre, Sringeri

ನಾರಾಯಣ ಸ್ಮರಣಮ್

CC-O. In Public Domain. Digitized by eGangotri

ಶ್ರೀಗಳವರ ಸೂಕ್ಷ್ಮಪರಿಚಯ

ಕರ್ನಾಟಕರಾಜ್ಯದ ಮೈಸೂರು ಜಿಲ್ಲೆಗೆ ಸೇರಿದ ನಂಜನಗೂಡು ಪ್ರಸಿದ್ಧವಾದ ಸ್ಥಳ. ಗರಳಪುರಿ ಕ್ಷೇತ್ರವೆಂದು ಪ್ರಸಿದ್ಧವಾಗಿ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ದಿವ್ಯ ದೇವಾಲಯದಿಂದ ಶೋಭಿತವಾಗಿದೆ, ಇಲ್ಲಿ ಶ್ರೌತ ಸ್ಮಾರ್ತ ಕರ್ಮಾನುಷ್ಠಾನಪರರೂ ಜ್ಯೋತಿಷ್ಟೋಮಯಾಗ ಮಾಡಿದವರೂ ಆಗಿದ್ದ ಈ ಸದ್ವಂಶದಮೂಲಪುರುಷರಾದ ವೇ॥ಬ್ರಂ॥ಶ್ರೀ ಕೃಷ್ಣಶಾಸ್ತ್ರಿಗಳ ಪ್ರಪೌತ್ರರಾದ ಶ್ರೀಕಂಠಶಾಸ್ತ್ರಿಗಳ ನಾಲ್ಕನೇ ಪುತ್ರರು ದೊರೆಸ್ವಾಮಿಗಳೆಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದರು. ಬಾಲ್ಯದಿಂದಲೇ ಭಗವತ್ಪೂಜಾದಿಗಳಲ್ಲಿ ಅಸಕ್ತರಾಗಿ, ಪುರಾಣಶ್ರವಣ, ಹರಿಕಥಾ ಶ್ರವಣಮಾಡಿ ಅದರ ಕಥಾಭಾಗಗಳನ್ನು ಆವೃತ್ತಿ ಮಾಡುತ್ತಿದ್ದರು, (1915ನೇ ಇಸವಿ) ಅಂದರೆ ಆನಂದ ನಾಮಸಂವತ್ಸರದ ಪುಷ್ಯ ಬಹುಳ ಷಷ್ಠಿಯಂದು ಜನ್ಮತಾಳಿದವರು. ಹನ್ನೆರಡನೆಯ ವಯಸ್ಸಿನಲ್ಲಿ ಉಪನಯನ ಸಂಸ್ಕಾರ ಹೊಂದಿವೇದಾಧ್ಯಯನ ಮಾಡುತ್ತಾ, ನಿತ್ಯಕರ್ಮಾನುಷ್ಠಾನಗಳನ್ನು ಬಿಡದೆ ಮಾಡುತ್ತಲಿದ್ದ ಶ್ರೀಮಚ್ಛಂಕರಭಗವತ್ಪಾದವಿರಚಿತ ಭಜಗೋವಿಂದ ಸ್ತೋತ್ರವೇ ಮೊದಲಾದ್ದನ್ನು ಕಂಠಪಾಠ ಮಾಡಿ ನಿತ್ಯದಲ್ಲೂ ಹೇಳುತ್ತಿದ್ದರು.ಆಂಗ್ಲಭಾಷಾಭ್ಯಾಸವು ನಡೆಯುತ್ತಲೇ ಸಾಗಿತ್ತು. ಮೈಸೂರು ವಿಶ್ವವಿದ್ಯಾಲಯದಲ್ಲಿ ವೈಜ್ಞಾನಿಕ ಭಾಗದಲ್ಲಿ ಅಭ್ಯಾಸ ಸಾಗುತ್ತಿದ್ದಾಗ ಇದೇ ವಿಶ್ವವಿದ್ಯಾಲಯದಲ್ಲಿ ಭಾರತೀಯ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಸರ್. ಎಸ್. ರಾಧಾಕೃಷ್ಣನ್‌ರವರ (ಭಾರತದ ದಿವಂಗತ ಮಾಜಿ ರಾಷ್ಟ್ರಾಧ್ಯಕ್ಷರು) ಉಪನ್ಯಾಸಗಳ ಶ್ರವಣ ಪ್ರಭಾವದಿಂದ ಶ್ರೀ ಶಾಂಕರದರ್ಶನಗಳನ್ನು ಅಭ್ಯಾಸ ಮಾಡುವ ಇಚ್ಛೆಯಾಯಿತು. ಇದಕ್ಕಾಗಿ ಸಂಸ್ಕೃತಭಾಷಾಭ್ಯಾಸ ಮಾಡುವ ಕುತೂಹಲದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಶ್ವವಿದ್ಯಾಲಯದ ವ್ಯಾಸಂಗ ಮೈದುಮಾಡಿ ಸ್ವಂತಊರಾದ ನಂಜನಗೂಡಿಗೆ ಹೋಗಿ ಸಂಸ್ಕೃತ ಭಾಷಾಭ್ಯಾಸ ಆರಂಭಿಸಿದರು.

ವೇದಾಂತಶಾಸ್ತ್ರದ ಅಭ್ಯಾಸ ಮಾಡುವ ಕುತೂಹಲ ಭಗವಂತನ ಅನುಗ್ರಹವೋ ಎಂಬಂತೆ ಶ್ರೀ ಶೃಂಗಗಿರಿ ಜಗದ್ಗುರು ಮಹಾಸಂಸ್ಥಾನದಲ್ಲಿ ವಿರಾಜಮಾನರಾಗಿದ್ದ ಶ್ರೀಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳ ದಿವ್ಯಸನ್ನಿಧಿಯಲ್ಲಿ ಭಾಷ್ಯತ್ರಯೋಪದೇಶ ಪಡೆದು, ಸಂನ್ಯಾಸಾಶ್ರಮಸ್ವೀಕಾರ ಮಾಡಿದ್ದ ಯತಿವರೇಣ್ಯರು, ಪರಮಪೂಜ್ಯ ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಶ್ರೀ ಶಿವಾನಂದತೀರ್ಥರು 1938 ರಲ್ಲಿ ನಂಜನಗೂಡಿಗೆ ಆಗಮಿಸಿ ಚಾತುರ್ಮಾಸ್ಯ ವ್ರತಾನುಷ್ಠಾನ ಮಾಡಿದ ಸಮಯದಲ್ಲಿ ಪೂಜ್ಯರಿಂದ ಭಾಷ್ಯತ್ರಯೋಪದೇಶವಾಯಿತು ಅಲ್ಲದೆ ಸ್ವಾಮಿ ವಿವೇಕಾನಂದರ ಉಪನ್ಯಾಸಮಾಲೆಗಳನ್ನು ಓದಿ ಅದರಿಂದಲೂ ತಿಳಿವಳಿಕೆ ಹೊಂದಲಾಯಿತು. 1947ರಲ್ಲಿ ಮೈಸೂರು ಶ್ರೀಮನ್ಮಹಾರಾಜರ ಸಂಸ್ಕೃತ ಮಹಾ ಪಾಠಶಾಲೆಯಿಂದನಡೆಸಲ್ಪಡುವ ಸಂಸ್ಕೃತ ಪರೀಕ್ಷೆಯಲ್ಲಿ ಭಾಗವಹಿಸಿ ಅದ್ವೈತ ವೇದಾಂತಶಾಸ್ತ್ರದಲ್ಲಿ ವಿದ್ವತ್ಪರೀಕ್ಷೆ ಮುಗಿಸಿದರು.

1947ರಿಂದ 1950ರವರೆಗೆ ಮನೆಯಲ್ಲೇ ಗೃಹ್ಯಾಗ್ನಿಯನ್ನು ಉಪಾಸಿಸುತ್ತಾ ದರ್ಶಪೂರ್ಣಮಾಸಸ್ಥಾಲೀಪಾಕಗಳೇ ಮೊದಲಾದ ಸಪ್ತಪಾಕಸಂಸ್ಥೆಗಳ ಅನುಷ್ಠಾನ ನಡೆಸಿದರು.

1950ರಿಂದ 1956ರವರೆಗೆ ಬೆಂಗಳೂರಿನಲ್ಲಿ ಶ್ರೀಶೃಂಗೇರಿ ಸಂಸ್ಥಾನದ ಆಶ್ರಯದಲ್ಲಿ ಸ್ಥಾಪಿತವಾಗಿರುವ ಶ್ರೀ ಭಾರತೀಯ ಗೀರ್ವಾಣ ಭಾಷಾ ಪ್ರೌಢ ವಿದ್ಯಾಭಿವರ್ಧಿನೀ ಪಾಠಶಾಲೆಯಲ್ಲಿ ಪೂರ್ವ ಮೀಮಾಂಸಾ ಶಾಸ್ತ್ರಾಭ್ಯಾಸ ಮಾಡಿ ಶ್ರೀ ಜಗದ್ಗುರು ಚಂದ್ರಶೇಖರ ಭಾರತೀಮಹಾಸ್ವಾಮಿಗಳ ವಿಶೇಷಾನುಗ್ರಹಕ್ಕೆ ಪಾತ್ರರಾದರು, ಇದರ ಫಲವೋ ಎಂಬಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಷ್ಠಾನಾ ಪೇಕ್ಷತ್ವಾತ್ ಧರ್ಮಜಿಜ್ಞಾಸಾಯಾಃ ಎಂಬ ಶ್ರೀ ಶಂಕರ ಭಗವತ್ಪಾದರ ಭಾಷ್ಯೋಕ್ತಿಯ ಸಫಲತೆಯೋ ಎಂಬಂತೆ ಸೋಮಯಾಗ ಪೂರ್ವಕ ತ್ರೇತಾಗ್ನಿಗಳ ಆಧೀನ ಪಡೆಸಿದರು, ನಂತರ ದರ್ಶಪೂರ್ಣಮಾಸಾದಿ ಸಪ್ತ ಹವಿರ್ಯಜ್ಞಗಳನ್ನು ನಡೆಸಿದರು. ಗರುಡಚಯನಪೂರ್ವಕ ಆಪ್ತೋರ್ಯಾಮವೆಂಬ ಸೋಮಯಾಗವನ್ನು ನಕ್ಷತ್ರ ಸತ್ರವೇ ಮೊದಲಾದ ಯಾಗಗಳನ್ನು ನಡೆಸಿದರು.

1970ರಲ್ಲಿ ಪತ್ನೀವಿಯೋಗ ಉಂಟಾಯಿತು. ನಂತರ ನಿರಾಶ್ರಮಿಗಳಾಗಿ ಇರಬಾರದೆಂದು ತಿಳಿದು, **ಅನುಭವಾಪೇಕ್ಷತ್ವಾತ್ ಬ್ರಹ್ಮಜಿಜ್ಞಾಸಾಯಾಃ** ಎಂಬ ಭಾಷ್ಯವಾಕ್ಯಾನುಸಾರ ಬ್ರಹ್ಮಾನುಭವಕ್ಕಾಗಿ ಸಂನ್ಯಾಸಾಶ್ರಮವನ್ನು 1973ರಲ್ಲಿ ಸ್ವೀಕರಿಸಿದರು.

1976ರಲ್ಲಿ ಯಡತೊರೆ ಶ್ರೀ ಶ್ರೀ ಜಗದ್ಗುರುಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧಿಪತಿಗಳಾಗಿ ಸರಕಾರದಿಂದ ನಿಯಮಿತರಾಗಿ ಬಹಳ ದುಃಸ್ಥಿತಿಯಲ್ಲಿದ್ದ ಶ್ರೀ ಮಠದ ಅಭಿವೃದ್ಧಿ ಮಾಡಿರುತ್ತಾರೆ. ಅಲ್ಲದೆ ಇದೇ ಗುರು ಪರಂಪರೆಯಲ್ಲಿ ಬಂದ ಶ್ರೀ ಶ್ರೀ ಜಗದ್ಗುರುರಾಮಬ್ರಹ್ಮಾನಂದ-ಸರಸ್ವತೀಮಹಾಸ್ವಾಮಿಗಳಿಂದ ಸ್ಥಾಪಿತವಾದ ಹೊಳೇನರಸೀಪುರದ ಮಠ ಮತ್ತು ದೇವಾಲಯಗಳು ಒಂದುನೂರುವರ್ಷ ಸರಕಾರದ ಆಡಳಿತದಲ್ಲಿದ್ದದ್ದನ್ನೂ ವಾಪ್ಸು ಪಡೆದು ಶ್ರೀ ಚತುರ್ಭುಜಪಟ್ಟಾಭಿರಾಮಸ್ವಾಮಿ, ಶ್ರೀ ನೀಲಕಂಠೇಶ್ವರಸ್ವಾಮಿ ದೇವಾಲಯಗಳ ಪುನರುದ್ಧಾರ ಮಾಡಿರುತ್ತಾರೆ. ಆಸ್ತಿಕರಿಗೂ, ವಿದ್ವಾಂಸರಿಗೂ ಆಶ್ರಯವಾತೃಗಳಾಗಿದ್ದಾರೆ.

ಈಗ ನಾವು ಮುದ್ರಿಸಿರುವ **"ಶ್ರೀ ಶಾಂಕರ ದರ್ಶನಸಾರ"** ಗ್ರಂಥದ ಮುದ್ರಣದ ಸಂಪೂರ್ಣ ದ್ರವ್ಯವನ್ನು ದಯಪಾಲಿಸಿ ಆಶೀರ್ವದಿಸಿರುತ್ತಾರೆಂದು ಕೃತಜ್ಞತೆಯಿಂದ ತಿಳಿಸಲು ಆಶಿಸುತ್ತೇನೆ.

ಇತಿ.

ಕೆ. ಕೃಷ್ಣಜೋಯ್ಸ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಸ್ತಾವನೆ

ಅದ್ವೈತ ಸಿದ್ಧಾಂತವು ಶಂಕರ ಭಗವತ್ಪಾದರಿಂದ ಸ್ಥಾಪಿಸಿದ ಹೊಸ ಸಿದ್ಧಾಂತವಲ್ಲ. ಅದು ಹಿಂದೆಯೂ ಇತ್ತು. ಈಗಲೂ ಇದೆ. ಯಾವಾಗಲೂ ಇರುತ್ತದೆ. ಅದು ಸನಾತನ ವೈದಿಕ ಸಿದ್ಧಾಂತ. ಆದರೆ ಅನೇಕ ನಾಸ್ತಿಕ, ಆಸ್ತಿಕ ದರ್ಶನಕಾರರು ಸ್ವಬುದ್ಧಿ ತೀಕ್ಷ್ಣತೆಯಿಂದ ತರ್ಕ ಪ್ರಧಾನವಾಗಿ ಬಹುಧಾ ಜಿಜ್ಞಾಸೆಮಾಡಿ, ಭಿನ್ನ ಭಿನ್ನ, ಮಾರ್ಗಗಳನ್ನು ಆವಲಂಬಿಸಿ ತತ್ವ ವಿಚಾರಮಾಡಿ ಭಿನ್ನ ಭಿನ್ನ ದರ್ಶನಗಳನ್ನು ಪ್ರಚುರಪಡಿಸಿರುತ್ತಾರೆ. ತತ್ವ ವೆಂಬುದು ತ್ರಿಕಾಲಾಬಾಧಿತವಾದುದು. ಅದು ವ್ಯತ್ಯಾಸವಾಗಲು ಶಕ್ಯವೇ ಇಲ್ಲ.

ವಸ್ತು ಸ್ವರೂಪ ನಿರ್ಣಯಕ್ಕೆ ಲಕ್ಷಣ, ಪ್ರಮಾಣ ಹಾಗೂ ಪರೀಕ್ಷೆ ಗಳು ಆಗತ್ಯ. ಆದರೆ ಇವು ಬಾಹ್ಯವಿಷಯಗಳಲ್ಲಿಯೇ ಪರ್ಯಾಪ್ತವಾಗಿವೆ. ಆಂತರಿಕವಾದ ವಿಷಯಗಳ ನಿರ್ಧಾರಕ್ಕೆ ಅನಾದಿಯೂ ಅಪೌರುಷೇಯವೂ ಆದ ಶಬ್ದ ರಾಶಿಯೇ ಮುಖ್ಯ ಪ್ರಮಾಣ. ಆ ಶಬ್ದರಾಶಿಯೇ ವೇದಗಳು ವೇದಗಳ ಆರ್ಥ ನಿರ್ಣಯಕ್ಕೂ ಪದ, ವಾಕ್ಯ, ಪ್ರಮಾಣ ಶಾಸ್ತ್ರಗಳ ಹಾಗೂ ನಿರುಕ್ತದ ಸಹಕಾರ ಅತ್ಯಗತ್ಯ.

ಶಂಕರ ಭಗವತ್ಪಾದರು ಮೇಲೆ ತಿಳಿಸಿದ ಎಲ್ಲಾ ಶಾಸ್ತ್ರಗಳಲ್ಲಿ ಪ್ರಖರ ಪಾಂಡಿತ್ಯವುಳ್ಳವರಾಗಿದ್ದು ಜ್ಞಾನಕಾಂಡವೆನಿಸಿದ ಉಪನಿಷತ್ತುಗಳನ್ನು ಮಥನಮಾಡಿ ಅವುಗಳಿಂದ ಅದ್ವೈತಾಮೃತವನ್ನು ಉದ್ಧರಿಸಿ ಭಾಷ್ಯರಚನೆ ಮಾಡಿ ಜನಸಾಮಾನ್ಯರನ್ನು ಅನುಗ್ರಹಿಸಿರುತ್ತಾರೆ. ವೇದಸಾರವೆನಿಸಿದ ಆದ್ವೈತಾಮೃತವು ಸ್ವಬುದ್ಧಿಚಾತುರ್ಯದಿಂದ ಪಡೆಯಲು ಶಕ್ಯವಾದುದಲ್ಲ. ಅದಕ್ಕೆ ಸಾಂಪ್ರದಾಯಿಕ ಶಿಕ್ಷಣ ಅತ್ಯಗತ್ಯವಾದುದು, ಆದ್ದರಿಂದಲೇ ಉಪ ನಿಷತ್ ಎಂಬ ಹೆಸರು ಸಾರ್ಥಕವಾಗಿದೆ. ಆಚಾರ್ಯೋಽಂತೇವಾಸಿನಂಮನು

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಸ್ತ್ರ..... ವಿಷಾ ವೇದೋಷ ನಿಷತ್, ತದ್ವಿಜ್ಞಾನಾರ್ಥಂ ಸ ಗುರು ಮೇವಾಭಿಗಚ್ಛೇತ್ "ಉಪದೇಕ್ಷ್ಯಂತಿತೇಜ್ಞಾನಂ" ಇತ್ಯಾದಿ ಪ್ರಮಾಣಗಳು ಸಂಪ್ರದಾಯಕ ಬದ್ಧ ಅಧ್ಯಾತ್ಮ ಶಿಕ್ಷಣವನ್ನೇ ಒತ್ತಿ ಒತ್ತಿ ಬೋಧಿಸುತ್ತವೆ. ಆದುದರಿಂದ ಶ್ರುತಿ, ಸ್ಮೃತಿ ಪುರಾಣ ಯುಕ್ತಿಗಳು ಹಾಗೂ ಸಂಪ್ರದಾಯಕ ಶಿಕ್ಷಣವು ಅತ್ಯಗತ್ಯ ವೆಂಬುದನ್ನು ಗಮನಿಸಬೇಕು.

ಈ ಶ್ರೀ ಶಾಂಕರದರ್ಶನ ಸಾರ ಎಂಬ ಕಿರು ಹೊತ್ತಿಗೆಯಲ್ಲಿ ಬಹಳ ಹಿಂದಿನಿಂದ ಗುರು ಶಿಷ್ಯ ಪರಂಪರೆಯಾಗಿ ಹಾಗೂ ಸಾಂಪ್ರದಾಯಕವಾಗಿ ರುವ ಕೆಲವು ಸೂಕ್ಷ್ಮವೂ ಸುಲಭ ಗ್ರಾಹ್ಯವೂ ಅಲ್ಲದ ವಿಷಯಗಳಾದ ಅವ್ಯಕ್ತ, ಮೂಲ ಪ್ರಕೃತಿ ಜೀವ, ಈಶ್ವರ, ಶುದ್ಧ ಬ್ರಹ್ಮ ಸೃಷ್ಟಿ ಮುಂತಾದ ಅತ್ಯಂತ ಗ್ರಾಹ್ಯವಾದ ವಿಷಯಗಳನ್ನು ಶ್ರುತಿ, ಸ್ಮೃತಿ ಮತ್ತು ಪತಂಜಲಿ ಭಾಷ್ಯ ಗಳ ಶಾಂಕರ ಭಾಷ್ಯ ಸಾಯಣಭಾಷ್ಯ ಪಂಕ್ತಿಗಳನ್ನೇ ಆಧಾರವಾಗಿ ತೋರಿಸಿ ತತ್ವಾರ್ಥವನ್ನು ನಿರ್ಣಯಿಸಿ. ಶಂಕರ ಸಿದ್ಧಾಂತವನ್ನು ಮಾತೃಭಾಷೆಯಾ ಕನ್ನಡದಲ್ಲಿ ಪ್ರತಿಪಾದಿಸಲಾಗಿದೆ. ಅಲ್ಲದೆ ವೇದಾಂತ ಜಿಜ್ಞಾಸೆಗೆ ಅಧಿಕಾರಿ ಗಳನ್ನು ನಿರ್ಣಯಿಸಿ ತಿಳಿಸಿ ಮಂದ ಮಧ್ಯಮಾಧಿಕಾರಿಗಳಿಗೆ ಕರ್ಮೋಪಾಸನೆ ಗಳ ಅಗತ್ಯವನ್ನು ಪ್ರತಿಪಾದಿಸುವುದರ ಮೂಲಕ ಈ ಪ್ರಪಂಚಕ್ಕೆ ವ್ಯಾವಹಾರಿಕ ಸತ್ಯವನ್ನು ಒತ್ತಿ ಹೇಳಲಾಗಿದೆ. ಅಲ್ಲದೆ ಸುಕೃತ ಕರ್ಮವಿಪಾಕವನ್ನು ನರ ಜನ್ಮ ಶ್ರೇಷ್ಠತೆ, ಜ್ಞಾನ ಶ್ರೇಷ್ಠತೆ ಜೀವನ್ಮುಕ್ತಿವಿವೇಕ ಮುಂತಾದ ಅನೇಕ ವಿಷಯಗಳನ್ನು ಪ್ರತಿಪಾದಿಸಲಾಗಿದೆ,

ವಿದ್ವಾನ್ ಎಸ್. ವಿ. ಶ್ಯಾಮ ಭಟ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಲೇಖಕರ ಮುನ್ನುಡಿ ಮತ್ತು ಕೃತಜ್ಞತಾ ನಿವೇದನೆ

ಶ್ರೀ ಶಂಕರಭಗವತ್ಪಾದರ ದರ್ಶನದ ವಿಷಯವನ್ನು ಸಾರಪಾಗಿ ಹಿಡಿದು ಕನ್ನಡದಲ್ಲಿ ಬರೆದು ಪ್ರಕಾಶ ಪಡಿಸಿದೆ. ಈ ಗ್ರಂಥಕ್ಕೆ ಶ್ರೀ ಶಾಂಕರ ದರ್ಶನ ಸಾರವೆಂದು ಹೆಸರಿಟ್ಟಿದೆ. ದರ್ಶನ ವೆಂದರೆ, ಸಾಮಾನ್ಯವಾಗಿ ಪ್ರತ್ಯಕ್ಷ ಜ್ಞಾನವೆಂದರ್ಥ, ಪರಮ ಮುಕ್ತಿಗೆ ಸಾಧನವಾದ ದರ್ಶನ, ಆತ್ಮ ಸ್ವರೂಪ ತತ್ವ ಸಾಕ್ಷಾತ್ಕಾರವೆಂಬುದೇ ವಿಶೇಷಾರ್ಥ, ಅದ್ವಿತೀಯವಾದ ಪ್ರತ್ಯಗಭಿನ್ನ ಬ್ರಹ್ಮ ಸಾಕ್ಷಾತ್ಕಾರವು ವೇದ ವೇದಾಂತಗಳ ಸಿದ್ಧಾಂತ ವಿರುವುದು, ಭಗವದ್ಗೀತಾ, ಮಹಾ ಭಾರತಗಳಲ್ಲೂ ಈ ದರ್ಶನವೇ ಮುಕ್ತಿಸಾಧನವೆಂಬುದು ಕಂಡು ಬಂದಿದೆ, ಷಡ್‌ದರ್ಶನಗಳಲ್ಲಿ ಶಾಂಕರ ದರ್ಶನವೇ ಕೊನೆಯದು, ಇದರ ಮುಂದೆ ಮತ್ತೊಂದು ದರ್ಶನವಿಲ್ಲ. ಬೇಕೂ ಇಲ್ಲ. ಆಚಾರ್ಯರ ಪರಂಪರೆಯಲ್ಲಿ ಶ್ರೀ ನಾರಾಯಣನಿಂದ ಆರಂಭಿಸಿ ಗೌಡಪಾದ ಗೋವಿಂದ ಭಗವತ್ಪಾದರು ಶ್ರೀ ಶಂಕರಾಚಾರ್ಯರು ಬಂದಿರುವ ಗುರು ಶಿಷ್ಯ ಪರಂಪರೆಯಲ್ಲಿ, ಇದ್ದು ಶ್ರೀ ಸುರೇಶ್ವರಾಚಾರ್ಯ ಮೊದಲಾದವರಿಗೂ ಮಧ್ಯಕಾಲದ ಶ್ರೀ ವಿದ್ಯಾತೀರ್ಥರು, ಭಾರತೀತೀರ್ಥರು ಶ್ರೀ ವಿದ್ಯಾರಣ್ಯರು, ಶ್ರೀ ಸಾಯಣಾಚಾರ್ಯರೂ ಮೊದಲಾದ ಪ್ರಸಿದ್ಧ ಆಚಾರ್ಯರಿಗೂ ಹರಿದು ಬಂದ ಗುರುವಂಶದಲ್ಲೇ ನಿಜವಾದ ಸಂಪ್ರದಾಯವೇ ಇದ್ದು ಅಪಿಲ ಭಾರತದ ವಿದ್ವಾಂಸರಿಂದ ಪುರಸ್ಕರಿಸಲ್ಪಟ್ಟಿದೆ. ಇದಕ್ಕೆ ವಿರುದ್ಧವಾದ ಸಂಪ್ರದಾಯವನ್ನು ದರ್ಶನ ವಿಷಯಕ್ಕೆ ಸತ್ಯಾನ್ವೇಷಿಗಳು ಸ್ವೀಕರಿಸಬೇಕಾದ ಅಗತ್ಯವಿಲ್ಲ, ಈ ಸಂಪ್ರದಾಯವನ್ನೇ ಚತುರಾಮ್ನಾಯ ಪೀಠದ ಗುರುಗಳು ಅನುಸರಿಸಿ ಪರಿಪಾಲಿಸುತ್ತಿರುವರು. ನಾವೂ ಅದನ್ನೇ ಅನುಸರಿಸಿ ಬರೆದಿರುವ ಈ ಲೇಖನದಲ್ಲಿ ಜೀವ ಈಶ್ವರ, ಮಾಯೆ ಅವಿದ್ಯೆ ಇತ್ಯಾದಿ ವಿಚಾರವನ್ನು ತಿಳಿಸುತ್ತಾ ದ್ವೈತ - ಅದ್ವೈತ ಇವುಗಳ ಸ್ಥಾನ ಮಾನಗಳನ್ನು ಅಧಿಕಾರಿ ಭೇದೇನ ಪರಿಪಾಲಿಸುತ್ತಾ, ಮಾನವನ ಸೃಷ್ಟಿ, ಜೀವರ ಜನ್ಮ, ಜನ್ಮಾಂತರ ಸಂಸಾರ ಬಂಧ, ಮುಕ್ತಿ ಪರಮಮುಕ್ತಿ ಸ್ವರೂಪ, ಅದರ ಸಾಧನ ಇವು

CC-O. In Public Domain. Digitized by eGangotri

ಗಳನ್ನು ಭಗವತ್ಪಾದರೂ ಉಪದೇಶಿಸಿದಂತೆಯೇ ಕನ್ನಡ ನಾಡಿನ ಜನ ಸಾಮಾನ್ಯರು ತಿಳಿಯಲು ಅನುಕೂಲವಾಗುವಂತೆ ಯತ್ನಿಸಿರುತ್ತೆ. ಬೆಂಗಳೂರಿನಲ್ಲಿ ಒಂದು ಸಂದರ್ಭದಲ್ಲಿ ದರ್ಶನ ಕೊಟ್ಟ ಮಹನೀಯರಾದ ಯಡತೊರೆ ಶ್ರೀ ಜಗದ್ಗುರು ಮಹಾಸಂಸ್ಥಾನದ ಪೀಠಾಧಿಪತಿಗಳು ಶ್ರೀ ಶ್ರೀ ಗಣಪತಿ ಭಾರತಿ ಸ್ವಾಮಿಗಳು ಈ ಪುಸ್ತಕವನ್ನು ಪ್ರಕಾಶ ಪಡಿಸಲು ಸಂಪೂರ್ಣ ಉದಾರ ಸಹಾಯ ಮಾಡಲು ಸಂತೋಷದಿಂದ ಒಪ್ಪಿ ಅನುಗ್ರಹಿಸಿರುತ್ತಾರೆ. ಶ್ರೀಗಳವರ ಸಹಾಯದಿಂದ ಮುದ್ರಿಸಿ ಪ್ರಕಟಿಸಲು ನನಗೆ ಸಹಾಯಕರಾಗಿ ವೇ। ಬ್ರ। ಶ್ರೀ ವಿದ್ವಾನ್ ಎಸ್. ವಿ. ಶಾಮಭಟ್ಟರು ಲೇಖನದಲ್ಲಿ ಅವಶ್ಯವಿದ್ದ ಸ್ಥಳಗಳಲ್ಲಿ ತಿದ್ದುಪಡಿ ಮಾಡಿ ಶುದ್ಧಿಗೊಳಿಸಿ ಉಪಕರಿಸಿರುತ್ತಾರೆ.

ಅಲ್ಲದೇ ಮುದ್ರಣ ಮಾಡಿದ ಪ್ರತಿಗಳನ್ನು ಅಮೂಲಾಗ್ರ ಶೋಧನೆ ಮಾಡಿ ಕೊಟ್ಟು ತುಂಬಾ ಸಹಾಯ ಮಾಡಿದವರು ನಮ್ಮ ಆಪ್ತರು ವೇ। ಬ್ರಂ। ಶ್ರೀ। ವಿದ್ವಾನ್ ಎಸ್. ಎ. ರಾಮಚಂದ್ರ ಭಟ್ಟರು ಎರೆಡನೆಯವರು. ಈ ಇಬ್ಬರೂ ವಿದ್ವಾಂಸರೊಗಳಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿರುತ್ತೇನೆ. ಶ್ರೀ ಶ್ರೀಗಳವರು ಪೂರ್ಣ ಉದಾರ ಸಹಾಯವನ್ನು ಕೊಟ್ಟಿದ್ದಕ್ಕೆ ಚರಮಣಿ ಯಾಗಿರುತ್ತೇನೆ. ಶ್ರೀ ಶ್ರೀಗಳವರು ಪ್ರಕಾಶ ಪಡಿಸಿದೆ ಈ ಗ್ರಂಥ ರತ್ನವು ಕನ್ನಡ ನಾಡಿನ ಜನರು ತೆಗೆದುಕೊಳ್ಳಲು ಮುಂದೆ ಬಂದು ಶ್ರೀ ಶಾಂಕರದರ್ಶನ ಸಾರವನ್ನು ಗ್ರಹಿಸಿ, ಸಾಂಪ್ರದಾಯಿಕವಾದ ಸಾಧನೆಗಳಲ್ಲಿ ಪ್ರವರ್ತಿಸಿ ಶ್ರೀ ಶಂಕರರ ಪೂರ್ಣಾನುಗ್ರಹಕ್ಕೆ ಪಾತ್ರರಾಗಿ ಶ್ರೇಯಸ್ಸನ್ನು ಹೊಂದಲೆಂದು ಹಾರೈಸುತ್ತೇನೆ.

ಮತ್ತು ಈ ಗ್ರಂಥವನ್ನು ಮುದ್ರಣಮಾಡಿ ಕೊಟ್ಟವರು ಮೈತ್ರಿ ಪ್ರಿಂಟರ್ಸ್ ಮತ್ತು ಬೈಂಡರ್ಸ್‌ನ ಮಾಲೀಕರಾದ ಶ್ರೀ॥ ಸತ್ಯನಾರಾಯಣ ಶಾಸ್ತ್ರಿಗಳಿಗೂ ನಾನು ಕೃತಜ್ಞನಾಗಿರುತ್ತೇನೆ.

ಇಂತಿ

ವಿದ್ವಾನ್ ಕೆ. ಕೃಷ್ಣ ಜೋಯಿಸ್

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯಾನುಕ್ರಮಣಿಕೆ

	ಪುಟ
ಶ್ರೀ ಗುರುದೇವತಾ ಪ್ರಾರ್ಥನೆ.	1
ಪರಬ್ರಹ್ಮ ಸ್ವರೂಪ	2
ಶಾಸ್ತ್ರವೇ ಪ್ರಮಾಣ	5
ಅನಾದಿ ಸಿದ್ಧವಸ್ತುಗಳು ಆರು ಮತ್ತು ಪ್ರಮಾಣ	
ಸೃಷ್ಟಿಯು ಸತ್ಯಾಸತ್ಯತೆಯ ಬೋಧನಾಕ್ರಮ	13
ಪರಾಪರಾಶಕ್ತಿಗಳ ಮೂಲಕವಾಗಿಯೇ	
ಪರಬ್ರಹ್ಮವು ಜಗತ್ತಿಗೆ ಕಾರಣ	15
ಮೂಲಾ ವಿದ್ಯೆಯೇ ಮಾಯೇ ಎಂಬುದು ವೇದದ ನಿರ್ಣಯ	18
ನಾಸದಾಸೀಯ ಸೂಕ್ತದ ಆರ್ಥ	21
ಮಾಯಾ ಶಬ್ದಾರ್ಥ ವಿವೇಚನೆ	22
ಮಾಯೇ ಹುಟ್ಟಿದ್ದಲ್ಲ. ಅನಾದಿ ಕಲ್ಪಿತ	25
ಮೊದಲು ಜೀವ ಕಲ್ಪನೆ - ಅನಂತರ ಇತರ ಕಲ್ಪನೆಗಳು	28
ಜನ್ಮಾಂತರಕ್ಕೆ ಕಾರಣ, ಅವಿದ್ಯೆ–ಕಾಮ-ಕರ್ಮ. ವಾಸನೆ	30
ಕರ್ಮ ವಿಪಾಕ	36

ಶ್ರೀ ಶಂಕರ ದರ್ಶನಸಾರ ಭಾಗ ೨

ಪ್ರಜಾಪತಿ ಮನುವಿನಿಂದ ಸೃಷ್ಟಿ	44
ಪಂಚತನ್ಮಾತ್ರಗಳ ವಿವರಣೆ	47
ಅವಿದ್ಯೆಯ ಸ್ವರೂಪ ಲಿಂಗ ಶರೀರವಿರುವ ಸ್ಥಾನ	54
ಮತ್ತು ಸ್ವಪ್ನ ವೃತ್ತಿಗಳು	
ಮನುಷ್ಯನ ಜನ್ಮದ ಬಗೆ	57
ಅಹಂ ಮಮ ಎಂಬ ಅಧ್ಯಾಸವು ಸಂಸಾರದ ಬೀಜ	66

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನದಿಂದಲೇ ಮೋಕ್ಷ 69
ಆತ್ಮ ಭೇದ ಜ್ಞಾನವು ಎಂದಿಗೂ ಮೋಕ್ಷಕ್ಕೆ ಕಾರಣವಲ್ಲ 71
ಮುಮುಕ್ಷಗಳಿಗೆ ಅದ್ವೈತ ತತ್ವದ ಬೋಧನ ಕ್ರಮ 81
ಅದ್ವೈತವೆಂದರೇನು? 84
ದ್ವೈತವು ಮಿಥ್ಯೆ ಪರಮಾರ್ಥವಲ್ಲ 90
ಜೀವನ್ಮುಕ್ತಿಯು 99

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಾಂಕರದರ್ಶನಸಾರ

ಶ್ರೀ ಗುರುದೇವತಾಪ್ರಾರ್ಥನೆ

ವಿದ್ಯೋದಯಪ್ರಚಯಯೋಃ ಅಂತರಾಯೋಪಶಾನ್ತಯೇ ।
ವಿದ್ಯಾಗಣಪತಿಂ ವನ್ದೇ ವಿಘ್ನಾದ್ರಿಶಿಖರೋದ್ಭಿದಮ್‌॥ ೧

ಪುಂಡರೀಕಾಸನಾಸೀನಾಂ ಪುಂಡರೀಕೋಪಮಾನನಾಮ್‌ ।
ಪುಂಡರೀಕವಿಶಾಲಾಕ್ಷೀಂ ಪುಂಡರೀಕಾಚ್ಛವಿಗ್ರಹಾಮ್‌॥ ೨

ವಿದ್ಯಾಮುದ್ರಾಮುಕ್ಷನಾಲಾಂ ಪೀಯೂಷಘಟಕಾಂ ತಥಾ ।
ಪುಸ್ತಕಂ ಹಸ್ತಕಮಲೈಃ ಬಿಭ್ರಾಣಾಂ ನೌಮಿಶಾರದಾಮ್‌॥ ೩

ಶಂಕಾರೂಪೇಣ ಲೋಕಸ್ಯ ಚಿತ್ತಂ ಪಂಕೀಕೃತಂ ಯಯಾ ।
ಕಂಕರೀ ಯಸ್ಯ ಸಾ ಮಾಯಾ ಶಂಕರಾಚಾರ್ಯಮಾಶ್ರಯೇ॥ ೪

ವನ್ದೇ ಚಿಂತಿತಮಾತ್ರೇಣ ಚಿಂತಿತಾರ್ಥಪ್ರಸಾಧನಮ್‌ ।
ಯಸ್ಯಾನುಗ್ರಹತೋಽನೋಘಾತ್‌ ತಂ ಗುರುಂ ಚಂದ್ರಶೇಖರಮ್‌॥ ೫

ವಿದ್ಯಾತಪಃಶ್ರಿಯಾತ್ಯರ್ಥಂ ಸಮುಜ್ಜ್ವಲಿತ ವಿಗ್ರಹಮ್‌ ।
ವಿದ್ಯಾತಪೋನಿಧಿಂ ವನ್ದೇ ವಿದ್ಯಾತೀರ್ಥಂ ನವಂ ಗುರುಮ್‌॥ ೬

ಕರಾಬ್ಜಸಂಪ್ರಸೂತಂ ಚ ವಿದ್ಯಾತೀರ್ಥಂಜಗದ್ಗುರೋಃ ।
ಗುರುಂ ಚ ಭಾರತೀತೀರ್ಥಂ ವಿದ್ಯಾನಿಧಿಮುಪಾಶ್ರಯೇ॥ ೭

ವಿದ್ಯಾಕೀರ್ತಿಶ್ರಿಯಾತ್ಯರ್ಥಂ ವಿರಾಜನ್ತಂ ತಪಃಶ್ರಿಯಾ ।
ದಕ್ಷಿಣಾಮ್ನಾಯಪೀಠೇಽದ್ಯ ಭಾರತೀತೀರ್ಥಮಾಶ್ರಯೇ॥ ೮

CC-O. In Public Domain. Digitized by eGangotri

ವಿದ್ಯಾನಿಧಿಂ ಪಂಡಿತರಾಜನೇಕ–
ಮಾಸ್ಥಾನವಿದ್ವನ್ಮಣಿ ಭೂಷಣಂ ಚ ।
ವಿದ್ವದ್ಗಜಾನಾಂ ಮೃಗರಾಜಮೇನಂ
ಶ್ರೀವೆಂಕಟೇಶಾಪ್ವಯಶಾಸ್ತ್ರಿಪಾದಮ್॥ ೯

ಮೀಮಾಂಸಯೋಃ ಪ್ರಾಚ್ಯನಯೇ ಚ ನವ್ಯೇ
ನ್ಯಾಯೇ ಪರಂ ವಾಕ್ಪತಿಮೇವಸಾಕ್ಷಾತ್ ।
ವಿದ್ವತ್ಸಭಾಯಾಂ ಪ್ರತಿವಾದಿನಾಂ ಚ
ಭಯಂಕರಂ ತಂ ಗುರುಮಾನತೋಽಸ್ಮಿ ॥

ಪರಬ್ರಹ್ಮನ ಸ್ವರೂಪ

ಅತಃಪರಂಬ್ರಹ್ಮ ಸಪದ್ವಿತೀಯಂ ವಿಶುದ್ಧವಿಜ್ಞಾನಘನಂ ನಿರಂಜನಮ್।
ಪ್ರಶಾಸ್ತನೂದ್ಯನ್ತವಿಹೀನ ಮಕ್ರಿಯಂ ನಿರನ್ತರಾನಂದರಸಸ್ವರೂಪಮ್॥ ೧

ನಿರಸ್ತಮಾಯಾಕೃತಸರ್ವಭೇದಂ
ನಿತ್ಯಂ ಧ್ರುವಂ ನಿಷ್ಕಲಮಪ್ರಮೇಯಮ್।
ಅರೂಪಮವ್ಯಕ್ತಮನಾಖ್ಯಮವ್ಯಯಂ
ಜ್ಯೋತಿಃ ಸ್ವಯಂ ಕಿಂಚಿದಿದಂ ಚಕಾಸ್ತಿ ॥

ಜ್ಞಾತೃಜ್ಞಾನಜ್ಞೇಯ ಶೂನ್ಯಂ ಅನಂತಂ ನಿರ್ವಿಕಲ್ಪಕಮ್।
ಕೇವಲಾಖಂಡ ಚಿನ್ಮಾತ್ರಂ ಪರಂ ತತ್ತ್ವಂ ವಿದುರ್ಬುಧಾಃ ॥
ಅಹೇಯಮನುಪಾದೇಯಂ ಮನೋವಾಚಾಮಗೋಚರಮ್ ।
ಅಪ್ರಮೇಯಮನಾದ್ಯನ್ತಂ ಬ್ರಹ್ಮಪೂರ್ಣಂ ಮಹನ್ಮಹಃ ॥

(ವಿವೇಕ ಚೂಡಾಮಣೇಃ)

Sri Vidyabharathi Book Centre, Sringeri

CC-O. In Public Domain. Digitized by eGangotri

'ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ' ಎಂದು ಉಪನಿಷತ್ತು ಹೇಳಿದಂತೆ ಪರಬ್ರಹ್ಮಸ್ವರೂಪವನ್ನು ಮೇಲಿನ ಶ್ಲೋಕಗಳಲ್ಲಿ ಶ್ರೀಶಂಕರರು ವಿವರವಾಗಿ ವರ್ಣಿಸಿರುವರು. ಅವುಗಳ ಸಂಕ್ಷಿಪ್ತವಾದ ಅರ್ಥ, ಯಾವುದು ಸಚ್ಚಿದಾನಂದರೂಪವಾಗಿದ್ದು, ಹುಟ್ಟು ನಾಶಗಳಿಲ್ಲದೆಯೂ ಕ್ರಿಯೆಯೊಂದು ಇಲ್ಲದೆ ನಿರ್ವಿಕಾರವಾಗಿಯೂ ಇರುವುದೋ ಮತ್ತು ಮಾಯೆಯಿಂದ ಸೃಷ್ಟಿಯಾದ ಜಗತ್ತಿನ ಸಮಸ್ತ ಭೇದಗಳೂ ನಿಜವಾಗಿ ತನ್ನಲ್ಲಿರದೆ ಅದ್ವಿತೀಯವಾಗಿದೆಯೋ ಸಕಲ ಸಂಸಾರದ ಸುಖ ದುಃಖಗಳಭೋಗಗಳೇನೂ ಇಲ್ಲದೆಯೇ, ಬಾಹ್ಯ ಭೌತಿಕಾಕಾರವೇನೂ ಇರದೇ, ಅಚಿಂತ್ಯ ಮತ್ತು ಇಂದ್ರಿಯಗಳಿಗೆ ಗೋಚರವಾಗದೇ ಇದೆಯೋ, ಆದರೆ ಸ್ವಯಂ ಪ್ರಕಾಶವಾಗುತ್ತಾ ಮತ್ತೊಂದನ್ನು ಪ್ರಕಾಶಪಡಿಸುವುದೋ, ಅಂತಹ ಪರಂಜ್ಯೋತಿಯೇ ಪರಬ್ರಹ್ಮ ಮತ್ತು ದೇಶದ ಮಿತಿ, ಕಾಲದ ಮಿತಿಯಿಲ್ಲದೆ, ತನಗೆ ಬೇರ್ಪಟ್ಟದ್ದು ಯಾವುದೊಂದು ಸಜಾತೀಯ, ಅಥವಾ ವಿಜಾತೀಯವಾದ ಭೇದ ಸ್ವಗತ ಭೇದವೂ ಇರದೆ ಅದ್ವಿತೀಯವಾಗಿದೆಯೋ, ಬಿಡುವುದಕ್ಕೂ ನಾವು ಹಿಡಿಯುವುದಕ್ಕೂ ಬಾರದೋ, ಮತ್ತು ಮನೋವಾಚಾ ಅಗೋಚರವಾಗಿ, ಸ್ವಾನುಭವಮಾತ್ರದಿಂದ ತಿಳಿಯಬಹುದೋ, ಅಂತಹ ಅಖಂಡಾನಂದ ಚೈತನ್ಯ ಮಾತ್ರ ಸ್ವರೂಪವುಳ್ಳದ್ದೇ ಪರಬ್ರಹ್ಮ, ಇದೇ ಸರ್ವವ್ಯಾಪಕವಾಗಿ ಪೂರ್ಣವಾಗಿರುವುದು, ಈ ರೀತಿಯಾಗಿ ಸಕಲ ಶ್ರುತಿಗಳನ್ನು ಮಥನಮಾಡಿ ಅನುಭವಿಸಿದ ಸ್ವರೂಪವಿದು.

ಅಪರಬ್ರಹ್ಮ ಈಶ್ವರ ಹಿರಣ್ಯಗರ್ಭ–

ಪರಬ್ರಹ್ಮವೇ ಮಾಯಾಶಕ್ತಿಯಿಂದ ಜಗತ್ತನ್ನು ಸೃಷ್ಟಿಸಿ, ರಕ್ಷಿಸಿ, ಸಂಹರಿಸುವಾಗ ಅಪರಬ್ರಹ್ಮ ಅಥವಾ ಈಶ್ವರ ಎಂದೂ ಹೇಳಲ್ಪಡುವುದು. ಪರಬ್ರಹ್ಮನಿಗೂ ಅಪರಬ್ರಹ್ಮನಿಗೂ ಹೆಚ್ಚಿನ ಅಂತರವಿಲ್ಲ, ಅತ್ಯಂತ ಭೇದವಿಲ್ಲ. ಅವುಗಳಿಗೆ ತಾದಾತ್ಮ್ಯವನ್ನು ಒಪ್ಪುವರು.

CC-O. In Public Domain. Digitized by eGangotri

ಶ್ರೀ ಶಂಕರರ ವಚನ:–

"ದ್ವಿರೂಪಂ ಹಿ ಬ್ರಹ್ಮ ಅವಗಮ್ಯತೇ. ನಾಮರೂಪ ವಿಕಾರಭೇದೋ-ಪಾಧಿವಿಶಿಷ್ಟಂ, ತದ್ವೀಪರಿತಂ ಚ ಸರ್ವೋಪಾಧಿವಿವರ್ಜಿತಮ್"

1 **ಯತ್ರ ಹಿ ದ್ವೈತ ಮಿವ ಭವತಿ .....**

2 **ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್.....**

3 **ನಿಷ್ಕಲಂ ನಿಷ್ಕ್ರಿಯಂ ಶಾನ್ತಂ----------**

4 **ಅಸ್ಥೂಲಮನಣು----------**

5 **ನೇತಿ ನೇತಿ ನ್ಯೂನಮನ್ಯತ್ ಸ್ಥಾನಂ ಸಂಪೂರ್ಣಮನ್ಯತ್**

ಇತಿ ಚೈವಂ ಸಹಸ್ರಶೋ ವಿದ್ಯಾವಿದ್ಯಾದಿವಿಷಯ ಭೇದೇನ ಬ್ರಹ್ಮಣೋ ದ್ವಿರೂಪತಾಂ ದರ್ಶಯನ್ತಿ ವಾಕ್ಯಾನಿ।

ಧಾತ್ಪರ್ಯಾರ್ಥ : ಬ್ರಹ್ಮವು ಎರಡು ರೂಪವುಳ್ಳದ್ದು. ನಾಮರೂಪಗಳ (ಮಾಯೆಯ) ವಿಕಾರವಾದ ಪಂಚಭೂತಾದಿಗಳ ಭೇದವೆಂಬ ಉಪಾಧಿಯಿಂದ ಕೂಡಿರುವುದು ಅಪರಬ್ರಹ್ಮ ಇದಕ್ಕೆ ವಿರುದ್ಧವಾದದ್ದು ಎಲ್ಲಾ ಉಪಾಧಿಗಳಿಂದ ಬಿಡಲ್ಪಟ್ಟಿರುವದು ಶುದ್ಧಪರಬ್ರಹ್ಮ. ನಾಮರೂಪಗಳಿಲ್ಲವೂ ಜೀವಾತ್ಮನಿಂದ ಅವಿದ್ಯೆಯಿಂದ ಅವಿದ್ಯಾದಶೆಯಲ್ಲಿ ಕಲ್ಪಿಸಿಕೊಂಡ ಉಪಾಧಿಗಳು. ಆದ್ದರಿಂದ ಇವುಗಳು ನಿಜವಾಗಿ ಬ್ರಹ್ಮನಲ್ಲಿಲ್ಲವೆಂದು ನೇತಿ ನೇತಿ. ಅಸ್ಥೂಲಮನಣು ಇತ್ಯಾದಿ ಮಂತ್ರಗಳಿಂದ ಬಹ್ಮವು ಬೋಧಿಸಲ್ಪಡುವುದು.

ಪೂಜೆ, ಉಪಾಸನೆ (ಧ್ಯಾನ)ಗಾಗಿ ವೇದವೇ ಕಲ್ಪಿಸಿ ಹೇಳಿರುವಾಗ ಅದೇ ಬ್ರಹ್ಮವು ಉಪಾಸನೆಗೆ ಯೋಗ್ಯವಾಗುವುದು. ಇದು ಸಗುಣ, ಸಾಕಾರ, ಸರ್ವಜ್ಞ, ಸರ್ವಶಕ್ತಿಯುಕ್ತಪರಮೇಶ್ವರ, ಇದರಂತೆ ಹಿರಣ್ಯಗರ್ಭ, ವಿರಾಟ್ ಎಂಬುವ ದೇವತಾಪುರುಷನು ಈಶ್ವರನಂತೆ ಪೂಜ್ಯ, ಉಪಾಸ್ಯ, ಇದನ್ನು ಅಪರಬ್ರಹ್ಮವೆಂದು, ಕಾರ್ಯಬ್ರಹ್ಮ ಎಂದೂ ಬ್ರಹ್ಮವಿದರು ಉದಾಹರಿಸಿದ್ದಾರೆ. **ಕಾರ್ಯಂ ಬಾದರಿ :** ಎಂದು ಬ್ರಹ್ಮಸೂತ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

"ಸಾಮೀಪ್ಯಾತ್ತು ತದ್ವ್ಯಪದೇಶಃ" (ಸೂತ್ರ ೮. ೪) ಎಂದಂತೆ ಬ್ರಹ್ಮ ಅತ್ಯಂತ ಹತ್ತಿರವಾಗಿ ಈ ಹಿರಣ್ಯಗರ್ಭನು ಇರುವುದರಿಂದ ಬ್ರಹ್ಮಪದದಿಂದ ಶಾಸ್ತ್ರದಲ್ಲಿ ಕರೆಯಲ್ಪಟ್ಟಿರುವನು. ಹತ್ತಿರ ಎಂದರೆ ತಾದಾತ್ಮ್ಯ ಸಂಬಂಧವು. ಈಶ್ವರನೇ ಹಿರಣ್ಯಗರ್ಭ ಸ್ವರೂಪದಲ್ಲಿ ಅಭಿವ್ಯಕ್ತನಾಗುವುದರಿಂದ, ತಾದಾತ್ಮ್ಯ ವನ್ನು ಹೇಳಿದೆ. ಆದರಿಂದ ಹಿರಣ್ಯಗರ್ಭನು ಹುಟ್ಟಿದ್ದರೂ ಬ್ರಹ್ಮ ಎಂದು ಹೇಳಲ್ಪಡುವನು.

ಏತಕ್ಕಾಗಿ ಈ ಭೇದ ?

ಮೋಕ್ಷಕ್ಕೆ ನೇರಾ ಉಪಯೋಗಿಯಾದ ಬ್ರಹ್ಮಜ್ಞಾನಕ್ಕಾಗಿ ಪರಬ್ರಹ್ಮವನ್ನು ಹೇಳಿದೆ. ಉಪಾಸನೆಗಾಗಿ ಅಪರಬ್ರಹ್ಮವನ್ನು ಹೇಳಿದೆ. ಇದರ ವಿಚಾರವನ್ನು ಮುಂದೆ ವಿಸ್ತಾರವಾಗಿ ತಿಳಿಸುವುದು.

ಶಾಸ್ತ್ರವೇ ಪ್ರಮಾಣ (ತರ್ಕದಿಂದ ತಿಳಿಯಲಾಗದು)

ಈ ಬ್ರಹ್ಮ ಅಥವಾ ಅಪರ ಬ್ರಹ್ಮ ಈ ಎರಡನ್ನು ತಿಳಿಸುವುದು ಶಾಸ್ತ್ರ : ಅಂದರೆ ನಾಲ್ಕು ವೇದಗಳು ಅದರೊಳಗಿನ ಉಪನಿಷತ್ತುಗಳು ತೈತ್ತರೀಯ ಐತರೇಯ ಛಾಂದೋಗ್ಯ, ಮುಂಡಕೋಪನಿಷತ್ತು ಮೊದಲಾದುವು. ಈ ಪ್ರಮಾಣವೇ ಆವುಗಳ ಸ್ವರೂಪವನ್ನು ನಿಜವಾಗಿರುವುದನ್ನು ತಿಳಿಸುವುದು. ಬೇರೆ ಪ್ರತ್ಯಕ್ಷ ಅನುಮಾನಾದಿ ಪ್ರಮಾಣದಿಂದ ತಿಳಿಯಲಾಗದು. **"ತಂತ್ವೌಪನಿಷದಂ ಪುರುಷಂ ಪೃಚ್ಛಾಮಿ"** ಎಂಬ ಶ್ರುತಿಯು ಉಪನಿಷತ್ತುಗಳಿಂದಲೇ ತಿಳಿಯುವುದೆಂದು ಹೇಳಿದೆ. ಅದು ತರ್ಕದಿಂಲೂ ತಿಳಿಯತಕ್ಕದ್ದಲ್ಲ.

ಶಬ್ದ ಸ್ಪರ್ಶರೂಪ ರಸ ಗಂಧಗಳಲ್ಲಿ ಯಾವುದೊಂದೂ ಇಲ್ಲದ್ದರಿಂದ ಚಕ್ಷುರಾದಿ ಪ್ರತ್ಯಕ್ಷ ಪ್ರಮಾಣದಿಂದ ತಿಳಿಯಲಾಗದು. ಸರಿಯಾಗಿ ವೇದ ಬಾಹ್ಯತರ್ಕಗಳಿಂದಲೂ ತಿಳಿಯಲಾಗದು, ಏಕೆಂದರೆ, ಅದನ್ನು ತಿಳಿಸುವ ಅನುಮಾಪಕ ಹೇತು ಯಾವುದೂ ಇಲ್ಲದ್ದು ಬ್ರಹ್ಮ ಅಸದೃಶ, ಅನುಪಮಾ ಆದ್ದರಿಂದಲೇ ಇನ್ನೊಂದರ ಹೋಲಿಕೆಯಿಂದಲೂ ಅದು ತಿಳಿಯುವುದಲ್ಲ. ಮತ್ತೇನೆಂದರೆ ಶಾಸ್ತ್ರದಿಂದಲೇ ಗುರು ಮುಖವಾಗಿ ತಿಳಿಯುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಟಸ್ಥಲಕ್ಷಣ ಮೂಲಕವಾಗಿ ಇದನ್ನು ತಿಳಿಯಬಹುದು. ಸಮಸ್ತ ಜಗತ್ತಿಗೂ ಆಗುವ ಸೃಷ್ಟಿಗೂ, ರಕ್ಷಣೆಗೂ, ಅದರ ಲಯಕ್ಕೂ ಕಾರಣವಾದದ್ದು ಬ್ರಹ್ಮ, ಇದರ ಸ್ವರೂಪವು ಯಾವತ್ತೂ ಇರುವ ಲಕ್ಷಣ ಸಚ್ಚಿದಾನಂದ ರೂಪವು.

೧ ಯತೋ ವಾ ಇಮಾನಿ ಭೂತಾನಿ ಜಾಯಂತೇ ಇತ್ಯಾದಿ
೨ "ಸತ್ಯಂ ಜ್ಞಾನಮನಂತಂ ಬ್ರಹ್ಮ" ವಿಜ್ಞಾನಘನಾನಂದಂ ಬ್ರಹ್ಮ
೩ ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ" ಇತ್ಯಾದಿ

ಉಪನಿಷತ್ತುಗಳು ಪ್ರಮಾಣ, ಗೀತೆಯೂ ಪ್ರಮಾಣ, ವೇದಗಳಿಗೆ ಅವಿರುದ್ಧವಾದ ಪುರಾಣ, ಭಾರತ, ರಾಮಾಯಣಾದಿ ಇತಿಹಾಸಗಳು ಬ್ರಹ್ಮ ಮತ್ತು ಧರ್ಮ ಅಧರ್ಮ ಇತ್ಯಾದಿ ವಿಷಯಗಳ ನಿರ್ಣಯಕ್ಕೆ ಪ್ರಮಾಣವು. ಇದರಂತೆ ಧರ್ಮಶಾಸ್ತ್ರ (ಸ್ಮೃತಿಗಳು) ಪ್ರಮಾಣ. ಗೀತೆ-ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ|

ಜೀವರ ನಿಜವಾದ ಆತ್ಮ ಸ್ವರೂಪವನ್ನು ಯಾವ ತರ್ಕಶಾಸ್ತ್ರವಾಗಲಿ ಸಾಂಖ್ಯ ಶಾಸ್ತ್ರವಾಗಲಿ ಸರಿಯಾಗಿ ತಿಳಿಸಿಲ್ಲ.

ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ
ಸರ್ವಭೂತಾನ್ತರಾತ್ಮಾ ಕರ್ಮಾಧ್ಯಕ್ಷಃ ಸರ್ವಭೂತಾಧಿ-
ವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ
(ಶ್ವೇ ಉಪನಿಷತ್ತು)

ಅರ್ಥ : ಒಬ್ಬನೇ ಆತ್ಮ ಸ್ವಯಂ ಪ್ರಕಾಶನೂ, ಸಮಸ್ತ ಪ್ರಾಣಿಗಳಲ್ಲೂ ನೆಲಸಿರುವನು. ಆದರೂ ಒಳಗಿರುವ ನಿಧಿಯಂತೆ ನಿಗೂಢ ಅಂದರೆ ಮಾಯೆಯೆಂಬ ಅಜ್ಞಾನದಿಂದ ಮುಚ್ಚಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ
ಎಂದಂತೆ ಮತ್ತು ಸರ್ವತ್ರವ್ಯಾಪಕ ಬ್ರಹ್ಮಾದಿ ಸ್ತಂಭ ಪರ್ಯಂತ ಪ್ರಾಣಿಗಳಿಗೂ ಆಂತರಾತ್ಮ, ಪಾಪ, ಪುಣ್ಯ ಕರ್ಮಗಳಿಗೆ ಸಾಕ್ಷಿ. ಸಮಸ್ತ ಪ್ರಾಣಿಗಳಿಗೂ ಆಶ್ರಯನು. ಇವನೇ ಸರ್ವ ಸಾಕ್ಷಿ, ಕರ್ತನಲ್ಲ. ನಿತ್ಯ ಚೈತನ್ಯ ಸ್ವರೂಪ ಮತ್ತು ನಿರ್ಗುಣ ಇದೇ ನಿಜವಾದ ಪರಮಾತ್ಮನ ಸ್ವರೂಪವು.

ನಿಜವಾದ ಈ ಆತ್ಮನು ಬ್ರಹ್ಮ– ಬೇರೆಯಲ್ಲ ಎಂದು 'ಅಯಮಾತ್ಮಾ ಬ್ರಹ್ಮ' ಎಂಬ (ಮಾಂಡೂಕ್ಯ) ಶ್ರುತಿ.

ಮುಮುಕ್ಷುವಾದ ಜಿಜ್ಞಾಸುವಿಗೆ ಮಾತ್ರ ಬ್ರಹ್ಮವಿಚಾರ ಮಾಡುವ ಅಧಿಕಾರ :

ಅಧಿಕಾರದ ಲಕ್ಷಣ, ನಿತ್ಯಾನಿತ್ಯ ವಿವೇಕ, ಇಹ ಪರಗಳಲ್ಲಿ ಇರುವ ವಿಷಯ ಭೋಗಗಳಲ್ಲಿ ವೈರಾಗ್ಯ ಶಮದಮಾದಿ ಗುಣಗಳು (ಆರು) ಕೇವಲ ಮೋಕ್ಷದ ಇಚ್ಛೆ ಈ ನಾಲ್ಕು ಸಾಧನಗಳು ಇರುವವನು ಬ್ರಹ್ಮವಿಚಾರಕ್ಕೆ ಅಧಿಕಾರಿ, ಬ್ರ. ಸೂ.೧) ಮತ್ತು ವೇದಾಂತವನ್ನು (ಉಪನಿಷತ್ತುಗಳನ್ನು) ಅಧ್ಯಯನ ಮಾಡಿರಬೇಕು. ದ್ವಿಜರಿಗೆ ಮಾತ್ರ ವೇದ ಮೂಲಕವಾಗಿ ವಿಚಾರ ಮಾಡುವ ಅಧಿಕಾರ, ವೇದಾಧ್ಯಯನವಿಲ್ಲದ ಸ್ತ್ರೀ ಶೂದ್ರರಿಗೆ ಭಾಗವತ, ಭಾರತ, ಅಧ್ಯಾತ್ಮರಾಮಾಯಣ ಇತ್ಯಾದಿ ಪ್ರಮಾಣಗಳ ಮೂಲಕ ವಿಚಾರ ಮಾಡಲು ಅಧಿಕಾರವಿದೆ. ದ್ವಿಜರಲ್ಲೂ ಯತಿಗಳಿಗೆ ಮುಖ್ಯಾಧಿಕಾರವು ಗೃಹಸ್ಥರಿಗೆ ಗೌಣಾಧಿಕಾರವು.

ವೇದಮೂಲಕಸ್ತು ನಾಸ್ತಿ ಅಧಿಕಾರಃ ಶೂದ್ರಾಣಾಮ್।
ಶ್ರಾವಯೇ ಚ್ಚತುರೋ ವರ್ಣಾನ್ ಕೃತ್ವಾ ಬ್ರಾಹ್ಮಣಮಗ್ರತಃ॥

ಸಂನ್ಯಾಸವನ್ನು ಸ್ವೀಕರಿಸಿದವನಿಗೆ ಕೇವಲ ಧ್ಯಾನಯೋಗ, ಮತ್ತು ತತ್ತ್ವ ವಿಚಾರಕ್ಕೆ ಅಧಿಕಾರವು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣ ಮುಚ್ಯತೇ॥ (ಗೀತೆ ೬)

ಶಮ ಎಂದರೆ ಕರ್ಮೋಪರತಿ ಸಂನ್ಯಾಸವೆಂದರ್ಥ. ಇದೇ ಯುಕ್ತ. ಅನವರತಧ್ಯಾನ, ತತ್ತ್ವವಿಚಾರಮಾಡಬೇಕಾದರೆ ಲೌಕಿಕಕರ್ಮ, ವೈದಿಕಕರ್ಮ ಗಳನ್ನು ಬಿಡಬೇಕಾಗುವುದು. ಬ್ರಹ್ಮಚಾರಿ ಗೃಹಸ್ಥ ವಾನಪ್ರಸ್ಥರಿಗೆ ಸ್ವಧರ್ಮಾ ಚರಣೆ ವಿಹಿತವಾದ್ದರಿಂದ ಅದು ಕರ್ತವ್ಯ ಅದು ಚಿತ್ತವಿಕ್ಷೇಪಕ್ಕೆ ಕಾರಣ ವಾಗುವುದು.

ಸಂನ್ಯಾಸ ಮಾಡಿದರೆ ವಿಕ್ಷೇಪವಾಗದು.

ಶಾಂಕರದರ್ಶನ ಸಾರ

ಓಂ ನಮೋ ಬ್ರಹ್ಮಾದಿಭ್ಯೋ ಬ್ರಹ್ಮವಿದ್ಯಾಸಂಪ್ರದಾಯಕರ್ತೃಭ್ಯೋ
ವಂಶ ಋಷಿಭ್ಯೋ ನಮೋ ಮಹದ್ಭ್ಯೋ ನಮೋ ಗುರುಭ್ಯಃ

ಶ್ರೀ ಶಂಕರ ಸಿದ್ಧಾಂತವು ಗುರುಶಿಷ್ಯಪರಂಪರೆಯಿಂದಲೇ ಉಪನಿಷತ್ತು ಗಳ ಆಧಾರದ ಮೇಲೂ, ಯುಕ್ತಿಗಳು ಮತ್ತು ಅನುಭವದ ಮೇಲೂ ಪ್ರತಿಷ್ಠಿತ ವಾಗಿದೆ. ವೇದಗಳೆಂಬ ಶಾಸ್ತ್ರವೇ ಪ್ರಮಾಣಗಳಲ್ಲಿ ಅಗ್ರಸ್ಥಾನವನ್ನು ಹೊಂದಿದೆ. ಬ್ರಹ್ಮ, ಜೀವ (ಆತ್ಮ) ಈಶ್ವರ ಪ್ರಕೃತಿ ಮಾಯಾಶಕ್ತಿ, ಹಿರಣ್ಯಗರ್ಭ ವಿರಾಟ್ ಅವ್ಯಾಕೃತ ಇತ್ಯಾದಿಯಾಗಿ ಉಪನಿಷತ್ತುಗಳಲ್ಲಿ ಹೇಳುವ ವಿಷಯಗಳು ಕೇವಲ ತರ್ಕದಿಂದ ಸಿದ್ಧವಾದುವುಗಳಲ್ಲ. ಇವು ಯಾವ ಇತರೆ ಶಾಸ್ತ್ರದಿಂದಲೂ ಪ್ರತಿ ಪಾದಿತವಾಗಿಲ್ಲ. ಇವು ವೇದಗಳಿಂದಲೇ ತಿಳಿಯುವುವು. ಅಲ್ಲದೇ ವೇದ ಮೂಲಕವಾದ ಭಾರತ, ಗೀತೆ, ಇತ್ಯಾದಿ ಸ್ಮೃತಿಗಳಿಂದಲೂ ತಿಳಿದು ಬರುವುದು. ಅದ್ವೈತ ದರ್ಶನ ದಲ್ಲಿ ಇಂತಹ ಪದಾರ್ಥಗಳನ್ನು ನಿರಾಧಾರವಾಗಿ ಯಾರೂ ಸ್ವಂತವಾಗಿ ಕಲ್ಪಿಸಿ ಹೇಳಿಲ್ಲ. ಆಧುನಿಕ ವಿಮರ್ಶಕರು ಮಾತ್ರ ಪ್ರಾಚೀನ ಟೀಕಾಕಾರರ ಮೇಲೆ ಇಲ್ಲದ ಸಲ್ಲದ ಆರೋಪಗಳನ್ನು ಮಾಡಿ ಪ್ರತಿಷ್ಠೆಗಳಿಸುವ ಹಂಬಲವುಳ್ಳವರಾಗಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

(ಪ್ರಕೃತಿ ಯೆಂಬ) ಮೂಲಾವಿದ್ಯಾದಿ ಪದಾರ್ಥಗಳನ್ನು ಸ್ವತಂತ್ರವಾಗಿ ಕಲ್ಪಿಸಿ ಭಾಷ್ಯಗಳಲ್ಲಿ ನುಗ್ಗಿಸಿರುವರೆಂದು ಆಪಾದಿಸಿರುವುದು, ಅತ್ಯಂತ ಶೋಚನೀಯ. ಸಂಪೂರ್ಣ ವೇದಗಳ ಅನಭ್ಯಾಸದ ದೋಷದಿಂದ ಹೀಗೆ ಆಪಾದಿಸಿರುವುದು.

ಪ್ರಕೃತ ಆನಾದಿಸಿದ್ಧ ವಸ್ತುಗಳು ಆರು, ಮತ್ತು ಪ್ರಮಾಣ

ಜೀವ ಈಶೋ ವಿಶುದ್ಧಾಚಿತ್ ತಥಾ ಜೀವೇಶಯೋರ್ಭಿದಾ।
ಅವಿದ್ಯಾ ತಚ್ಚಿತೋರ್ಯೋಗಃ ಷಡಸ್ಮಾಕಮನಾದಯಃ॥

ಎಂದು ಆದ್ವೈತವಲ್ಲಿ ಮೊದಲಿನಿಂದಲೂ ಪ್ರಸಿದ್ಧವಾಗಿರುವ ಅನಾದಿ ಪದಾರ್ಥಗಳು ಆರು. ಜೀವ, ಈಶ್ವರ, ಶುದ್ಧ ಚೈತನ್ಯ, ಅವಿದ್ಯೆ, ಜೀವೇಶ್ವರಭೇದ, ಚೈತನ್ಯ-ಅವಿದ್ಯೆಗಳ ಸಂಬಂಧ, ಇವು ಅನಾದಿಷಟ್ ಪದಾರ್ಥಗಳು, ಪ್ರಮಾಣ-ನ ಜಾಯತೇ ಮ್ರಿಯತೇ ವಾ ಕದಾಚಿತ್ ..... ಎಂಬುದು ಆತ್ಮನು ನಿತ್ಯ, ಅನಾದಿಯೆಂದು ಹೇಳುವುದು.

ಮಮೈವಾಂಶೋ ಜೀವಲೋಕೇ ಜೀವ ಭೂತಃ ಸನಾತನಃ ॥
ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ॥

ಎಂಬ ಗೀತೆಯು ಪ್ರಕೃತಿಯೂ (ಅವಿದ್ಯೆಯೂ) ಅನಾದಿ, ಪುರುಷನೂ (ಜೀವನೂ) ಅನಾದಿ ನಿತ್ಯವೆಂದು ಹೇಳಿದೆ. ನ ವಿದ್ಮತೇ ಆದಿಃ ಯಯೋಸ್ತೌ ಅನಾದೀ ಎಂದು ವಿಗ್ರಹ ಮಾಡಿ ಅವು ನಿತ್ಯವಾದುವೆಂದು ಭಾಷ್ಯದಲ್ಲಿ ನಿರ್ಣಯ ಮಾಡಿದೆ. ಆಧುನಿಕ ವಿಮರ್ಶಕರು ಮಾತ್ರ ಪ್ರಕೃತಿಯು ಅಧ್ಯಾಸ ವೆಂಬ ಅವಿದ್ಯೆಯಿಂದ ಹುಟ್ಟಿದ್ದೆಂದು ಅರ್ಥಮಾಡಿರುವರು. ಅದು ಭಾಷ್ಯ ವಿರುದ್ಧವೇ. ಅವಿದ್ಯಾಕಲ್ಪಿತೇ. ಎಂಬುದಕ್ಕೆ ಅವಿದ್ಯೆಯಿಂದ ಅನಾದಿಯಾಗಿ ಜೀವರಿಗೆ ತೋರುತ್ತವೆಯೆಂದೇ ಅರ್ಥವು, ಹುಟ್ಟಿಸಿದೆಂದು ಅರ್ಥವಲ್ಲ. ಪ್ರಕೃತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರುಷರಿಗೆ ಉತ್ಪತ್ತಿಯನ್ನು ಒಪ್ಪಿದರೆ ಇವು ಹುಟ್ಟುವ ಮುಂಚೆ ನಿಯಮ್ಯ ಗಳೇ ಇಲ್ಲವಾಗಿ ಈಶ್ವರನ ಈಶ್ವರತ್ವವೇ ಹೋಗಿ ಬಿಡುವುದೆಂದೂ, ಸಂಸಾರವು ನಿಮಿತ್ತವಿಲ್ಲದೆ ಬಂದಿದ್ದೆಂತಾಗಿ ಮೋಕ್ಷವೇ ಇಲ್ಲವಾಗಿ ಬಿಡುವು ದೆಂದೂ, ಇತ್ಯಾದಿ ದೋಷಗಳನ್ನು ಭಾಷ್ಯಕಾರರು ತೋರಿಸಿರುವರು. (ಬ್ರ. ಅ.ಶ್ಲೋ.೧೯)

ಈಶ್ವರನಂ ನಿತ್ಯವೆಂಬುದೂ ವೇದ ಸಿದ್ಧವಾದುದು

"ಏಷ ತ ಆತ್ಮಾ ಅನ್ತರ್ಯಾಮ್ಯಮೃತಃ" ಇತ್ಯಾದಿ (ಬೃ) ಶ್ರುತಿಯು **"ಸ ಕಾರಣಂ ಕರಣಾಧಿಪಾಧಿಪೋ ನ ತಸ್ಯ ಕಶ್ಚಿಜ್ಜನಿತಾ ನ ಚಾಧಿಪಃ" "ಯೋ ಮಾನುಜಮನಾದಿಂ ಚ" "ಸತ್ಯಂ ಜ್ಞಾನ ಮನನ್ತಂ ಬ್ರಹ್ಮ" ಅನಾದಿ ಮತ್ಪರಂ ಬ್ರಹ್ಮ"** ಎಂಬುದಾಗಿ ಶ್ರುತಿಗಳೂ ಮತ್ತು ಗೀತೆಗಳೂ ಶುದ್ಧ ಬ್ರಹ್ಮವನ್ನು ಅನಾದಿಯೆಂದು ಹೇಳಿವೆ. ''ಅನೇನ ಜೀವೇನಾತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ "ದ್ವಾಸುಪರ್ಣಾ ಸಯುಜಾ ಸಖಾಯಾ" **"ಮಾಯಿನಂ ತು ಮಹೇಶ್ವರಂ"** ಎಂದು ಮಾಯಾ (ಅವಿದ್ಯೆ– ಎಂಬ) ಮೂಲಪ್ರಕೃತಿಯು ಸಂಬಂಧವು ಈಶ್ವರನಿಗೆ ಅನಾದಿಯಾಗಿದೆ ಎಂಬು ದನ್ನು **"ಮಾಯಿನಂ"** ಎಂಬುದರಿಂದ ತಿಳಿಯು ಬಹುದು. ಮಾಯಾ ಶಕ್ತಿ ಯುಳ್ಳವನೇ ಮಾಯಿ, ಮಹಾಮಾಯಾವೀ ಎಂದು, ವಿಷ್ಣು ಸಹಸ್ರನಾಮ ದಲ್ಲೂ ತಿಳಿದಿದೆ-

"ಅತೀಂದ್ರಿಯೋ ಮಹಾಮಾಯೋ"॥

ಮೂಲಾವಿದ್ಯೆಗೆ ವೇದವಾಕ್ಯದ ಉದಾಹರಣೆ.

ತಮು ಆಸೀತ್ತಮಸಾಗೂಳ್ಹಮಗ್ರೇನಿಆದವಾತಂ ಸ್ವಧಯಾ ತದೇಕಂ"

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ಈ ಋಕ್ ಮಂತ್ರದಲ್ಲಿ ಸ್ವಧಾಪದದ ಅರ್ಥ ಮಾಯೆ. ಇದರೊಂದಿಗೆ ಬ್ರಹ್ಮಚೈತನ್ಯವೊಂದೇ ಸೃಷ್ಟಿಗೆ ಮುಂಚೆಯಿದ್ದಿತೆಂದು ಹೇಳಿದೆ. ಮಾಯೆ ಮೂಲಾವಿದ್ಯೆ ಬೇರೆಯಲ್ಲ. ಹೀಗೆ ವೇದಗಳ ಆಧಾರದ ಮೇಲೆ ಅದ್ವೈತ ದರ್ಶನದಲ್ಲಿ ಟೀಕಾಕಾರರು ಈ ಆರು ಪದಾರ್ಥಗಳನ್ನು ಅನಾದಿಯೆಂದು ಹೇಳಿದರಷ್ಟೆ. ಅವುಗಳನ್ನು ಕ್ರೋಡೀಕರಿಸಿ ಹೇಳಿದ್ದೇ ಹೊರತು ಸ್ವತಂತ್ರ ಕಲ್ಪನೆಯಿಂದ ಹೇಳಿವ್ದಲ್ಲವೆಂಬುದು ಸ್ಪಷ್ಟ.

ಕಲ್ಪನೆಗಳು ಎರಡು ಬಗೆ

ಕಲ್ಪನೆಯೆಂಬುದು ಶ್ರುತ್ಯನುಸಾರಿಯಾದ ಕಲ್ಪನೆಯಾದರೆ ಅದು ವ್ಯವಸ್ಥಿತ ಕಲ್ಪನೆ. ಶ್ರುತಿಯನ್ನು ಅನುಸರಿಸದೆ ಮಾಡುವ ಕಲ್ಪನೆ ಅನಿಯತ, ಅವ್ಯವಸ್ಥಿತ ಕಲ್ಪನೆ. ವ್ಯವಸ್ಥಿತ ಕಲ್ಪನೆ ಯಾವುದೆಂದರೆ ಹಿಂದೆ ಹೇಳಿದ ಅನಾದಿಯಾದ ಪ್ರಕೃತಿ, ಈಶ್ವರ, ಜೀವ. ಶುದ್ಧಚೇತನ, ಅವಿದ್ಯಾ ಅದಕ್ಕೂ ಚೈತನ್ಯಕ್ಕೂ, ಇರುವ ಸಂಬಂಧಗಳು, ಮತ್ತು ಸೃಷ್ಟಿಗೆ ಒಳಪಟ್ಟವು. ಆಕಾಶಾದಿ ಪಂಚಭೂತಗಳೂ ಭೌತಿಕಪ್ರಪಂಚವು ಹಿರಣ್ಯಗರ್ಭವೆಂಬುವ ಜೀವ ತತ್ವ - ವಿರಾಟ್ ಇತ್ಯಾದಿ. ಅತೀಂದ್ರಿಯ ವಿಷಯಗಳಲ್ಲಿ ಶ್ರುತಿಗಳ ಆಧಾರವಿಲ್ಲದೇ ಯಾರಿಗೂ ಸ್ವತಂತ್ರ ಕಲ್ಪನೆ ಮಾಡುವ ಅಧಿಕಾರವಿಲ್ಲ. ಅರ್ಹತೆಯಿಲ್ಲ. ಈ ವಿಷಯದಲ್ಲಿ ಗೌಡಪಾದರ ಉಪದೇಶ.

ವಿಕರೋತ್ಯಪರಾನ್ ಭಾವಾನ್ ಅಂತಶ್ಚಿತ್ತೇ ವ್ಯವಸ್ಥಿತಾನ್ ।
ನಿಯತಾಂಶ್ಚ ಬಹಿಶ್ಚಿತ್ತೇ ಏವಂ ಕಲ್ಪಯತೇ ಪ್ರಭುಃ ॥
ನಿಯತಾಂಶ್ಚ ಪೃಥಿವ್ಯಾದೀನ್ ಅನಿಯತಾಂಶ್ಚ ಕಲ್ಪನಾ ಕಾಲಾನ್
ಬಹಿಶ್ಚಿತ್ತ್ವಾಸನ್ ತಥಾನ್ತಶ್ಚಿತ್ತೇ ಮನೋರಥಾದಿ ಲಕ್ಷಣಾನ್
ಇತ್ಯೇವಂ ಕಲ್ಪಯತಿ ಪ್ರಭುಃ ಈಶ್ವರಃ ಆತ್ಮೇತ್ಯರ್ಥಃ”

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ಭಾಷ್ಯದಿಂದ ವ್ಯವಸ್ಥಿತವಾದ ಪೃಥಿವ್ಯಾದಿ ಕಲ್ಪನೆಗಳನ್ನು ಅವ್ಯವಸ್ಥಿತವಾದ ಮನೋರಥಗಳನ್ನು ಕಲ್ಪಿಸುವನೆಂದು ಹೇಳಿದೆ. ಹಾಗೆಯೇ ಶ್ರುತಿಯು ಹೇಳಿರುವಂತೆ ಸಾದಿ ಮತ್ತು ಅನಾದಿ ಪದಾರ್ಥಗಳನ್ನು ಜೀವಾತ್ಮನು ಕಲ್ಪಿಸುವುದು ವ್ಯವಸ್ಥಿತ ಕಲ್ಪನೆ ಹಾಗೂ ಇತರೆ ಅವ್ಯವಸ್ಥಿತವಾದ ಕಲ್ಪನೆ ಎಂದು ಎರಡು ಬಗೆ. ಈ ರೀತಿಯಾಗಿ ವ್ಯವಸ್ಥಿತವಾಗಿ ಶ್ರುತ್ಯನುಸಾರವಾಗಿ ಕಲ್ಪನೆ ಮಾಡಿರುವಂತೆ ಸಗುಣ ಸಾಕಾರ ಈಶ್ವರನ ಕಲ್ಪನೆಯೂ ಸಹ ಅಲ್ಲಲ್ಲಿ ಬಗೆ ಬಗೆಯಾಗಿ ಇದೆ, ಸಗುಣ ಸಾಕಾರ ತ್ರಿಮೂರ್ತಿಗಳ ಕಲ್ಪನೆಗಳೂ. ಸಕಲ ವಿಭೂತಿಗಳ ಕಲ್ಪನೆಗಳೂ ಎಲ್ಲವೂ ವ್ಯವಸ್ಥಿತವಾಗಿವೆ,

ಅಧಿಕಾರಿ ವಿಭಾಗ–

ಈ ಕಲ್ಪನೆಗಳು ಉಪಾಸನೆಗೆ ಅರ್ಹರಾದ ಮುಂದ ಮಧ್ಯಮಾಧಿಕಾರಿಗಳಿಗೆ (ಯೋಗಿಗಳಿಗೆ)ವರ್ಣಾಶ್ರಮಧರ್ಮ ವ್ಯವಸ್ಥೆಯೂ ಶಾಸ್ತ್ರೀಯ ಕಲ್ಪನೆಯಿದು. ಮಂದಾಧಿಕಾರಿಗಳಾದ ಕರ್ಮಿಗಳಿಗೆ, ಈ ರೀತಿಯಾದ ಕಲ್ಪನೆಗಳೆಂದು ಗೌಡ ಪಾದರೂ ಹೇಳಿರುವರು. (ಗೌ. ಪ್ರ ೩-೧೩)

ಆಶ್ರಮಾಸ್ತ್ರಿವಿಧಾ ಹೀನ ಮಧ್ಯಮೋತ್ಕೃಷ್ಟ ದೃಷ್ಟಯಃ ।
ಉಪಾಸನೋಪದಿಷ್ಟೇಯಂ ತದರ್ಥಮನುಕಂಪಯಾ॥

ಶ್ರೀ ಶಂಕರರೂ ಸಹ ಭಾಷ್ಯದಲ್ಲಿ "ಉಪಾಸನಾ ಉಪದಿಷ್ಟೇಯಂ **ತದರ್ಥಂ ಮುಂದ ಮಧ್ಯಮ–ದೃಷ್ಟ್ಯಾಶ್ರಮಾದ್ಯರ್ಥಂ ಕರ್ಮಾಣಿ ಚ ನ ಚಾತ್ಮಾ ಏಕ ಏವಾದ್ವಿತೀಯ ಇತಿ ನಿಶ್ಚಿತೋತ್ತಮ ದೃಷ್ಟ್ಯರ್ಥಂ ದಯಾಳುನಾ ವೇದೇನ ಅನುಕಂಪಯಾ**".....॥

"ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್"
ಎಂದು ಭಗವಂತನೂ ಅಧಿಕಾರಾನುಸಾರವಾಗಿ ಕರ್ಮಯೋಗವನ್ನು ಜ್ಞಾನ ಯೋಗವನ್ನು ಉಪದೇಶಿಸಿರುತ್ತಾನೆ. ಎಲ್ಲರಿಗೂ ಎಲ್ಲವನ್ನೂ ಒಂದೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮನಾಗಿ ಆಚಾರ್ಯರು ತತ್ತ್ವೋಪದೇಶ ಮಾಡಲಿಲ್ಲ. ಭಗವಂತನೇ ಮಾಡಲಿಲ್ಲ. ನಿತ್ಯಾನಿತ್ಯ ವಿವೇಕ ಇತ್ಯಾದಿ ಸಾಧನ ಚತುಷ್ಟಯ ಸಂಪತ್ತು ಉಳ್ಳವರಿಗೆ ಮಾತ್ರ ಬ್ರಹ್ಮವಿದ್ಯೆಯಲ್ಲಿ ವಿಚಾರಮಾಡುವ ಅಧಿಕಾರವು. ಇದಿಲ್ಲವರಿಗೆ ಕರ್ಮ ಮತ್ತು ಉಪಾಸನೆಯಲ್ಲಿ ಅಧಿಕಾರವು. ಕದಾಚಿತ್ ವಿಚಾರಮಾಡುವ ಆರ್ಹತೆಯಿಲ್ಲದ ಮುಮುಕ್ಷುಗಳಿಗೆ ಶಾಸ್ತ್ರೋಕ್ತವಾದ ದಹರ ವಿದ್ಯಾ ಶಾಂಡಿಲ್ಯವಿದ್ಯೆ ಮೊದಲಾದ ಸಗುಣ ಈಶ್ವರೋಪಾಸನೆಗಳಲ್ಲಿ ಅಧಿಕಾರವು. ಇವರಿಗೆ ಕ್ರಮಮುಕ್ತಿಯು. ಇಂತಹ ಅಧಿಕಾರಿಗಳಿಗೆ ಕರ್ಮ, ಉಪಾಸನೆ ಮಾಡತಕ್ಕ ಜನರಿಗಾಗಿ ಪರಿಣಾಮ ಪ್ರಕ್ರಿಯೆಯೇದು ಹೇಳುವ ಜಗತ್ ಸೃಷ್ಟಿಯನ್ನು ಹೇಳಿದೆಯೆಂದು ಶಂಕರರು ಆರಂಭಣಾಧಿಕರಣದ ಪೀಠಿಕೆಯಲ್ಲಿ ಹೇಳಿದ್ದಾರೆ.

"ಸೂತ್ರಕಾರೋಽಪಿ ಪರಮಾರ್ಥಾಭಿಪ್ರಾಯೇಣ ತದನನ್ಯತ್ವ-ಮಿತ್ಯಾಹ, ವ್ಯವಹಾರಾಭಿಪ್ರಾಯೇಣ ತು ಸ್ಯಾಲ್ಲೋಕವತ್ ಇತಿ ಮಹಾಸಮುದ್ರಸ್ಥಾನೀಯಂ ಬ್ರಹ್ಮಣಃ ಕಥಯಂತಿ, ಅಪ್ರತ್ಯಾಖ್ಯಾ-ಯೈವ ಕಾರ್ಯಪ್ರಪಂಚಂ ಪರಿಣಾಮಪ್ರಕ್ರಿಯಾಂ ಚಾಶ್ರಯಂತಿ. ಸುಗುಣೇಷು ಉಪಾಸನೇಷು ಉಪಯೋಕ್ಷ್ಯತ ಇತಿ" (ಬ್ರ ಸೂ. ಭಾಷ್ಯ ೨-೨) ಇಂತಹ ಮಂದ ಮಧ್ಯಮಾಧಿಕಾರಿಗಳಿಗೆ ಈ ಸೃಷ್ಟಿಯೂ ಪರಮಾರ್ಥವಲ್ಲವೆಂದು ಬೋಧಿಸ ಬಾರದು - ಅಪಾಯಕರ.

ಸೃಷ್ಟಿಯ ಸತ್ಯಾಸತ್ಯತೆಯ ಬೋಧನಾಕ್ರಮ

ನ ಬುದ್ಧಿಭೇದಂ ಜನಯೇತ್ ಅಜ್ಞಾನಾಂ ಕರ್ಮಸಂಗಿನಾಮ್"

ಕರ್ಮಾಸಕ್ತಿ ಉಪಾಸನಾಶಕ್ತಿಯಿರುವ ತತ್ತ್ವಜ್ಞಾನವಿಲ್ಲದ ಅಜ್ಞರಿಗೆ ಪ್ರಪಂಚ ಸತ್ಯತ್ವಬುದ್ಧಿಯನ್ನು ಕೆಡಿಸಬಾರದು. ಹಾಗೆ ಮಾಡಿದರೆ 'ಇತೋ ಭ್ರಷ್ಟಃ ತತೋ ಭ್ರಷ್ಟಃ ಎಂದಂತೆ ಜ್ಞಾನ ಮಾರ್ಗವೂ ಕರ್ಮಮಾರ್ಗವೂ ಇಲ್ಲದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಉಭಯಭ್ರಷ್ಟರಾಗುವರೆಂಬುದು ವಿಚಿತ. ಇಂತಹ ಪ್ರಪಂಚವಲ್ಲಿ ಭೇದ ದೃಷ್ಟಿಯಿರುವ ಅಧಿಕಾರಿಗಳಿಗಾಗಿಯೇ ಸೂತ್ರಕಾರರು ಸೃಷ್ಟಿಕರ್ತ, ಜಗತ್ಕಾರಣ, ಪರಬ್ರಹ್ಮವೆಂದು ವೇದಾಂತ ಸಿದ್ಧಾಂತವನ್ನು ಹೇಳಿ, ಸಾಂಖ್ಯ ಮತ, ತಾರ್ಕಿಕಮತ, ಬೌದ್ಧಮತ ಇತ್ಯಾದಿ ಸೃಷ್ಟಿಕಾರಣ ವಿಷಯದಲ್ಲಿ ವಿವಾದವೆತ್ತುವರನ್ನೆಲ್ಲಾ ಖಂಡಿಸಿ ಸ್ವಸಿದ್ಧಾಂತವನ್ನು (೨ ಅಧ್ಯಾಯ-೧-೨-ರಲ್ಲಿ) ಸ್ಥಾಪಿಸುವ ಮಹಾಪ್ರಯತ್ನವನ್ನು ಮಾಡಿರುವುದೆಲ್ಲ ಈಗ ಸಾರ್ಥಕವಾಗುವುದು. ಅನ್ಯಥಾ ಸೃಷ್ಟಿಪ್ರಪಂಚವೇ ಮಿಥ್ಯೆಯೆಂಬುವ ಪರಮಾರ್ಥ ಸಿದ್ಧಾಂತವನ್ನೇ ಮೊಟ್ಟಮೊದಲು ಹೇಳುವ ಉದ್ದೇಶ ಮಾಡಿದ್ದರೆ 'ತದನನ್ಯತ್ವಮಾರಂಭಣ ಶಬ್ದಾದಿಭ್ಯಃ' ಎಂಬುವ ಸೂತ್ರವನ್ನೇ ಮೊದಲೇ ಬರೆದು ಸಿದ್ಧಾಂತ ಮಾಡಬಹುದಾಗಿದ್ದಿತ್ತು. ಯಾರೇ ಪ್ರಪಂಚ ಸತ್ಯವೆಂದು ಹೇಳಿದರೂ ಇದೊಂದೇ ಸೂತ್ರನ್ಯಾಯದಿಂದ ಮಿಥ್ಯೆಯೆಂದು ಸಾಧಿಸ ಬಹುದಾಗಿತ್ತು. ಹಾಗೆ ಸೂತ್ರಕಾರರು ಮಾಡಲಿಲ್ಲ. "ಸ್ಯಾಲ್ಲೋಕವತ್" ಎಂದು ಭೋಕ್ತೃ (ಜೀವರು) ಭೋಗ್ಯ ಇವುಗಳಿಗೂ ಜಗತ್ಕಾರಣ-ಬ್ರಹ್ಮನಿಗೂ ಅಭೇದದಂತೆ, ಭೇದವೂ ಸಮುದ್ರ-ತರಂಗ ನ್ಯಾಯದಿಂದ ವ್ಯವಹಾರದಲ್ಲಿ (ಅವಿದ್ಯೆ ದಿಶೆಯಲ್ಲಿ) ಅಬಾಧಿತವಾಗಿರುವುದೆಂದು ಎಚ್ಚರಿಸಿರುವರು ಸಮುದ್ರಕ್ಕೂ, ಅದರ ನೊರೆ ತೆರೆಗಳಿಗೂ ಕಾರ್ಯರೂಪದಿಂದ ಭೇದವೂ ಜಲರೂಪದಿಂದ ಅಭೇದವೂ ಇರುವಂತೆ ಜೀವೇಶ್ವರರ ಭೇದವೂ ಜೀವರ ಭೋಗ್ಯವಸ್ತುಗಳ ಭೇದವು ಪರಸ್ಪರಭೇದವೂ ಸಹ ತತ್ತ್ವಜ್ಞಾನವು ಉದಯಿಸುವ ಪರ್ಯಂತರ ಅಬಾಧಿತವಾಗಿರುವುದೆಂದೂ ಬೋಧಿಸಿರುವರು ಎಂದು ತಿಳಿಯಬೇಕು.

ಶುದ್ಧಬ್ರಹ್ಮವೇ ಜಗತ್ಕಾರಣವಲ್ಲ

ಈಗಿರುವಂತೆ ಕಾಣುವ ಸೃಷ್ಟಿಗೆ ಮೂಲವಾದುದ್ದು ಪರಬ್ರಹ್ಮವೆಂದೂ ಅದೂ ಸಹ ಮಾಯಾಶಕ್ತಿಯೆಂಬುವ ತ್ರಿಗುಣಾತ್ಮಕವಾದ ಜಡಶಕ್ತಿಯಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೂಡಿಯೆ ಜಗತ್ ಸೃಷ್ಟಿ ಮಾಡುವುದೆಂದೂ ಹೇಳಿರುವರು. "ಸರ್ವೋಪೇತಾ ಚ ತದ್ದರ್ಶನಾತ್" ಈ ಜಡಶಕ್ತಿಯನ್ನೇ ಗೀತೆಯಲ್ಲಿ ಅಪರಾ ಪ್ರಕೃತಿ ಯೆಂದೂ ಹೇಳಿರುವುದಲ್ಲವೆ ಆದು ಈಶ್ವರಾಶ್ರಿತ. ಈಶ್ವರಾಧೀನವಾಗಿಯೇ ಇದ್ದು ಪರಿಣಾಮಿ ಕಾರಣವಾಗಿಯೂ ಇದ್ದು ಜಗತ್ತಿನ ರೂಪದಲ್ಲಿ ಪರಿಣಮಿ ಸುತ್ತಾ ಈಶ್ವರನ ಈಶ್ವರತ್ವವನ್ನು ಜಗತ್ಕಾರಣತ್ವವನ್ನು ಒದಗಿಸಿ ಕೊಟ್ಟಿದೆ, ಶುದ್ಧಬ್ರಹ್ಮನಿಗೆ ಜಗತ್ಕಾರಣತ್ವವನ್ನು ಸೂತ್ರಕಾರರೂ ಶಂಕರರೂ ಹೇಳಿಯೇ ಇಲ್ಲ.

"ಸರ್ವೋಪೇತಾ ಚ ತದ್ದರ್ಶನಾತ್" (೨-೧-೩೦) ಸೂಕ್ಷ್ಮಂತು ತದರ್ಹತ್ವಾತ್ (೧-೪-೨೮) ಭಾಷ್ಯದಲ್ಲಿ "ಏಕಸ್ಯಾಪಿ ಬ್ರಹ್ಮಣೋ ವಿಚಿತ್ರಶಕ್ತಿಯೋಗಾತ್ ಉಪಪದ್ಯತೇ, ವಿಚಿತ್ರೋ ವಿಕಾರಶ್ಚಪಂಚ" ಇತ್ಯುಕ್ತಮ್ ತತ್ಪುನಃ ಕಥಮುದಗದ್ಯುತೇ? ವಿಚಿತ್ರ ಶಕ್ತ್ಯಾಯುಕ್ತಂ ಪರಂ ಬ್ರಹ್ಮೇತಿ ತದುಚ್ಯತೇ "ಸರ್ವೋಪೇತಾ ಚ ತದ್ದರ್ಶನಾತ್' ಸರ್ವಶಕ್ತಿಯುಕ್ತಾ ಚ ಪರಾ ದೇವತೇತ್ಯಭ್ಯುಪಗಂತವ್ಯಮ್

ಪರಾಪರ ಶಕ್ತಿ ಮೂಲಕವಾಗಿಯೇ ಪರಬ್ರಹ್ಮವು ಜಗತ್ತಿಗೆ ಕಾರಣ

ಪರಾಪರ ಶಕ್ತಿಗಳ ಮೂಲಕವಾಗಿಯೇ ಪರಬ್ರಹ್ಮವೊ ಜಗತ್ತಿಗೆ ಉಪಾದಾನ ಕಾರಣ, ನಿಮಿತ್ತಕಾರಣವೆಂದು (ಅಧ್ಯಾಯ೭) ಗೀತಾಭಾಷ್ಯ ದಲ್ಲೂ ಸ್ಪಷ್ಟಪಟ್ಟಿದೆ. ಶುದ್ಧ ಬ್ರಹ್ಮವು ಕಾರ್ಯವೂ ಅಲ್ಲ ಕಾರಣವೂ ಅಲ್ಲ. 'ಅಪೂರ್ವಮನಪರಮ್' ಎಂಬಲ್ಲಿ ಕಾರ್ಯಕಾರಣಭಾವವಿಲ್ಲದ್ದು ಶುದ್ಧ ಬ್ರಹ್ಮ ಎಂದಿದೆ. ಇದೇ ಶಕ್ತಿಯುಕ್ತವಾಗಿದ್ದು, ಸೃಷ್ಟ್ಯಾದಿಗಳಿಗೆ ಕಾರಣವೆಂದು ಹೇಳುತ್ತಾ ಈಶ್ವರನೆಂದು ಹೇಳಿರವುದಷ್ಟೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯೆ'
'ಪ್ರಕೃತಿದ್ವಯದ್ವಾರೇಣ ಈಶ್ವರಸ್ಯ ಈಶ್ವರತ್ವಮ್'

ಎಂದೂ ಗೀತಾಭಾಷ್ಯವು ಉದಾಹರಣೆಯಾಗಿದೆ. ಮೊಟ್ಟಮೊದಲು ತತ್ವ ಜಿಜ್ಞಾಸುವಿಗೂ ಸಹ ಜೀವನಿಗೆ ಬೇರೆಯಾಗಿಯೇ, ಈಶ್ವರನಿದ್ದಾನೆಂಬುದನ್ನು 'ಅಧಿಕಂ ತು ಭೇದನಿರ್ದೇಶಾತ್' ಎಂಬ ಸೂತ್ರನ್ಯಾಯದಂತೆ ಒಪ್ಪಿಸಿಯೇ ಅನಂತರ ತತ್ತ್ವೋಪದೇಶ ಮಾಡುವ ಪದ್ಧತಿಯು ಶ್ರೀಬಾದರಾಯಣರ ಮತ್ತು ಶ್ರೀ ಶಂಕರರ ಉಪದೇಶದಲ್ಲಿ ಅಡಗಿದೆ. ಅದಕ್ಕಾಗಿಯೇ **'ಜನ್ಮಾದ್ಯಸ್ಯ ಯತಃ** ಎಂದು ಜಗತ್ಕಾರಣವಾದ ಪರಬ್ರಹ್ಮವೇ ಪರಮೇಶ್ವರ ಎಂದು ತಿಳಿಸುತ್ತಲೇ ಮುಂದೆ ಮುಂದೆ ಸಾಗಿದ್ದಾರೆ ಸೂತ್ರಕಾರರು. **"ಯೋಭ್ಯಾಂ ಪ್ರಕೃತಿಭ್ಯಾವಿಶ್ವರಃ ಜಗದುತ್ಪತ್ತಿಸ್ಥಿತಿಲಯ – ಹೇತುತ್ವಂ ಪ್ರತಿಪದ್ಯತೇ'** ಎಂದು ಪ್ರಕೃತಿ ಮೂಲಕ ಬ್ರಹ್ಮನಿಗೆ ಜಗ–ತ್ಕಾರಣತ್ವವನ್ನು ಹೇಳಿದ್ದರಿಂದ ಬ್ರಹ್ಮಸೂತ್ರ ವಿರೋಧವೇನೂ ಇಲ್ಲ. ಚೇತನವೇ ಜಗತ್ಕಾರಣವೆಂದು ಹೇಳುವ ಉಪನಿಷತ್ ಸಿದ್ಧಾಂತವನ್ನೇ ಎತ್ತಿ ತೋರಿಸುವುದು. ಸ್ವತಂತ್ರಪ್ರಕೃತಿಗೆ ಜಡತ್ವವಿರುವುದರಿಂದ ಕಾರಣತ್ವವಿಲ್ಲ ವೆಂದು ತೋರಿಸುವುದೂ ಸಹ ಸೂತ್ರಕಾರರ ಮುಖ್ಯೋದ್ದೇಶ ವಾಗಿರು ವುದು. 'ಪ್ರಧಾನ ಮಲ್ಲನಿರ್ಹರಣ' ನ್ಯಾಯದಿಂದ ಮುಖ್ಯವಾಗಿ ನಿರೀಶ್ವರ ವಾದಿಯಾದ ಸಾಂಖ್ಯರ ಸ್ವತಂತ್ರ ಜಡಪ್ರಕೃತಿವಾದವನ್ನು (ಜಗತ್ಕಾರಣವಾದಿ ಯಾದ ಸಾಂಖ್ಯಮತವನ್ನು) ನಿರಾಕರಿಸದೆ ವೇದಾಂತ ಸಿದ್ಧಾಂತವಾಗುವುದಿಲ್ಲ. ಸಾಂಖ್ಯಮತದಂತೆ ವಿರುದ್ಧವಾದ ಗೌತಮ ವೈಶೇಷಿಕ ಸಿದ್ಧಾಂತವಾದ ಪರಮಾಣು ಸಂಘಾತವೇ ಜಗತ್ಕಾರಣವೆಂಬ ಬೌದ್ಧವಾದವನ್ನೂ ಸೂತ್ರ ಕಾರರು ಪ್ರಬಲಯುಕ್ತಿಗಳಿಂದ ನ್ಯಾಯಗಳಿಂದ ಖಂಡಿಸಿ ಚೇತನ ಜಗತ್ಕಾರಣ ವಾದವನ್ನು ಸ್ಥಾಪಿಸಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ತತ್ವ ಜಿಜ್ಞಾಸುವಿಗೆ ಜಗತ್ತು ಪರಮಾರ್ಥವಲ್ಲವೆಂದು ಹೇಳುವುದು.

ಜೀವೇಶ್ವರರ ತತ್ವವನ್ನು ಹೇಳುವಾಗ ಮಾತ್ರ ಜಗತ್ತು ಪರಮಾರ್ಥವಲ್ಲ, ಗಂಧರ್ವನಗರ, ಸ್ವಪ್ನ, ಇಂದ್ರಜಾಲದಂತೆ ಕೇವಲ ತೋರಿಕೆ ವಸ್ತು ವೆಂದು ಅಳೆದು ಶುದ್ಧಬ್ರಹ್ಮವೇ ತತ್ವವೆಂದು ಬೋಧಿಸಿರುವರು. ಗೀತೆ ೧೩ನೇ ಅಧ್ಯಾಯದಲ್ಲಿ ತತ್ವವನ್ನು ಹೇಳುವಾಗ ಮೇಲಿನ ಉದಾಹರಣೆಯನ್ನು ಕೊಟ್ಟಿದ್ದಾರೆ,

(ಗೌ.ಕಾರಿಕೆ ೪ನೇ ಪ್ರಕರಣದಲ್ಲಿ ೬೮, ೬೯, ೭೦) ರಲ್ಲಿ ಸ್ವಪ್ನದಲ್ಲಿ ಕಾಣುವ ಜೀವರಂತೆಯೂ, ಮಾಯೆಯಿಂದ ಕಾಣುವ ಇಂದ್ರಜಾಲದ ಜೀವ ರಂತೆಯೂ ಮಣಿಮಂತ್ರಾದಿಗಳಿಂದ ನಿರ್ಮಿಸಿದ ಮಾಟದ ಜೀವಬೊಂಬೆ ಯಂತೆಯೂ ಜಾಗರದಲ್ಲಿ ಹುಟ್ಟುವುದೂ ಸಾಯುವುದೂ ಕಾಣುತ್ತದೆ. ಪರಮಾರ್ಥವಾಗಿ ಯಾವ ಜೀವನೂ ಹುಟ್ಟುವುದೂ ಇಲ್ಲ; ಸಾಯುವುದೂ ಇಲ್ಲ. ಅಲ್ಲದೆ ಸಾಯಣಾಚಾರ್ಯರು ವೇದಭಾಷ್ಯವನ್ನು ಬರೆದಂತೆಯೇ ಅದರೊಳಗಿನ ಉಪನಿಷತ್ತುಗಳಿಗೂ ಭಾಷ್ಯವನ್ನು ಬರೆದಿರುವರು, ಅವರು ಬರೆಯುವಾಗ ಐತರೇಯದಲ್ಲಿ–

ಕರೋಮ್ಯುಪನಿಷದ್ ವ್ಯಾಖ್ಯಾಂ ಶಂಕರಾಚಾರ್ಯವರ್ತ್ಮನಾ।
ಆಚಾರ್ಯಸ್ಯ ಪ್ರಸಾದೇನ ಸಂಸಾರಾನ್ಮುಚ್ಯತೇಽಬುಧಃ (ಅಬುಧೈಃ)

ಹೀಗೆ ಹೇಳಿದ್ದಾರೆ. ಅಂದರೆ, ಶ್ರೀ ಶಂಕರಾಚಾರ್ಯರ ಮಾರ್ಗದಲ್ಲೇ ಉಪನಿಷತ್ತಿಗೆ ವ್ಯಾಖ್ಯಾನ ಮಾಡುವೆನೆಂದು ಸ್ಪಷ್ಟವಾಗಿ ಹೇಳಿರುವರು. ಇವರೇ ವೇದಭಾಷ್ಯವನ್ನು ಬರೆದು ಅಖಿಲ ಭರತಖಂಡದಲ್ಲೂ ಇತರ

CC-O. In Public Domain. Digitized by eGangotri

ಖಂಡಗಳಲ್ಲೂ ಪ್ರಾಮಾಣಿಕರೆಂದು ಪ್ರಸಿದ್ಧರಾಗಿದ್ದಾರೆ. ಇವರ ವ್ಯಾಖ್ಯಾನದಲ್ಲಿ ಪೂರ್ವೋತ್ತರಮೀಮಾಂಸಾ ನ್ಯಾಯಗಳಂತೆ ನಿರುಕ್ತ ವ್ಯಾಕರಣಾದಿ ಷಡಂಗಗಳ ಸಹಾಯದಿಂದ ವೇದಾರ್ಥವು ಪ್ರಕಾಶಿತವಾಗಿದೆ ಎಂಬುದು ಭಾರತ ದೇಶದ ಸಕಲ ಸಂಸ್ಕೃತ ವಿದ್ವಾಂಸರಿಗೂ ಮನದಟ್ಟಾಗಿದೆ. ಅದರಿಂದ ಸಾಯಣಭಾಷ್ಯಗಳು ಸರ್ವಮಾನ್ಯವಾಗಿವೆ. ಮೇಲ್ಕಂಡ ವಿಷಯಗಳಿಗೆ ಪ್ರಮಾಣ–

ನಾಸದಾಸೀಯ ಸೂಕ್ತವೇ ಆಧಾರ

ಋಗ್ವೇದ ವ್ಯಾಖ್ಯಾನ ಮಾಡುವಾಗ ಸಾಯಣರು ನಾಸದಾಸೀಯ ಸೂಕ್ತವನ್ನು ವ್ಯಾಖ್ಯಾನಿಸಿದ್ದಾರೆ. ಈ ಸೂಕ್ತಕ್ಕೆ ವಿಸ್ತಾರವಾದ ವ್ಯಾಖ್ಯಾನವಿದೆ, ಪ್ರಕೃತ, ಅವರು ವ್ಯಾಖ್ಯಾನಿಸಿರುವಂತೆ ನಾವು ಅರ್ಥವನ್ನು ಗ್ರಹಿಸಬೇಕಾದುದು ಅನಿವಾರ್ಯ. ಈ ಸೂಕ್ತವು ಪ್ರಳಯಕಾಲದ ಸ್ಥಿತಿಯನ್ನು ಹೇಳುತ್ತಾ ಮುಂದೆ ಸೃಷ್ಟಿಯನ್ನು ತಿಳಿಸುತ್ತಾ ಜಗತ್ತಿನ ಸೃಷ್ಟಿ ಸ್ಥಿತಿ ಪ್ರಳಯ ಕರ್ತನಾದ ಪರಮೇಶ್ವರನನ್ನು ನಮ್ಮ ಹೃದಯಕ್ಕೆ ನಾಟುವಂತೆ ಬೋಧಿಸಿದ್ದಾರೆ, ಅಧುನಿಕ ವಿಮರ್ಶಕ ಧುರೀಣರು ಪಾತ್ರ ಶಂಕರ ಹೃದಯವನ್ನು ಹೇಳುವುದಕ್ಕೆ ಹೊರಟು ಪ್ರಾಮಾಣಿಕವಾದ ಮೂಲಾವಿದ್ಯಾಪಾದವನ್ನೇ ತಳ್ಳಿಹಾಕಿ ತಮ್ಮದೇ ಆದ ವಿಮರ್ಶೆಯ ಮಾರ್ಗವನ್ನು ಹಿಡಿದು ಪಾಮರರಿಗೆ ಬೋಧಿಸುತ್ತಾ ಪ್ರಸ್ಥಾನತ್ರಯದ ಅರ್ಥವನ್ನು ಕೆಲವುಕಡೆ ಬದಲಾಯಿಸಿದ್ದಾರೆಂಬುದು ಖಚಿತ. ಶ್ರೀ ಶಂಕರರ ಮಾರ್ಗವನ್ನೇ ಹಿಡಿದು ಅವರ ಹೃದಯವನ್ನು ತಿಳಿದು ಬರೆದ ಸಾಯಣಾಚಾರ್ಯರಿಗೆ ಮೂಲಾ ವಿದ್ಯೆ (ಭಾವಾವಿದ್ಯೆಯೆಂಬುದು) ಸಮ್ಮತವೆಂಬುದು ಈ ಸೂಕ್ತದಿಂದ ತಿಳಿಯಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಲಾ ವಿದ್ಯೆಯೇ ಮಾಯೆ ಎಂಬುದು ವೇದದ ನಿರ್ಣಯ

"ತನು ಆಸೀತ್ತಮಸಾ ಗೂಳ್ಹಾ ಮಗ್ರೇಽಪ್ರಕೇತಂ ಸಲಿಲಂ ಸರ್ವಮಾ ಇದವ್, ಕಾಮಸ್ತದಗ್ರೇ ಸಮವರ್ತತಾಧಿ ಮನಸೋರೇತಃ ಪ್ರಥಮಂ ಯದಾಸೀತ್" ಈ ಮಂತ್ರದಲ್ಲಿ 'ತಮಃ' ಎಂಬ ಪದಕ್ಕೆ ಮೂಲಾವಿದ್ಯೆ (ಭಾವ ವಿದ್ಯೆ) ಎಂಬ ಅರ್ಥವನ್ನು ಮಾಡಿದ್ದಾರೆ. ಇದು ಪಂಚಪಾದೀ-ವಿವರಣ ಭಾಮತೀ ಮುಂತಾದ ಹಲವಾರು ವ್ಯಾಖ್ಯಾನಕಾರರಿಗೂ ಒಪ್ಪಾಗಿರುವ ಅರ್ಥ. ಬಹು ಆಚಾರ್ಯ ಸಮ್ಮತವಾಗಿದ್ದ ಅರ್ಥವನ್ನು ತಪ್ಪೆಂದು ತಳ್ಳಿ ಹಾಕುವುದಕ್ಕೆ ವೇದಾಧ್ಯಯನ, ಅಂಗಾಧ್ಯಯನ ಯಾವುದೂ ಇಲ್ಲದ ಭಾಷಾಂತರ ಪಂಡಿತರಾದ ಅಧುನಿಕ ವಿಮರ್ಶಕ ಧುರೀಣರಿಗೆ ಶಕ್ಯವಲ್ಲ. ತಳ್ಳಿ ಹಾಕಿದರೂ ಅಖಿಂಡಭರತಖಿಂಡದ ವಿದ್ವಾಂಸರೂ (ವೇದಾಂತ ವಿದ್ವಾಂಸರು) ಯಾರೂ ಒಪ್ಪರು. ಹೀಗಿರುವಾಗ ಈಗಿನ ಕೇಪಲ ಪಂಡಿತಂಮನ್ಯರು ಮೂರು ನಾಲ್ಕು ಜನರು ಹೇಳುವಂತೆ ಮೂಲಾ ವಿದ್ಯಾವಾದವು ಶಂಕರ ಸಮ್ಮತವಲ್ಲವೆಂದು ಹೊಗಳಿಕೊಳ್ಳುವುದು ಹಾಸ್ಯಾಸ್ಪದ. ವೇದಾರ್ಥ ಪಂಚನೆಯೇ ಆಗುವುದು. ಆದ್ದರಿಂದ ವೇದಾರ್ಥವನ್ನು ರಕ್ಷಿಸುವುದು ನಮ್ಮ ಕರ್ತವ್ಯ. ಅಪಾರ್ಥವನ್ನು ಕಲ್ಪಿಸುವುದು ಶ್ರೇಯಸ್ಕರವಲ್ಲ. ಮಠಾಧಿಪತಿಗಳೂ ಮೂಲಾವಿದ್ಯೆಯನ್ನು ರಕ್ಷಿಸುವುದರಲ್ಲಿ ಸಹಾಯಕರಾಗಿದ್ದಾರೆಂದು, ಮೂಲಾ ವಿದ್ಯಾ ನಿರಾಸಕಾರರ ಅನುಯಾಯಿ ಯತೀಶ್ವರರೊಬ್ಬರು ಸಂಸ್ಕೃತ ಗ್ರಂಥದಲ್ಲಿ (ಶ್ರೀ ಶಂಕರ ಸಿದ್ಧಾಂತವೆಂಬುವ ಗ್ರಂಥದಲ್ಲಿ) ಈಚೆಗೆ ಪ್ರಕಟಿಸಿದ್ದಾರೆ. ಮಠಾಧಿಪತಿಗಳಾಗಲೀ, ಪಂಡಿತರಾಗಲೀ ವೇದಾರ್ಥವನ್ನು ರಕ್ಷಿಸುವುದರಲ್ಲಿ ನಿರತರಾಗಿದ್ದಾರಯೇ ವಿನಹ ಮೂಲಾ ವಿದ್ಯೆಯನ್ನು ರಕ್ಷಿಸುವುದಕ್ಕಲ್ಲ. ಮೂಲಾ ವಿದ್ಯೆಯೆಂಬುದು ಸಂಸಾರದ ಪ್ರಥಮ ಬೀಜವಾಗಿ ಜ್ಞಾನವು ಉದಯವಾಗುವವರೆಗೂ ಉಳಿದು ಮೋಕ್ಷವೇ ಆಗದೇ ಹೋಗುವುದು, ಅಭ್ಯಾಸಕ್ಕೂ ಬೀಜವಾಗಿರುವ ಇದನ್ನು ದೃಢವಾದ ಜ್ಞಾನನಿಷ್ಠೆಯಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿವಾರಿಸಿ ಕೊಳ್ಳಲೆಂದೇ ತತ್ವಜಿಜ್ಞಾಸುಗಳಿಗೆ ಬೋಧಿಸುವುದೇ ಮುಖ್ಯ ಉದ್ದೇಶವಾಗಿದೆ. ಭಗವತ್ಪಾದರು ಅವ್ಯಾಕೃತ ಪ್ರಕ್ರಿಯೆಯಲ್ಲೂ "ಊರ್ಧ್ವ ಮೂಲಮವಾಕ್ ಶಾಖಿಂ" ಎಂಬ ಸಂಸಾರ ವೃಕ್ಷವನ್ನು ವರ್ಣಿಸುವ ಗೀತಾ ಭಾಷ್ಯದಲ್ಲೂ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮೂಲಾವಿದ್ಯೆಯು ವಾರ್ತಿಕಕಾರರಿಗೂ ಸಮ್ಮತ.

ಪ್ರಥತೇ ವೈಶ್ವರೂಪೇಣ ಯತೋಽವಿದ್ಯೈವ ಸರ್ವಥಾ ।
ಅವಿದ್ಯಾಮಾತ್ರ ಯಾಥಾತ್ಮ್ಯಾತ್ ಅತಸ್ತದ್ಧೇದ ಮುಚ್ಯತೇ ॥
ಅತ್ಯಾವಿದ್ಯೈವ ನಃ ಶಕ್ತಿಃ ಸರ್ವಶಕ್ಯಸ್ಯ ಸರ್ಜನೇ ।
ನಾತೋಽನ್ಯಥಾ ಶಕ್ತಿವಾದಃ ಪ್ರಮಾಣೈರವಸೀಯತೇ॥
(ವಾರ್ತಿಕ ಅ-೧೬೭ ರಿಂದ೧೬೧)

ಕೇವಲ ಅಧ್ಯಾಸವು ನಿವೃತ್ತಿ ಹೊಂದಿದರೆ ಸಾಕೆಂದು ದೀಲಕ್ಕೆ ಕಾಣುವುದು ಕೆಲವುಕಡೆ, ಭಾಷ್ಯದಲ್ಲಿ ಮಾತ್ರ ಸಮೂಲನಾಶವಾಗಬೇಕೆಂಬ ಅಭಿಪ್ರಾಯವು ಅನೇಕಕಡೆ ಕಾಣುವುದು. ಜ್ವರವು ಮೇಲಕ್ಕೆ ಕಾಣಿಸದೆ ಒಳಗಡೆ ಆಡಗಿದೆಯೆಂದು ವೈದ್ಯರು ಹೇಳಿದರೆ ಅದನ್ನು ನಿರ್ಮೂಲ ಮಾಡಿ ಕೊಳ್ಳಬೇಕೆಂಬುದೇ ಅವರ ಆಶಯವಿರುವುದಷ್ಟೆ. ಆದರಂತೆ ಸಮೂಲ ಅವಿದ್ಯಾನಾಶವನ್ನು ಮಾಡಿಕೊಳ್ಳಬೇಕಾದ ಅವಶ್ಯಕತೆಯನ್ನು ಬೋಧಿಸಿದ್ದಾರೆ. ಇವನ್ನು ಅರಿಯದೆ ಮಠಾಧಿಪತಿಗಳು ಮೂಲಾವಿದ್ಯೆಯನ್ನು ರಕ್ಷಿಸುವುದಕ್ಕೆ ಸಹಾಯಕರಾಗಿದ್ದಾರೆಂದು ಅಪಪ್ರಚಾರ ಮಾಡುವ ಆಧುನಿಕ ವಿಮರ್ಶಕರ ಲೇಖನವನ್ನು ನೋಡುವವರಿಗೆ ಮೂಲಾವಿದ್ಯಾ ನಿರಾಸಕಾರರ ಮೇಲಿನ ಪಕ್ಷಪಾತವೆಂಬುದು ಓದುಗರಿಗೆ ವ್ಯಕ್ತವಾಗದೇ ಇರದು. ಸಾಯಣ ಭಾಷ್ಯಕಾರರು ಪಂಚಪಾದೀ ವಿವರಣಾದಿ ಮತವನ್ನು ಅನುಸರಿಸಿ ವ್ಯಾಖ್ಯಾನಿ-

Sri Vidyabharathi Book Centre, Sringeri

CC-O. In Public Domain. Digitized by eGangotri

ಸಲಿಲ್ಲ. ಅವರು ಶಂಕರಾಚಾರ್ಯರ ಮಾರ್ಗದಲ್ಲೇ ಉಪನಿಷದ್ ವ್ಯಾಖ್ಯಾನ ಮಾಡುವೆವೆಂದು ಹಿಂದೆ ಪ್ರತಿಜ್ಞೆಮಾಡಿ ಹೇಳಿದ್ದನ್ನು ಗಮನಿಸಬೇಕು. ಪದ ಪದಾರ್ಥವನ್ನು ಹೇಳುವಾಗ ವಿವರಣಾಚಾರ್ಯರನ್ನು ಬೆಂಬಲಿಸಬೇಕಾದ ಅಗತ್ಯವೂ ಅವರಿಗಿಲ್ಲ. ನಿರುಕ್ತಾದಿ ಸಹಾಯದಿಂದ ಸ್ವತಂತ್ರವಾಗಿ ನ್ಯಾಯದಿಂದ ಅರ್ಥಮಾಡಿರುವ ಸಾಯಣ ಭಾಷ್ಯಕಾರರ ಮತವೇ ಮಾನ್ಯವಾಗಿದೆ ವಿದ್ವಾಂಸರಿಗೆ. ಆದಕಾರಣ ನಾಸದಾಸೀಯ ಸೂಕ್ತದ ಅರ್ಥವನ್ನು ಇಲ್ಲಿ ಬರೆದು ತಮಃಆಸೀತ್ತಮಸಾಗೂಳ್ಹಮಗ್ರೇ ಎಂಬ ಮಂತ್ರದ ಅರ್ಥವನ್ನು ವಿವರಿಸಿದ್ದೇವೆ. ಇದನ್ನು ವಾಚಕರು ನೆನಪಿನಲ್ಲಿಟ್ಟು ಕೊಳ್ಳಬೇಕು.

ನಾಸದಾಸೀಯ ಸೂಕ್ತದ ಅರ್ಥ

ಆಕಾಶಾದಿ ಪಂಚಭೂತಗಳನ್ನು ಸೃಷ್ಟಿಸಿ, ರಕ್ಷಿಸಿ, ಸಂಹರಿಸುವ ಪರಮೇಶ್ವರನನ್ನು ಈ ಸೂಕ್ತದಲ್ಲಿ ಶ್ರುತಿಯು ಪ್ರತಿಪಾದಿಸಿದೆ. 'ತಪಸಸ್ತನ್ಮಹಿನಾ ಜಾಯತೈಕಮ್' ಎಂದು ಮುಂದೆ ಸೃಷ್ಟಿಯನ್ನು ಹೇಳಿದೆ. ಈಗ ಸೃಷ್ಟಿಗೆ ಮೊದಲು ಇರುವ ಪ್ರಳಯಾವಸ್ಥೆಯನ್ನು ಹೇಳುವುದು. ಜಗತ್ತಿನ ಪೂರ್ವಸ್ಥಿತಿಯೇ ಪ್ರಳಯಾವಸ್ಥೆಯು, ಆದರೂ ನಿರ್ಜೀವವಾಗಿ (ಏನೂ ಬೀಜವಿಲ್ಲದೆ) ಲಯವಾಗುವುದಿಲ್ಲ. ಪ್ರಕೃತಿಮೂಲಕ ಈಶ್ವರನಲ್ಲಿ ಅಡಗುವುದು. ಅಥವಾ ಸೂಕ್ಷ್ಮ ಸ್ಥಿತಿಗೆ ಬರುವುದೇ ಲಯವೆಂಬುದರ ಅರ್ಥವು. ಅಂದ ಮೇಲೆ ಏನೂ ಇಲ್ಲದೆ ಶೂನ್ಯವಾಯಿತೆಂದಲ್ಲ. ಮೊಲಡ ಕೊಂಬಿನಂತೆ ಅಥವಾ ಗಗನ ಕುಸುಮದಂತೆ ಶೂನ್ಯವಾಗಿದ್ದರೆ ಪುನಃ ಸೃಷ್ಟಿಗೆ ಬೀಜವಿಲ್ಲವೆಂತಾಗುವುದು, ಆದರಿಂದ ಶೂನ್ಯವಾಗಿಲ್ಲ. ಪರಮಾರ್ಥವಾಗಿ ಯಾವುದಾದರೊಂದು ಬಿಡಿಭಾಗ ಜಗತ್ತಿನ ಅಂಶವಿದೆಯೇ? ಎಂದರೆ - ಇಲ್ಲ, ಹಾಗಾದರೆ ಲೋಕಗಳೇನಾದರೂ ಇರಬಹುದೇ? ಎಂದರೆ ಯಾವ ಲೋಕಗಳೂ ಇರುವುದಿಲ್ಲ. ಆಕಾಶ, ಅಂತರಿಕ್ಷವೆಂಬುದೂ ಇರಲಿಲ್ಲ. ಅಂತರಿಕ್ಷಕ್ಕೂ ಮೇಲೆ ಇರುವ ದ್ಯುಲೋಕದಿಂದ ಸತ್ಯಲೋಕ ಪರ್ಯಂತರವಿರುವ ಯಾವ ಲೋಕಗಳೂ ಸಹ ಇರಲಿಲ್ಲ. ಒಟ್ಟಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಲ್ಲಿ ಚತುರ್ದಶಭುವನಗಳಿಂದ ಒಳಗೊಂಡ ಬ್ರಹ್ಮಾಂಡವೇ ಇರುವುದಿಲ್ಲ. ಪಂಚಭೂತಗಳೂ ಇರುವುದಿಲ್ಲ. ಈ ಜಗತ್ತನ್ನು ಆವರಿಸುವ ವ್ಯಾಪಿಸುವ ಯಾವುದಾದರೊಂದು ಆವರಣವಿದ್ದೀತೆ? ಎಂದರೆ, ಯಾವ ಸ್ಥಳದಲ್ಲಿ ತತ್ಪ್ರವನ್ನು ವ್ಯಾಪಿಸಬಹುದೋ ಆ ಸ್ಥಳ ದೇಶಗಳೂ ಇರುವುದಿಲ್ಲ. ಏಕೆಂದರೆ, ಜೀವರೇ ಇಲ್ಲದಿರುವಾಗ ಜೀವರ ಭೋಗಕ್ಕಾಗಿ ವ್ಯಾಪಿಸುವ ಪಂಚಭೂತಗಳು ಎಲ್ಲಿಂದ ಬರಬೇಕು? ಒಟ್ಟಿನಲ್ಲಿ ಭೋಕ್ತೃಗಳಾದ ಜೀವರೂ ಇಲ್ಲ. ಭೋಗ್ಯವಾದ ಈ ಜಗತ್ತೂ ಇರುವುದಿಲ್ಲವೆಂದು ಅಭಿಪ್ರಾಯವು. ಜಲಪ್ರಳಯವೆಂದು ಹೇಳುವ ಪುರಾಣದಂತೆ ಜಲವಾದರೂ ಈ ಜಗತ್ತನ್ನು ಆವರಿಸಿರಬಹುದೇ? ಎಂದರೆ, ಅದೂ ಈ ಮಹಾ ಪ್ರಳಯದಲ್ಲಿ ಇರುವುದಿಲ್ಲ. ಪೃಥ್ವಿಯು ಜಲದಲ್ಲೂ, ಜಲವು ಅಗ್ನಿಯಲ್ಲೂ, ಅಗ್ನಿಯು ವಾಯುವಿನಲ್ಲೂ ವಾಯುವು ಆಕಾಶದಲ್ಲೂ, ಆಕಾಶವು ಪ್ರಕೃತಿ ಯೆಂಬ ಈಶ್ವರ ಶಕ್ತಿಯಲ್ಲೂ ಕ್ರಮವಾಗಿ ಅಡಗಿ ವಿಕವಾಗುವುದು. ಹೀಗಾಗುವುದೇ ಮಹಾಪ್ರಳಯವು. ಹಾಗಾದರೆ ಮೃತ್ಯುದೇವತೆ ಇರಬಹುದೇ? ಎಂದರೆ, ಜೀವರೇ ಇಲ್ಲದಿರುವಾಗ ಯಾವ ದೇವತೆಯೂ ಇರಲಾರದು. ಹಾಗಾದರೆ ಸಾವೇ ಇಲ್ಲದೆ ಅಮೃತವಾಗಿರಬಹುದೇ? ಎಂದರೆ, ಇಲ್ಲ ಸೂರ್ಯನಾಗಲೀ, ಚಂದ್ರನಾಗಲೀ ಯಾರೂ ಅಹೋರಾತ್ರಕಾಲ ನಿಯಾಮಕರೂ ಇರಲಿಲ್ಲ. ಹಾಗಾದರೆ ಏನಿತ್ತು? ಹೇಳಿರಿ. ಎಂದರೆ, 'ಆನೀದವಾತಂ ಸ್ವಧಯಾ ತದೇಕಮ್' ವಾಯು ಇಲ್ಲದೆ ಯಾವುದೋ ಒಂದು ಚೈತನ್ಯವು ಬದುಕಿದ್ದಿತ್ತು. ಹೇಗೆ ಇದ್ದಿತು? ಮಾಯಾ ಶಕ್ತಿಯಿಂದ ಕೂಡಿದ್ದಿತು. ಅದರೂ ಆ ಶಕ್ತಿಯು ಪರಮಾರ್ಥವಲ್ಲವಾದ್ದರಿಂದ ಅದ್ವಿತೀಯವಾಗಿಯೇ ಇದ್ದಿತು. ಅದರಿಂದ ಅದ್ವೈತಕ್ಕೆ ಹಾನಿಯೇನೂ ಆಗಿಲ್ಲ. ಈ ಮಾಯಾ ಶಕ್ತಿಯುಕ್ತವಾದ ಪರಬ್ರಹ್ಮ ಚೈತನ್ಯಕ್ಕಿಂತ ಬೇರೆಯಾಗಿ ಯಾವುದೊಂದೂ ಸೃಷ್ಟಿಯಾದ ನಂತರ ಕಾಣುವ ಈ ಜಗತ್ತು ಇರಲಿಲ್ಲ. ಶ್ರುತಿಯಲ್ಲಿ 'ಸ್ವಧಾ' ಎಂಬ ಪದಕ್ಕೆ ಮಾಯೆಯಿಂದೇ ಅರ್ಥ. ಅದು ಅಸ್ವತಂತ್ರ. ಅಪ್ರಧಾನವಾಗಿ ಈಶ್ವರಾಧೀನವಾಗಿರುವುದು. ಅಲ್ಲದೆ ಈ ಶಕ್ತಿಯು ಪ್ರಳಯದಲ್ಲಿ ಬ್ರಹ್ಮ ಚೈತನ್ಯದೊಡನೆ ಅವಿಭಕ್ತವಾಗಿರುವುದು. ಆದರಿಂದ 'ಏಕಮೇವಾದ್ವಿತೀಯಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮ' ಎಂಬಂತೆ ಇಲ್ಲಿಯೂ ಅರ್ಥವಿರುವುದು. ಶ್ರುತಿಯಲ್ಲಿ 'ಸ್ವಧಾ' ಎಂಬ ಪದಕ್ಕೆ ಪಿತೃಕಾರ್ಯದಲ್ಲಿ ಹೇಳುವ ಸ್ವಧಾ ಶಬ್ದದ ಅರ್ಥವಲ್ಲ. ಪ್ರಳಯದಲ್ಲಿ ಪಿತೃದೇವತೆಗಳೇ ಇಲ್ಲದಿರುವಾಗ ಅವರನ್ನು ಉದ್ದೇಶಿಸಿ, ಕವ್ಯವನ್ನು ಕೊಡುವಾಗ ಹೇಳುವ ಸ್ವಧಾಶಬ್ದಾರ್ಥವು ಇಲ್ಲಿ ಸಮ್ಮತವಲ್ಲ. ಸ್ವಸ್ಮಿನ್ ಧೀಯತೇ ಆಶ್ರಿತ್ಯ ವರ್ತತೇ ಎಂಬ ಅವಯವಾರ್ಥದಿಂದ ಜಗತ್ತು ನೆಲೆಸುವ ಮೂಲಶಕ್ತಿ ಮಾಯೆಯೆಂಬುದೇ ಅದರ ಅರ್ಥವು. ಅದರೊಡನೆ ಇರುವ ಜೀವಂತವಸ್ತು ಪರಬ್ರಹ್ಮ ಚೈತನ್ಯವು. ಅವಾತಂ ಎಂಬ ಪದಕ್ಕೆ ವಾಯುವಿಲ್ಲದೇ ಜೀವಿಸಿದ್ದು ಎಂದರ್ಥ. ಜೀವವಲ್ಲ ಮತ್ತೇನೆಂದರೆ ಪರಬ್ರಹ್ಮವೇ. "ಅಪ್ರಾಣೋಹ್ಯಮನಾಃ ಶುಭ್ರೋ" ಎಂಬುದಾಗಿ ಬೇರೆ ಉಪನಿಷತ್ತಿನಲ್ಲಿ ಪ್ರಾಣವಾಯುವೂ ಮನಸ್ಸೂ ಇಲ್ಲದ ಶುದ್ಧ ಚೇತನವೆಂದು ಹೇಳಿದೆ. ಅದು ಪರಬ್ರಹ್ಮವೇ; ಮತ್ತೊಂದು ಅಲ್ಲ. ಸರ್ವಸ್ವತಂತ್ರವಿದು, ಸ್ವತಃ ಪ್ರಕಾಶವಾಗಿ ನಿತ್ಯಸಿದ್ಧವಾಗಿರುವುದರಿಂದ ಪರತಂತ್ರವಲ್ಲ. ನಮ್ಮ ಶಾಂಕರ ದರ್ಶನದಲ್ಲಿ ಈಶ್ವರನಿಗೆ ಅಧೀನವಾದದ್ದು ಯಾವುದೇ ಒಂದು ಚೇತನ ಅಥವಾ ಅಚೇತನವಾಗಲೀ ಸ್ವತಃ ಸತ್ತಾ-ಸ್ಫೂರ್ತಿಯುಳ್ಳದ್ದಾಗಿರುವುದಿಲ್ಲವಾದ್ದರಿಂದ ಮಾಯಾಶಕ್ತಿಯು (ಜಡಶಕ್ತಿಯು) ಪರಮಾರ್ಥವಲ್ಲ. "ಭೂಯಶ್ಚಾಂತೇ ವಿಶ್ವಮಾಯಾ ನಿವೃತ್ತಿಃ ಮಾಯಾ ಮೇತಾಂ ತರನ್ತಿತೇ" ಎಂದು ಶ್ರುತಿ ಸ್ಮೃತಿಗಳಲ್ಲಿ ಜ್ಞಾನವಾದ ನಂತರ ನಿವೃತ್ತಿಯನ್ನು ಹೊಂದುವುದೆಂದೂ ಅದರಿಂದಲೇ ಅಜ್ಞರಿಂದ ವೇದಾನುಸಾರವಾಗಿ ಕಲ್ಪಿಸಲ್ಪಟ್ಟಿದೆಯೆಂದೂ ಅರಿಯಬಹುದು.

ಶಾಂಕರಭಾಷ್ಯದ ಮಾಯಾಶಬ್ದಾರ್ಥವಿವೇಚನೆ

ಮಾಯಾ, ಪ್ರಕೃತಿ ಇತ್ಯಾದಿ ಪದಗಳಿಗೆ "ಈಶ್ವರಸ್ಯ ಆತ್ಮಭೂತ ಇವ ಅವಿದ್ಯಾಕಲ್ಪಿತೇ ಅವ್ಯಾಕೃತೇ ನಾಮರೂಪೇ ಮಾಯಾಶಕ್ತಿಃ ಪ್ರಕೃತಿ ಇತ್ಯಭಿಲಪ್ಯೇತೇ" ಎಂಬ ಸೂತ್ರ ಭಾಷ್ಯದ ಪಂಕ್ತಿಯನ್ನು ನೋಡುವವರಿಗೆ ಈಶ್ವರನಲ್ಲಿ ಸ್ವರೂಪಕ್ಕೇ ಸೇರಿಕೊಂಡಿರುವಂತೆ ಅವಿದ್ಯೆಯಿಂದ ಕಲ್ಪಿತವಾಗಿರುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವ್ಯಕ್ತ ನಾಮರೂಪಗಳೇ ಅರ್ಥವಾಗುವುವು. ಇದನ್ನು ನಾವು ಹೇಗೆ ಗ್ರಹಿಸ ಬೇಕೆಂಬುದು ವಿಚಾರ. ನನ್ನ ಅಭಿಪ್ರಾಯದಲ್ಲಿ ಯಃಶಾಸ್ತ್ರತಾರ್ಥವನ್ನು ಕೈಬಿಡಬೇಕೆಂದಲ್ಲ. ಅವ್ಯಾಕೃತ ಪ್ರಕ್ರಿಯೆಯಲ್ಲಿ "ತದ್ವೇದಂ ತರ್ಹಿ ಅವ್ಯಾಕೃತ ಮಾಸೀತ್" ಎಂಬುವಲ್ಲಿ ಶಂಕರರು ಬೃ॥ ಭಾಷ್ಯದಲ್ಲಿ ತತ್ ಎಂಬುವಕ್ಕೆ ತದಿತಿ ಬೀಜಾವಸ್ಥಂ ಜಗತ್ ಪ್ರಾಗುತ್ಪತ್ತೇಃ ತರ್ಹಿ-**ತಸ್ಮಿನ್ ಕಾಲೇ ಪರೋಕ್ಷತ್ವಾತ್ ಸರ್ವನಾಮ್ನಾ ಅಪ್ರತ್ಯಕ್ಷಾಭಿಧಾನೇನ ಅಭಿಧೀಯತೇ ಭೂತಕಾಲಸಂಬಂಧಿತ್ವಾತ್ ಅವ್ಯಾಕೃತಭಾವಿನೋ ಜಗತಃ। ಏತಸ್ಯ ಸಾಧ್ಯಸಾಧನಲಕ್ಷಣಸ್ಯ ವ್ಯಾಕೃತಸ್ಯ ಜಗತೋ ವ್ಯಾಕರಣಾತ್ ಸ್ರಾಗ್ ಬೀಜಾವಸ್ಥಾ ಯಾ ತಾಂ ನಿರ್ದಿದಿಕ್ಷತಿ ಅಂಕುರಾದಿ ಕಾರ್ಯಾನುಮಿತಾವಿವ ವೃಕ್ಷಸ್ಯ**" ಎಂದು ಹೇಳಿದ್ದನ್ನು ನೋಡುವಾಗ ಪ್ರತ್ಯಕ್ಷವಾಗಿ ನಾಮರೂಪಗಳಿಂದ ಬಿಡಿಯಾಗಿರುವ ಈ ಜಗತ್ತು ಸೃಷ್ಟಿಗೆ ಮುಂಚೆ ಈಗಿರುವ ನಾಮರೂಪಗಳನ್ನು ಬಿಟ್ಟು ಬೀಜರೂಪವಾದ ಅವಸ್ಥೆಯಲ್ಲಿದ್ದು ಪರೋಕ್ಷವಾಗಿತ್ತೆಂದು ತಿಳಿಯಬೇಕು. ಆ ಬೀಜಾವಸ್ಥೆಯು ನಮಗೆ ಕಾರ್ಯದಿಂದ ಊಹಿಸಲು ಯೋಗ್ಯವಾದ್ದರಿಂದ ಅದನ್ನು ತರ್ಕದಿಂದ ತಿಳಿಯಬೇಕಾಗಿದೆ. ಹೇಗೆ ದೊಡ್ಡ ಆಲದ ಮರವನ್ನು ನೋಡಿ ಅದರಿಂದ ಅವರ ಮೂಲಬೀಜವಿತ್ತೆಂದು ತರ್ಕಿಸುವರೋ. ಹಾಗೆ ಈ ಬೀಜಾವಸ್ಥೆಯೇ ಶುದ್ಧ ಪ್ರತ್ಯಗಾತ್ಮನ (ಪರಮಾತ್ಮನ)ವಿಷಯದಲ್ಲಿರುವ ಅಜ್ಞಾನವೇ ಅವಿದ್ಯೆ. ಇದೇ ವ್ಯಕ್ತಾವ್ಯಕ್ತ ನಾಮರೂಪಗಳ ಬೀಜಶಕ್ತಿ. ಅವಿದ್ಯಾ ಶಕ್ತಿ. ಇದು ಅಧ್ಯಾಸವೆಂಬುವ ಅವಿದ್ಯೆಯಲ್ಲ. ಏಕೆಂದರೆ, ಅದು ಅಧ್ಯಾಸವು ಸೃಷ್ಟಿಯಾದಮೇಲೆ ಜೀವರಿಗೆ ಹುಟ್ಟುವ ಅಹಂಕರ್ತಾ ಭೋಕ್ತಾ ಇತ್ಯಾದಿ ರೂಪವಾದ ಅವಿದ್ಯೆಯು, ಅವ್ಯಕ್ತದೆಶೆಯಲ್ಲಿ ನಾಮರೂಪ ವಿಂಗಡವು ಇಲ್ಲ. ಇದ್ದರೆ, ವ್ಯಕ್ತವಿಭಾಗವಿದೆಯೆಂದಾಗುವುದು. ಸೂತ್ರಭಾಷ್ಯ - "**ಇದಮೇವ ವ್ಯಾಕೃತ ನಾಮರೂಪ ಭಿನ್ನಂ ಜಗತ್ ಪ್ರಾಗವಸ್ಥಾಯಾಂ ಪರಿತ್ಯಕ್ತ ವ್ಯಾಕೃತನಾಮರೂಪಂ ಬೀಜಶಕ್ತ್ಯವಸ್ಥಂ ಅವ್ಯಕ್ತಶಬ್ದಯೋಗ್ಯಂ ದರ್ಶಯತಿ**" ಹೇಗೆ ಘಟ ಪಟ ನಾಮವು ಆದರೆ ಆಕಾರವೆಂಬ ರೂಪವು

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಟ್ಟುವುದಕ್ಕೆ ಮೊದಲು ಅವ್ಯಕ್ತವಾಗಿ ಮೃತ್ತಿಕಾರೂಪದಲ್ಲೇ ಇರುವುದೋ ಹಾಗೆ, ಅಂದಮೇಲೆ ಅವ್ಯಾಕೃತನಾಮರೂಪಗಳೆಂದರೆ ಬೀಜಭೂತವಾದ ಅವಿದ್ಯಾಶಕ್ತಿಯೆಂಬೇ ಅರ್ಥವು.

ಮೂಲಾವಿದ್ಯೆಯೇ ಜಗನ್ನಿರ್ಮಾಣಕ್ಕೆ ಹೇಳಿದ ಶಕ್ತಿ ಬೇರೆಯಲ್ಲ.

"ಅವಿದ್ಯೈವತು ನಃ ಶಕ್ತಿಃ ಸರ್ವಶಕ್ಯಸ್ಯ ಸರ್ಜನೇ" ಎಂದು "ಪರೋಽವಿವೇಕೋ ಭೂತಾನಾಮಾತ್ಮಾವಿದ್ಯೇತಿ ಭಣ್ಯತೇ" ಎಂಬ ಮಾರ್ತಿಕದಿಂದಲೂ "ಯಸ್ಮಿನ್ ಅವಿದ್ಯಯಾ ಸ್ವಾಭಾವಿಕ್ಯಾಕರ್ತೃಕ್ರಿಯಾ ಫಲಾನ್ಯಾರೋಪಣಾ ಕೃತಾ" ಎಂದು ಅಲ್ಲಿರುವ ಭಾಷ್ಯದಿಂದಲೂ ಪ್ರತ್ಯಗಾತ್ಮನ ಅಜ್ಞಾನವೆಂಬ ಮೂಲಕಾರಣವೇ ಅವ್ಯಾಕೃತವೆಂಬುದರ ಅರ್ಥ. ಅದರೆ ಪ್ರತ್ಯಗಾತ್ಮ ಮತ್ತು ಅವನ ಅಧೀನವಾದ ಅವಿದ್ಯಾಶಕ್ತಿ ಈ ಎರಡೂ ಅವ್ಯಾಕೃತ ಪದದ ಅರ್ಥ. ಆದರಿಂದ ಕೆಲವು ಕಡೆ ಪ್ರಕೃತಿಯನ್ನು "ಅವಿದ್ಯಾತ್ಮಿಕಾ ಅವಿದ್ಯಾಲಕ್ಷಣಾ ಅಥವಾ ಅವಿದ್ಯಾ' ಎಂದು ಭಾಷ್ಯಕಾರರು ಕರೆದಿರುವುದು ಈ ಅರ್ಥದಲ್ಲೇ ಹೊರತು ಬೇರೆ ಅರ್ಥದಲ್ಲಲ್ಲ.

ಮಾಯೆಯು ಹುಟ್ಟಿದ್ದಲ್ಲ. ಅನಾದಿ ಕಲ್ಪಿತೆ

'ಅವಿದ್ಯಾಕಲ್ಪಿತೇ' ಎಂದರೆ ಅಧ್ಯಾಸದಿಂದ ತೋರುವುದೆಂದೇ ಅರ್ಥವು ಅಧ್ಯಾಸ ಮೊದಲಿದ್ದು ಅದರಿಂದ ಇದು ಹುಟ್ಟಿಕೊಂಡಿತೆಂದರ್ಥವಲ್ಲ. ಮಾಯೆಯು ಹುಟ್ಟಿದ್ದಾದರೆ 'ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ' ಎಂದು ಅನಾದಿಯೆಂದು ಹೇಳಿದ್ದು ತಪ್ಪಾಗುವುದು. ಬ್ರಹ್ಮವನ್ನು ಬಿಟ್ಟು ಅನಾದಿಯಾದದ್ದು ಸಾದಿಯಾದದ್ದು ಎಲ್ಲವೂ ಸತ್ಯವಲ್ಲ. ಅವಿದ್ಯಾ ಕಲ್ಪಿತ-ಭ್ರಾಂತಿ ಸಿದ್ಧವೆಂತಲೇ ಅರ್ಥವು. ಅವ್ಯಾಕೃತ ಎಂದರೆ ವ್ಯಕ್ತವಲ್ಲ ವಿಭಕ್ತವಲ್ಲವೆಂದರ್ಥ. ವಿಭಕ್ತವಲ್ಲದ ನಾಮರೂಪಗಳೆಂದರೆ ಅವಿದ್ಯಾಶಕ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

(ಜಡಶಕ್ತಿ) ಇದು ಅಸ್ವತಂತ್ರ. ಈಶ್ವರಾಶ್ರಿತವಾಗಿಯೇ ತೋರುವುದು, ಬ್ರಹ್ಮನ ಸತ್ತೆಯಿಂದಲೇ ಅಸ್ತಿತ್ವವನ್ನು ಹೊಂದಿರುವುದು. ಇದು ಪರಮಾರ್ಥ ವಲ್ಲವೆಂಬುದನ್ನು ತಿಳಿಸಲು 'ಅವಿದ್ಯಾ ಕಲ್ಪಿತೇ' ಎಂದು ಹೇಳಿದೆ. ಅಜ್ಞರಾದ ಜೀವರು ವೇದವು ಹೇಳಿದಂತೆ ಈ ಶಕ್ತಿಯನ್ನು ಕಾರ್ಯವಾದ ಈ ಜಗತ್ತಿಗೆ ಮೂಲವಾಗಿ ಬೀಜಶಕ್ತಿ ರೂಪವಾಗಿತ್ತೆಂದೂ ಅನಾದಿಯೆಂದೂ ಕಲ್ಪಿಸಿ ಹೇಳುವರು. ಆದರಿಂದ ಅದ್ವೈತಕ್ಕೆ ಅದ್ವಿತೀಯ ಬ್ರಹ್ಮವಾದಕ್ಕೆ ಹಾನಿಯೇನೂ ಇಲ್ಲವೆಂಬುದಾಗಿ ಅರಿಯಬೇಕು. ಸೃಷ್ಟಿಗೂ ಇದೇ ಮೂಲ ಕಾರಣ, ಜೀವರ ಅಧ್ಯಾಸವೆಂಬುವ ಅವಿದ್ಯೆಗೂ ಕಾರಣ. ಈ ಬೀಜವು ವಿದ್ಯೆಯಿಂದ ನಿವೃತ್ತಿಯಾದರೆ ಮುಕ್ತಿ, ಇದು ಇದ್ದರೆ ಬ್ರಹ್ಮನಿಗೆ ಸೃಷ್ಟಿಸುವ ಶಕ್ತಿ, ಶಕ್ತಿಯದ್ದರೆ ಸೃಷ್ಟಿ, ಮುಂತಾದ ಕಾರ್ಯಗಳು. ಅಹಂ ಮಮ ಎಂಬ ಅಧ್ಯಾಸಕ್ಕೂ ಮೂಲವಾದ ಅನಾದಿ ತತ್ವಾಜ್ಞಾನವು ಅಥವಾ ಮಾಯೆಯು ಕಾರಣವಾಗಿದೆ. ಇದರಿಂದ ಈ ಅಧ್ಯಾಸವೇ (ಭ್ರಾಂತಿಯು) ಹುಟ್ಟಿದ್ದು. ಇದು ಅನಾದಿಯಾಗಿ ಜನ್ಮ ಜನ್ಮಾಂತರದಿಂದ ಅವಿಚ್ಛಿನ್ನವಾಗಿ ಪ್ರವಾಹದಂತೆ ಹರಿದು ಹುಟ್ಟಿ ಬಂದಿದೆ. ತತ್ವಜ್ಞಾನವು ಬಾರದೇ ಇದ್ದದ್ದರಿಂದ ಇದು ಬರುತ್ತಲೇ ಇರುವುದು. ಅದರಿಂದ **'ಅನಾದಿರನಂತೋಽಯಂ ನೈಸರ್ಗಿಕೋಽಧ್ಯಾಸಃ'** ಎಂದು ಹೇಳುವುದು. ಈ ಜೀವೇಶ್ವರ ಎರಡು ಉಪಾಧಿಗಳಾದ ಅಂತಃಕರಣ-ಮಾಯೆ. ಇದು ಹೋಗುವವರೆಗೂ ಭೇದವು ಹೋಗುವುದಿಲ್ಲವೆಂದು ಹೇಳಬೇಕು. ಕೂಪ ತಟಾಕವೆಂಬ ಎರಡು ಪಾತ್ರಗಳು ಇರುವವರೆಗೂ ಪ್ರತಿಬಿಂಬಗಳ ಭೇದವೂ ಹೋಗುವುದಿಲ್ಲ, ತೋರಿಯೇ ತೋರುತ್ತದೆ. ಜಲಪಾತಗಳಲ್ಲಿ ನೀರು ಒಣಗಿ ನಾಶವಾಗುವಂತೆ (ಅಂದ ಪಾತ್ರದಿಂದ) ಉಪಾಧಿಗಳು ನಾಶವಾಗಲೇಬೇಕೇ? ಎಂದು ಪ್ರಶ್ನೆ ಯೇಳುವುದು, ಹಾಗಿಲ್ಲ, ಮತ್ತೇನೆಂದರೆ; ಜೀವಂತನಾಗಿರುವಾಗಲೇ ಐಕ್ಯಜ್ಞಾನದಿಂದ ಮುಕ್ತಿಯಾಗುವುದೆಂದು ಶಂಕರರು ಪದೇ ಪದೇ ಬೋಧಿಸು ತ್ತಲೇ ಇರುವಾಗ ಉಪಾಧಿಗಳ ನಾಶದ ನಿರೀಕ್ಷೆಯು ಬೇಕಿಲ್ಲ. ಅಂತಃಕರಣ ಗಳು ನಾಶವಾಗದೆ ಜೀವನ್ಮುಕ್ತಿಯು ನಾಶವಾಗುವುದಿಲ್ಲ. ಹಾಗೆ

Sri Vidyashankar Digital Centre, Sringeri

CC-O. In Public Domain. Digitized by eGangotri

ನಾಶವಾಗಿದ್ದರೆ, ಈಗ ಕಾಣುವ ಬದ್ಧ ಜೀವರೂ ಆವರ ಪ್ರಪಂಚವೂ ತೋರುತ್ತಿರಲಿಲ್ಲ. ಒಬ್ಬ ಮುಕ್ತನಾದರೆ ಎಲ್ಲರೂ ಮುಕ್ತರಾಗಿಬಿಡುತ್ತಿದ್ದರು. ಹಾಗಾಗುವುದಿಲ್ಲ. ಆಗಿಲ್ಲ, ಮತ್ತೇನೆಂದರೆ! ಅಂತಃಕರಣ, ಶರೀರ ಮೊದಲಾಗಿ ಎಲ್ಲಾ ಜೀವಜಂತುಗಳ ಸ್ಥಾನಗಳು ಮಿಥ್ಯೆ. ಸತ್ಯವಲ್ಲ, ಈಶ್ವರನ ಉಪಾಧಿ ಮಾಯೆಯೂ ಅನಾದಿಯಾಗಿ ಶ್ರುತಿಯು ಹೇಳಿದಂತೆ ಕಲ್ಪಿಸಲ್ಪಟ್ಟಿದ್ದರೂ ಜ್ಞಾನಿಗೆ ಅದೂ ಮಿಥ್ಯೆಯಾಗುವುದು, ಪ್ರತ್ಯಗಭಿನ್ನ ಬ್ರಹ್ಮ ಚೈತನ್ಯವನ್ನು ಬಿಟ್ಟು ಯಾವುದೊಂದು ಜೀವವೂ ಭೋಗ್ಯ ಪ್ರಪಂಚವೂ ಸತ್ಯವಾಗಿಲ್ಲವೆಂದು ತಿಳಿದರೆ ಸಾಕು. ಆಲ್ಲಿಗೆ ಜೀವನ್ಮುಕ್ತಿಯೇ ಆಗುವುದು. ಅದರಿಂದ ಜೀವನ ಜೀವಭಾವ (ಅಹಂ ಕರ್ತಾ ಭೋಕ್ತಾ) ಎಂಬ ಭಾವವು ಹೋಯಿತೆಂದರೆ ಅಲ್ಲಿಗೆ ಮುಕ್ತಿ, ಅಹಂತತೆಯೂ ಮಮತೆಯೂ ಹೋದರೆ ಉಳಿಯುವುದು ಆತ್ಮನ ಸ್ವರೂಪವಾದ ನಿತ್ಯಸತ್ಯವಾದ ಪರಬ್ರಹ್ಮರೂಪ, ಅದು ಅಖಂಡ–ಪರಿಪೂರ್ಣ, ಸಚ್ಚಿದಾನಂದ. ಇದೇ ಅಪರೋಕ್ಷಾನುಭವದಲ್ಲಿ ಸಾಕ್ಷಿಭೂತನಾಗಿರುವ ಅದ್ವಿತೀಯಾತ್ಮನು ಹೀಗೆಂದು ಅರಿಯಬೇಕು. **"ಅತ್ರಬ್ರಹ್ಮ ಸಮಶ್ನುತೇ" "ವಿಮುಕ್ತಶ್ಚ ವಿಮುಚ್ಯತೇ"** ಇತ್ಯಾದಿ ಶ್ರುತಿಗಳು ಜೀವನ್ಮುಕ್ತಿಗೂ ವಿದೇಹಮುಕ್ತಿಗೂ ಆಧಾರವಾಗಿದೆ.

ಯದಾಭೂತ ಪೃಥಗ್‌ಭಾವಮೇಕಸ್ಥ ಮನುಪಶ್ಯತಿ।
ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ॥ (ಗೀತೆ)

'ಈಶಾದಿ ವಿಷಯಾನ್ತಂ ಯತ್ತದವಿದ್ಯಾ ವಿಜೃಂಭಿತಮ್' ಎಂಬ ವಾರ್ತಿಕದಲ್ಲಿ ಈಶ್ವರನೇ ಮೊದಲಾಗಿ ಜಡವಸ್ತು ಪರ್ಯಂತ ಇರುವ ಎಲ್ಲಾ ಪದಾರ್ಥಗಳು ಅವಿದ್ಯೆಯ ವಿಕಾಸವೆಂದು ಹೇಳಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲು ಜೀವ ಕಲ್ಪನೆ-ಆನಂತರ ಇತರ ಕಲ್ಪನೆಗಳು

ಅನಾದಿಯಾದ ಅವಿದ್ಯಾಕಲ್ಪನೆ ಬ್ರಹ್ಮನಲ್ಲಿ.(ಅತ್ಮನಲ್ಲಿ) ಜೀವಕಲ್ಪನೆಯು ಮೊದಲು, ಅದು ಅಹಮ್-ನಾನು ಮನುಷ್ಯನು. ಆದರಿಂದ ಕರ್ತಾ, ಭೋಕ್ತಾ ಎಂದು ಕಲ್ಪನೆ. ಅನಂತರ ನನ್ನವು ಎಂದು-ಪುತ್ರ ಮಿತ್ರಾದಿಗಳಲ್ಲಿ ಮಮತಾ ಕಲ್ಪನೆಗಳು, **"ಅಹಮಿದಂ ಮಮೇಡಂ ಇತಿ ನೈಸರ್ಗಿಕೋಯಂ ಲೋಕ ವ್ಯವಹಾರಃ"** ಎಂದು ಸೂ-ಭಾಷ್ಯ

"ಜೀವಂ ಕಲ್ಪಯತೇ ಪೂರ್ವಂ ತತೋ ಭಾವಾನ್ ಪೃಥಗ್ ವಿಧಾನ್" ಎಂದು (ಗೌ-ಕಾರಿಕೆ) ಜೀವಕಲ್ಪನೆಗೂ ಮೂಲವಾಗಿದ್ದುದು ಆತ್ಮಾಜ್ಞಾನ ಕಲ್ಪನೆ, **"ಅನಿಚ್ಛಿತಾ ಯಥಾ ರಜ್ಜುಃ ಅಂಧಕಾರೇ ವಿಕಲ್ಪಿತಾ। ಸರ್ಪಧಾರಾದಿಭಿರ್ಭಾವೈಸ್ತದ್ವದಾತ್ಮಾ ವಿಕಲ್ಪಿತಃ"** ಎಂದಂತೆ **'ಅಹಂ ನ ಜಾನಾಮಿ'** ಎಂದು ಅಧ್ಯಾಸವಿರುವಾಗಲೇ ಭ್ರಮಕಾರಣವಾದ ಅನಾದ್ಯಜ್ಞಾನವೂ ಅನುಭವದಲ್ಲೇ ಇರುವುದು. ಈ ಕಾರ್ಯಕಾರಣಗಳು ಎರಡೂ ಅಂತಃಕರಣದ ವೃತ್ತಿಗಳು, ಇದರಂತೆ ಸಂಶಯವೂ ಕಾರ್ಯ. ಈ ಮೂರೂ ತಮೋಗುಣವಾದ ಅವ್ಯಕ್ತ ಅವ್ಯಾಕೃತವೆಂಬುವ ಪರಮ ಮೂಲಾಜ್ಞಾನದ ಪರಿಣಾಮಗಳು, (ಗೀ. ಭಾ. ೧೩-೨) ಅಂದರೆ ಅಗ್ರಹಣವು ಅಂತಃಕರಣದ ವೃತ್ತಿ, ಕಾರಣ ರೂಪದಲ್ಲೂ ಅಹಮಧ್ಯಾಸವೆಂಬ ಕಾರ್ಯರೂಪದಲ್ಲೂ, ಜಾಗ್ರತ್‌ಸ್ವಪ್ನಗಳಲ್ಲಿ ತೋರುವುವು, ಅವ್ಯಾಕೃತ ಮೂಲಾವಿದ್ಯೆಯೆಂಬುದು ಈ ಮೂರು ಬಗೆಯ ತಾಮಸ ವೃತ್ತಿಗೂ ಮೂಲವಾದದ್ದು ಜಡಶಕ್ತಿ.

ಮೂಲಾವಿದ್ಯೆಗೆ ಬ್ರಹ್ಮವೇ ಆಶ್ರಯ ಮತ್ತು ವಿಷಯ

ಅವ್ಯಾಕೃತ ಪ್ರಕೃತಿಯೆಯಲ್ಲಿ ಬ್ರಹ್ಮಾತ್ಮನಲ್ಲಿ ಹೇಳಿದಂತೆ ಜಡಶಕ್ತಿ ಅತ್ಮಚೈತನ್ಯಾಶ್ರಿತ, ಇದು ಈಶ್ವರನಂತೆ ಅನಾದಿ, ಅಸ್ವತಂತ್ರ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅನಿರ್ವಚನೀಯ, ಬ್ರಹ್ಮವಂತೆ ಸತ್ತು ಅಲ್ಲ. ಮುಂದೆ ಜ್ಞಾನದಿಂದ ಬಾಧಿತವಾಗುವುದು. ಮೊಲದ ಕೊಂಬಿನಂತೆ ಅಸತ್ತು ಶೂನ್ಯವೂ ಅಲ್ಲ. ಕಾರ್ಯಾನುಸಾರವಾಗಿ ಜಾಗರ ಸ್ವಪ್ನಗಳಿಗೆ ಬೀಜವಾಗಿತ್ತೆಂದು ಅಧ್ಯಾಸಕಾಲದಲ್ಲೇ ವೇದದಲ್ಲಿ ಹೇಳಿದಂತೆಯೇ ತರ್ಕಿಸಲ್ಪಡುವುದು. ಇದರಿಂದ ಹಿಂದೆ ಹೇಳಿದಂತೆ ಶೂನ್ಯವಲ್ಲ, ಸುಷುಪ್ತಿಯಿಂದ ಎದ್ದಮೇಲೆ ಕಾರಣರೂಪವಾಗಿ ಪ್ರತ್ಯಕ್ಷವಾಗುವುದು ಇದು. ಅದರಿಂದ ಶಕ್ತಿಯು ಅವ್ಯಕ್ತವಾಗಿ ಬೇರೆಯಾಗಿದೆಯೆಂದು ಹೇಳುವುದು. ಪರಿಣಾಮ ಪರಿಣಾಮಿಗಳಿಗೆ ತಾದಾತ್ಮ್ಯವನ್ನು ಮೃತ್ ಘಟಾದಿಗಳಿಗೆ ಹೇಳುವಂತೆ ಇಲ್ಲಿಯೂ ಹೇಳುವುದರಿಂದ ಮೂಲಾಜ್ಞಾನವನ್ನು ಅಗ್ರಹಣ, ಅನಾದಿ ಅವಿವೇಕ. ಆತ್ಮಾಜ್ಞಾನ ಪದಗಳಿಂದ ಕರೆಯುವುದು. ಪಾರ್ಥಿಕದಲ್ಲೂ ತದನುಯಾಯಿಗಳಾದ ಭಾವಾವಿದ್ಯಾವಾದಿಗಳು ಪಂಚಪಾದೀ-ಭಾವತಿ - ಆನಂದಗಿರಿ - ರತ್ನಪ್ರಭಾ ಮೊದಲಾದ ಟೀಕಾಗ್ರಂಥಗಳಲ್ಲೂ ಶ್ರೀ ವಿದ್ಯಾರಣ್ಯ ಸಾಯಣಭಾಷ್ಯಗಳಲ್ಲೂ ಅನೇಕ ನವೀನಗ್ರಂಥಗಳಲ್ಲೂ ಪ್ರಚುರವಾಗಿ ಕರೆದಿರುವುದು ಕಂಡಿದೆ. ಪಂಚಪಾದಿಕಾಕಾರರು ಕಲ್ಪಿತವೆಂದೇ ಅಭಿಪ್ರಾಯಪಟ್ಟಿದ್ದಾರೆ. ಜ್ಞಾನದಿಂದ (ಪರಮಾರ್ಥ)ವಸ್ತು ಹೋಗುತ್ತದೆಯೆಂದು ಎಲ್ಲಿಯೂ ಹೇಳಿಲ್ಲ. ಅವಿದ್ಯೆ ಪರಮಾರ್ಥವಸ್ತುವೆಂದು ಅವರು ಹೇಳಿಲ್ಲ, ಅಧುನಿಕ ವಿಮರ್ಶಕರು ಈ ಸೂಕ್ಷ್ಮ ವಿಚಾರ ಮಾಡದೆ ಹಾಗೆ ಹೇಳಿಲ್ಲವೆಂದು ಪ್ರಚಾರ ಮಾಡಿರುವುದು ವಿಷಾದನೀಯ ಮತ್ತು ಪಂಚಪಾದಿಯನ್ನು ಪೂರ್ವಾಪರ ನೋಡದೆ ಹೇಳಿದ ಮಾತು.

ಸೃಷ್ಟಿಗೂ ಮೂಲಾವಿದ್ಯೆಯು ಉಪಯುಕ್ತವಾಗಿದೆ

'ಸದೇವ ಸೌಮ್ಯೇದಮಗ್ರ ಆಸೀತ್' 'ಆತ್ಮಾ ವಾ ಇದಮೇಕ ಏವಾಗ್ರ ಆಸೀತ್, ತತ್ಸದಾಸೀತ್ ಇತ್ಯಾದಿ ಶ್ರುತಿಗಳಲ್ಲಿ ಬ್ರಹ್ಮವು ಅವ್ಯಕ್ತ ಶಕ್ತಿಯುಕ್ತವಾಗಿಯೇ ಇದ್ದಿತೆಂದು ನಂತರ ಸೃಷ್ಟಿಸಿತೆಂದೂ ಅರ್ಥ ಮಾಡಬೇಕು. ಈಗಿನ ವಿಮರ್ಶಕರು ಬ್ರಹ್ಮಪ್ರಾಂತೀ ಇತ್ತೆಂದು ಹೇಳಿ ಅರ್ಥಮಾಡಿ

Sri Vidyabharathi Book Centre, Shimoga

CC-O. In Public Domain. Digitized by eGangotri

ರುವುದು ತಪ್ಪು. ಮೂಲಾಶಕ್ತಿ ಪ್ರಕೃತಿಯು ಇದರೊಂದಿಗೆ ಇದ್ದ ಪಾತ್ರ ದಿಂದ ಅದ್ವೈತಕ್ಕೆ ಹಾನಿಯಿಲ್ಲ. ಇದ್ದರೂ ಈ ಶಕ್ತಿಯು ಪರಮಾರ್ಥವಲ್ಲ. ಅಲ್ಲದೆ ಗಿನೇ ಅಧ್ಯಾಯದಲ್ಲಿ ಜೀವ ಬ್ರಹ್ಮರ ಐಕ್ಯವನ್ನು ಯಥಾರ್ಥವಾಗಿ ಹೇಳುವ ಸಂದರ್ಭದಲ್ಲಿ ಕ್ಷೇತ್ರ ಕ್ಷೇತ್ರಜ್ಞ ಸಂಯೋಗವೆಂಬ ಅಧ್ಯಾಸದಿಂದ ಹುಟ್ಟಿತೆಂದು ಹೇಳಿದೆಯಾದ್ದರಿಂದ ಐಕ್ಯಸಾಧನೆಗೆ ಅಧ್ಯಾಸವನ್ನು ನಿಮಿತ್ತ ಮಾಡಿ ಹೇಳಿದ್ದು ಅಷ್ಟೆ. ಸೃಷ್ಟಿಯು ಪರಮಾರ್ಥವಲ್ಲವಾದ್ದರಿಂದ ಚರಾಚರ ಸೃಷ್ಟಿ ತೋರಿಕೆ ಮಾತ್ರವೆಂದು ತಿಳಿಸುವುದು ಮುಖ್ಯವಾಯಿತು. ಹೀಗೆ ಅಭಿಪ್ರಾಯ-ಭೇದವನ್ನು ಹೇಳಬಹುದು.

ಮಂದ ಮಧ್ಯಮಾಧಿಕಾರಿಗಳಿಗೆ ಈಶ್ವರನ ಸೃಷ್ಟಿಯು ಸತ್ಯವೆಂದು ತಿಳಿದಾಗಲೇ ಕರ್ಮ, ಉಪಾಸನಾದಿ ಸಾಧನೆಗಳಿಗೆ ಅನುಕೂಲಿಸುವುದು. ಈ ಹಂತದಲ್ಲಿ ಈ ಅಧ್ಯಾಸದ ಪ್ರಸ್ತಾಪವನ್ನು ಮಾಡಬಾರದು. ಪ್ರಪಂಚ ಮಿಥ್ಯೆಯೆಂದು ತಿಳಿಸಬಾರದು. **"ನ ಬುದ್ಧಿಭೇದಂ ಜನಯೇತ್ ಅಜ್ಞಾನಂ ಕರ್ಮಸಂಗಿನಾಮ್"** ಎಂದು ನಾವು ಹಿಂದೆಯೇ ತಿಳಿಸಿದ್ದೇವೆ.

ಜನ್ಮಾಂತರಕ್ಕೆ ಕಾರಣ ಅವಿದ್ಯೆ-ಕಾಮ, ಕರ್ಮ, ವಾಸನೆ

ದೇಹಾದಿಗಳಲ್ಲಿ 'ಅಹಮ್' ಎಂದು ಬರುವ ಆತ್ಮಾಭಿಮಾನವೇ ಅವಿದ್ಯೆ. ಇದರೊಂದಿಗೆ ಆಮೇಲೆ ಮಮತಾಭಿಮಾನವೂ ಅವಿದ್ಯೆ-ಇದು ಪುತ್ರ, ಮಿತ್ರ, ಕಳತ್ರಾದಿಗಳಲ್ಲಿ ಹುಟ್ಟುವ ಮಮತಾಭಿಮಾನ. ಈ ಅಭಿಮಾನವನ್ನೇ ಶಂಕರರು ಅಧ್ಯಾಸ, ಮಿಥ್ಯಾಜ್ಞಾನ, ಮಿಥ್ಯಾಪ್ರತ್ಯಯ ಇತ್ಯಾದಿ ಪದಗಳಿಂದ ಕರೆಯುತ್ತಾರೆ. ಇದರಿಂದ ಕಾಮವು (ರಾಗ) ಕಾಮದಿಂದ ಕರ್ಮಗಳು (ಪಾಪ ಪುಣ್ಯಗಳು) ಹುಟ್ಟುವುವು. ಅನಂತರ ಇಹದಲ್ಲಿ ಅನೇಕ ಭೋಗವಸ್ತುಗಳನ್ನು ಅನುಭವ ಮಾಡಿದ ಸಂಸ್ಕಾರವೇ ವಾಸನೆ. ಒಳ್ಳೆಯ ಸಂಸ್ಕಾರ, ಕೆಟ್ಟ ಸಂಸ್ಕಾರಗಳು-ಈ ಎರಡೂ ವಾಸನೆಗಳೇ. ಯಾವ ಜನ್ಮದಲ್ಲಿ ಇವುಗಳನ್ನು

Sri Vidyabharathi Book Centre, Shingeri

CC-O. In Public Domain. Digitized by eGangotri

ರೂಢಿಸಿಕೊಂಡಿದ್ದೇವೋ ಅದೇ ವಾಸನೆ ಎಂದು ಹೇಳಲ್ಪಡುವುದು. ಈ ಮೂರೂ ಜನ್ಮಾಂತರಕ್ಕೆ ಕಾರಣ. **'ತಂ ವಿದ್ಯಾಕರ್ಮಣೀ ಸಮನ್ವಾರಭೇತೇ ಪೂರ್ವಪ್ರಜ್ಞಾ ಚ'** ಎಂಬುದು ಶ್ರುತಿ. ಇದರ ಅರ್ಥ-ಈ ದೇಹವನ್ನು ಬಿಟ್ಟುಹೋಗುವ ಜೀವಾತ್ಮವನ್ನು ವಿದ್ಯೆ (ಉಪಾಸನೆ–ಉತ್ತಮೋಪಾಸನೆ, ಅಧಮೋಪಾಸನೆಗಳು ಹಿಂಬಾಲಿಸಿ ಬರುತ್ತದೆ. ಕಾಮ್ಯಕರ್ಮ (ಶುಕ್ಲ) ನಿಷಿದ್ಧ ಸುರಾಪಾನಾದಿಕರ್ಮಗಳು (ಕೃಷ್ಣ) ಮಿಶ್ರ-ಶುಕ್ಲಕೃಷ್ಣ-ಈ ಮೂರರಿಂದ ಮೂರು ಜನ್ಮಗಳು-ದೇವಜನ್ಮ, ನರಕ ಜನ್ಮ, ಮಾನವ ಜನ್ಮ.

ಶುಭ್ರೈರಾಪ್ನೋತಿ ದೇವತ್ವಂ ನಿಷಿದ್ಧೈರ್ನಾರಕೀಂ ಗತಿಮ್ ।
ಉಭಾಭ್ಯಾಂ ಪುಣ್ಯಪಾಪಾಭ್ಯಾಂ ಮಾನುಷ್ಯಂ ಲಭತೇಽವಶಃ ॥

ಕಾಮ್ಯಕರ್ಮವಲ್ಲದ್ದು ವಿಹಿತವಾದ ನಿತ್ಯನೈಮಿತ್ತಿಕ ಕರ್ಮವು-ಅಶುಕ್ಲ. ಪಾಪವಲ್ಲದ್ದು-ಅಕೃಷ್ಣ, ಇವು ಯೋಗಿಗಳಿಗೆ ಆನ್ವಯಿಸುವುದು. ಇತರರಿಗೆ ಶುಕ್ಲ, ಕೃಷ್ಣ ಮತ್ತು ಮಿಶ್ರ. (ಕಾಮ್ಯ, ನಿಷಿದ್ಧ ಸಂಮಿಶ್ರಕರ್ಮವು ಯೋಗಿಗಳಲ್ಲದವರಿಗೆ)

ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಂ
ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸನ್ಯಾಸಿನಾಂ ಕ್ವಚಿತ್ ॥–ಗೀತೆ

ಮೇಲ್ಕಂಡ ವಿಷಯಕ್ಕೆ ಯೋಗಸೂತ್ರವೇ ಪ್ರಮಾಣ.

'ಕರ್ಮಾ ಶುಕ್ಲಕೃಷ್ಣ ಯೋಗಿನಸ್ತ್ರಿವಿಧಮಿತರೇಷಾಂ'
(ಯೋಗಸೂತ್ರ 4-7)

''ತತಸ್ತದ್ವಿಪಾಕಾನುಗುಣಾನಾಮೇವ ಅಭಿವ್ಯಕ್ತಿರ್ವಾಸನಾ ನಾಮ್''
ಕರ್ಮವಿಪಾಕಕ್ಕನುಗುಣವಾಗಿಯೇ ವಾಸನೆಗಳು ಅಭಿವ್ಯಕ್ತವಾಗು

Sri Vidyabharathi Book Centre, Sringeri

CC-O. In Public Domain. Digitized by eGangotri

ವುವು. ವಿರುದ್ಧವಾದುವುಗಳಿಗೆ ಅಭಿವ್ಯಕ್ತಿ ಇಲ್ಲ. ಉದಾ:-ದೇವಜನ್ಮಕ್ಕೆ ಕಾರಣವಾದ ಯಜ್ಞಾದಿಗಳಿಂದ ದೇವಜನ್ಮವು ಬಂದರೆ ಚಿತ್ತದಲ್ಲಿ ಮಾನುಷ್ಯರ ಭೋಗವಾಸನೆಗಳು ಸುಪ್ತವಾಗಿರುತ್ತವೆ. ಏಕೆಂದರೆ, ಮಾನುಷಭೋಗ-ವಾಸನೆಯು ವ್ಯಕ್ತವಾದರೆ ದಿವ್ಯಭೋಗವಾಗುವುದಿಲ್ಲ. ಮಾನಷಭೋಗ-ವಾಸನೆಯು ದೇವಭೋಗವಾಸನೆಗೆ ವಿರುದ್ಧವಾದುದು. ಅದ್ದರಿಂದ ದೇವ-ಭೋಗವಾಗುವಾಗ ಮಾನುಷಭೋಗವಾಸನೆಯು ಅಡಗಿರುವುದು. ಈ ಮಾನುಷಭೋಗವಾಸನೆಯು ನಡುವೆ ಬರುವ ದೇವಪಾದಿ ಜನ್ಮಗಳು ಸಹಸ್ರಾರು ಬಂದಿದ್ದರೂ ಪುನಃ ನರಜನ್ಮವು ಬಂದಾಗ ಅಭಿವ್ಯಕ್ತವಾಗುವುದು. ಅದು ಹೋಗುವುದಿಲ್ಲ. **'ಯುಗಸಹಸ್ರಕೋಟ್ಯಂತರಿತಾಪಿ ವಾಸನಾ ನೋಚ್ಛಿದ್ಯತೇ'** (ಶಾಂ. ಭಾಷ್ಯ-ಪಾಂ. 6) ಎಂದು ಶಂಕರರು ಹೇಳಿಯೇ ಇರುವರು–ಸಹಸ್ರಕೋಟಿ ಯುಗಗಳು ನಡುವೆ ಸಂದುಹೋಗಿದ್ದರೂ ಮೊದಲು ಹುಟ್ಟಿದ ಕರ್ಮವಾಸನೆಯು ನಶಿಸುವುದಿಲ್ಲ ಎಂದು ಅರ್ಥ. ಕ್ರಿಯಾ ಸಂಸ್ಕಾರ, ಜ್ಞಾನ ಸಂಸ್ಕಾರ, ರಾಗಾದಿದೋಷಸಂಸ್ಕಾರ-ಈ ಮೂರು ಬೀಜವಾಗಿ ಅವ್ಯಕ್ತವಾಗಿದ್ದು ಪುನಃ ಅದೇ ಜಾತಿಯ ಜನ್ಮವು ಬರುವಾಗ ವ್ಯಕ್ತವಾಗುವುದು–

'ಜಾತಿದೇಶಕಾಲವ್ಯವಹಿತಾನಾಮಪಿ ಆನಂತರ್ಯಂ ಸ್ಮೃತಿ-ಸಂಸ್ಕಾರಯೋರೇಕರೂಪತ್ವಾತ್' –ಯೋಗಸೂತ್ರ. ಉದಾ:–ಕ್ರಿಯಾ ಸಂಸ್ಕಾರವು ಕ್ರಿಯಾ ರೂಪವಲ್ಲೂ, ಜ್ಞಾನ ಸಂಸ್ಕಾರವು ಸ್ಮರಣೆಯರೂಪ ದಲ್ಲೂ ಜೀರೆ ರಾಗಾದಿ ಸಂಸ್ಕಾರಗಳು ರಾಗಾದಿ ರೂಪವಲ್ಲೂ ಪರಿಣಮಿಸಿ ವ್ಯಕ್ತವಾಗುವುದು. ಉದಾ:–ಸುಪ್ತಿ, ಪ್ರಬೋಧಗಳು, ಶಾಂಕರಾಭಾಷ್ಯ ಛಾಂದೋಗ್ಯ ಷಷ್ಠದಲ್ಲಿ–ಹುಲಿ, ಸಿಂಹ, ತೋಳ, ವರಾಹ ಮುಂತಾದ ಪ್ರಾಣಿ ಗಳು ಮಲಗಿ ಚೆನ್ನಾಗಿ ನಿದ್ರೆ ಮಾಡಿದಾಗ ಆಯಾಯ ಪ್ರಾಣಿಗಳ ವಾಸನೆಗಳು ಅಂದರೆ ಸಂಸ್ಕಾರಗಳು ಅಡಗಿ ಹೋಗಿದ್ದರೂ ಎದ್ದಮೇಲೆ ಮಲಗುವ ಮುಂಚೆ ಇದ್ದ ಸಂಸ್ಕಾರವ್ಯಕ್ತಿಯಾಗಿಯೇ ಕಂಡು ಬರುವುದು. ಹೇಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಲಿಯು ಹಸುವನ್ನು ಕೊಂದು ಮಾಂಸವನ್ನು ತಿನ್ನುವ ಸಂಸ್ಕಾರವುಳ್ಳದ್ದೋ, ಸಿಂಹವು ಆನೆಯನ್ನು ಕೊಂದು ತಿನ್ನುವ ಸಂಸ್ಕಾರವುಳ್ಳದ್ದೋ, ತೋಳ ನಾಯಿಯನ್ನು ಹಿಡಿದು ತಿನ್ನುವ ಸಂಸ್ಕಾರವುಳ್ಳದ್ದೋ. ಹಾಗೆಯೇ ಪ್ರತಿಯೊಂದು ಪ್ರಾಣಿಯೂ ಆಯಾಯ ಸಂಸ್ಕಾರವುಳ್ಳದ್ದಾಗಿ ಮಲಗಿದ್ದರೂ ಎದ್ದಮೇಲೆ ಅದೇ ಸಂಸ್ಕಾರದಿಂದ ತನ್ನ ತನ್ನ ಆಹಾರವನ್ನು ತೆಗೆದುಕೂಳ್ಳುವುದು. ಅವುಗಳಿಗೆ ನಿದ್ರೆ ಬಂದಾಗ ಸಂಸ್ಕಾರವು ನಾಶವಾಗುವುದಿಲ್ಲ; ಗೂಢವಾಗಿ ಚಿತ್ತದಲ್ಲಿ ಅಡಗಿರುತ್ತದೆ. ಹಾಗೆಯೇ ಸೃಷ್ಟಿಯು ಮುಗಿದು ಪ್ರಳಯವಾದರೂ ಪುನಃ ಸೃಷ್ಟಿಯಾದಾಗ ಮೊದಲಿದ್ದ ಆಯಾಯ ಸಂಸ್ಕಾರವುಳ್ಳವುಗಳಾಗಿಯೇ ಸೃಷ್ಟಿಯಾಗುವುವು. ಸಾವಿರಾರು ವರ್ಷಗಳ ವ್ಯವಧಾನವಿದ್ದರೂ ಸಂಸ್ಕಾರವು ನಾಶವಾಗುವುದಿಲ್ಲ. ಅದರಂತೆಯೇ ಜೀವನು ಈ ಜನ್ಮವನ್ನು ಬಿಟ್ಟು ಹೊರಟರೂ, ಜ್ಞಾನ, (ಉಪಾಸನೆ) ಜಪ, ತಪಗಳು, ಕರ್ಮಗಳು. ಪೂರ್ವಪ್ರಜ್ಞೆಯೆಂಬುವ ಸಂಸ್ಕಾರವು ನಾಶವಾಗದೆ ಅವನನ್ನು ಹಿಂಬಾಲಿಸಿಯೇ ಇರುತ್ತವೆ. **'ತರ ವಿದ್ಯಾಕರ್ಮಣೀ ಸಮನ್ವಾರಭೇತೇ'** ಎಂಬ ಶ್ರುತಿಯು ಇದಕ್ಕೆ ಪ್ರಮಾಣ. ಅನಾದಿಯಾದ ಸಂಸಾರದಲ್ಲಿ ಜಾತಿ, (ಜನ್ಮಗಳು) ದೇಶಗಳು-ಸ್ವರ್ಗಾದಿ ಪ್ರದೇಶಗಳು. ಕಾಲ–ನೂರಾರು ಕಲ್ಪನೆಗಳು, ಇವುಗಳಿಂದ ವ್ಯವಧಾನವಿದ್ದರೂ ಯಾವ ಕರ್ಮದಿಂದ ಯಾವ ಜ್ಞನದಲ್ಲಿ ಅನುಭವ ಮಾಡಿದ ಭೋಗಗಳಿದ್ದವೋ ಅವುಗಳ ವಾಸನೆಗಳು ಅದೇ ಜಾತಿಯ ಕರ್ಮಗಳನ್ನು ಮಾಡಿ ಅದೇ ಜಾತಿಯ ಜನ್ಮ ಬಂದಾಗ ಪುನಃ ಅಭಿವ್ಯಕ್ತವಾಗುತ್ತವೆ. ಆನಂತರ್ಯಂ–ಈ ವಾಸನೆಗಳು ಸ್ಮರಣ ಮೂಲಕ ಭೋಗಾದಿಗಳಿಗೆ ಕಾರಣವಾಗುವುವು, ಸ್ಮರಣೆ ಸಂಸ್ಕಾರಗಳೆರಡೂ ಏಕರೂಪವಾಗಿರುವುದೇ ಇದಕ್ಕೆ ಕಾರಣ. ಇವೆರಡೂ ಏಕವಿಷಯವಾದ್ದರಿಂದ ಏಕರೂಪವೆನ್ನುವುದು. ಸಜಾತೀಯವಾದ್ದರಿಂದ ಸಂಸ್ಕಾರಸ್ಮೃತಿಗಳು ಕಾರ್ಯಕಾರಣ ಭಾವವನ್ನು ಹೊಂದುವುವು, ವಿಜಾತೀಯವಾದರೆ ಹೀಗಿರುವುದಿಲ್ಲ, ಕಾಶೀ, ಪ್ರಯಾಗ ಇತ್ಯಾದಿ ಕ್ಷೇತ್ರಗಳನ್ನು ನೋಡಿದ ಸಂಸ್ಕಾರವಿದ್ದರೆ ಈ ಕ್ಷೇತ್ರಗಳ ಸ್ಮರಣೆ ಮಾತ್ರ ಬರುವುದು. ಬದರಿ, ಕೇದಾರದ ಸ್ಮರಣೆ ಬರುವುದಿಲ್ಲ. ಕೇವಲ

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯವಧಾನ ವಿರೂಪಕ್ಕೆ ಕಾರಣವಾಗಲಾರದು. ಹಾಗಿದ್ದರೆ ಘಟಾನುಭವ ಸಂಸ್ಕಾರದಿಂದ ಅನುಭವವಾಗದ, ಕಾಣದಿರುವ ವಿಮಾನ ಸಂಚಾರದ ಸ್ಮರಣೆ ಯಾಗಬೇಕಾದೀತು! ಹಾಗಿಲ್ಲ. ಆದ್ದರಿಂದ ಜನ್ಮಾಂತರದಲ್ಲಿ ಮಾನವ ಜನ್ಮದ ಭೋಗ ಸಂಸ್ಕಾರವು ಹುಟ್ಟಿದರೆ ಪುನಃ ಅದೇ ಜನ್ಮವು ಬಂದಾಗ ಆ ವಾಸನೆ ಸ್ಫುರಿಸುವುದು. **'ಮನೋ ಹಿ ಜನ್ಮಾಂತರಸಂಗತಿಜ್ಞಮ್'** ಎಂಬ ಕಾಳಿದಾಸನ ಉಕ್ತಿಯು ಇದಕ್ಕೆ ಸಂಗತವಾಗಿದೆ. ಜನ್ಮಾಂತರದಲ್ಲಿ ಸಂಗೀತ, ನೃತ್ಯಗೀತ, ನಾಟ್ಯ ಇತ್ಯಾದಿಗಳನ್ನು ಕಲಿತಿದ್ದರೆ ಅದೇ ಸಂಸ್ಕಾರವು ಪುನಃ ನರಜನ್ಮವು ಬಂದಾಗಲೂ ಇದ್ದೇ ಇರುವುದು. ವಾಸನೆಗಳು ಅನಾದಿ. (ಯೋಗಶಾಸ್ತ್ರದಂತೆ ಜನ್ಮಾಂತರದ ಸಂಸ್ಕಾರಗಳೇ ವಾಸನೆಗಳು) ಅವುಗಳ ನಡುವೆ ಯಾವುದೇ ಬೇರೆ ಜನ್ಮಗಳು ಬಂದಿದ್ದರೂ ಅವು ನಾಶವಾಗದೆ ಪುನಃ ಮಾನವ ಜನ್ಮ ಬಂದಾಗಲೂ ಅನಾದಿ ಯಾಗಿದ್ದುಕೊಂಡೇ ಇರುವುವು. ಇಂತಹ ವಾಸನೆಗಳೂ ನಾಶವಾಗ ಬಹುದು.

ಜನ್ಮಾಂತರಗಳಿಂದ ವ್ಯವಧನವಿದ್ದ ವಾಸನೆಗಳು ಅನಾದಿ ಎಂದು ಒಪ್ಪಬೇಕು. "ನಾನು ಸರ್ವದಾ ಇರಬೇಕೆಂದು ಆಶಿಸುವೆನು" ಎಂದು ಹೇಳಿ ಕೊಳ್ಳುವವನ ಪ್ರಾರ್ಥನೆಯು ಎಲ್ಲ ಜನರಲ್ಲೂ ಇರುವುದರಿಂದ ಅನಾದಿ ಎಂದು ಒಪ್ಪಬೇಕು. **'ತಾಸಾಮನಾದಿತ್ವಂ ಚಾಶಿಷೋ ನಿತ್ಯತ್ವಾತ್'**– (ಯೋಗ ಸೂತ್ರ ಪಾ. 4ಸೂ. 10) ಎಂದು ಯೋಗಸೂತ್ರದಲ್ಲಿ ಹೇಳಿದೆ. ಆತ್ಮನಂತೆ ಅನಾದಿಯಾದರೆ ನಶಿಸುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರ, ಆತ್ಮನಂತೆ ಇದು ಅನಾದಿಯಲ್ಲ. ಇವು ಹುಟ್ಟಿ ತಕ್ಕವುಗಳೇ. ಪದೇ ಪದೇ ಎಡೆಬಿಡದೆ ಹುಟ್ಟುವುದರಿಂದ ಪ್ರವಾಹದಂತೆ ಅವಿಚ್ಛಿನ್ನವಾದ ಕಾರಣ ಅನಾದಿ ಎಂದು ಹೇಳುವುದಷ್ಟೆ. ಆದರೆ ವಾಸನೆಗಳ ಮೂಲ ಕಾರಣವು ನಾಶವಾದರೆ ಇವೂ ನಾಶವಾಗುತ್ತವೆ, ಕಾರಣ ನಾಶವಾದರೆ ಕಾರ್ಯವು ನಾಶವಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನಾದಿಯಾದ ಸಂಸಾರದಲ್ಲಿ ಭೋಗವಾಸನೆಗಳು ಹುಟ್ಟುವುದಕ್ಕೆ ಪಂಚಕ್ಲೇಶಗಳು ಮತ್ತು ಕರ್ಮಗಳು ಕಾರಣ. ಅವುಗಳ ಫಲ ಜನ್ಮ, ಆಯುಸ್ಸು, ಭೋಗ ಇವುಗಳು, ಇದಕ್ಕೆ ಆಶ್ರಯ ಚಿತ್ತ.. ಶಬ್ದ–ಸ್ಪರ್ಶಾದಿಗಳೇ ವಿಷಯಗಳು. ಅದರಿಂದಲೂ ನಿರಂತರವಾಗಿ ಅಭ್ಯಾಸ ಮಾಡಿದ ಅಷ್ಟಾಂಗ ಯೋಗ ಬಲದಿಂದ ಹುಟ್ಟುವ ಪ್ರಕೃತಿಪುರುಷರ ವಿವೇಕ ಖ್ಯಾತಿಯಿಂದ ಕಾರಣ ನಾಶವಾದರೆ ವಾಸನೆಗಳು ನಾಶವಾಗುವುವು, ಈ ರೀತಿ ಹೇಳುವುದು ಯೋಗ ಶಾಸ್ತ್ರದಲ್ಲಿ, ವೇದಾಂತ ಶಾಸ್ತ್ರದಲ್ಲಿ ಪ್ರಪಂಚದಿಂದ ನಿರ್ಮುಕ್ತವಾದ ಅಸಂಸಾರಿ ಬ್ರಹ್ಮಾತ್ಮಜ್ಞಾನದಿಂದ ಕರ್ಮಗಳು ನಾಶವಾಗುವುವು. ಅದರಿಂದ ವಾಸನೋಚ್ಛೇದವು ಕ್ರಮವಾಗಿ ಆಗುವುದು. ಪ್ರಾರಬ್ಧಕರ್ಮವನ್ನು ಬಿಟ್ಟುಳಿದ ಸಂಚಿತ ಕರ್ಮ ನಾಶವಾದರೂ, ಆಗಾಮಿ ಕರ್ಮಗಳು ಲೇಪನವಾಗದಿದ್ದರೂ ಪ್ರಾರಬ್ಧಕರ್ಮಾನುಸಾರ ಉಳಿದುಕೊಂಡ ಈ ಕರ್ಮವೂ ಭೋಗದಿಂದ ನಾಶವಾದರೆ ತಾನಾಗಿಯೇ ವಾಸನೆಗಳು ನಾಶವಾಗುವುವು. ಅನಂತರವೇ ವಿದೇಹಕೈವಲ್ಯವೆಂಬುದು ಸಿದ್ಧವಾಗುತ್ತದೆ. **'ಭೋಗೇನ ತ್ವಿತರೇ ಕ್ಷಪಯಿತ್ವಾ ಸಂಪದ್ಯತೇ'**

ಸಂಸಾರಚಕ್ರವು ಅನಾದಿಯಾಗಿ ಉರುಳುತ್ತಲೇ ಇರುವುದು. ಪೂರ್ವಸಂಸ್ಕಾರರೂಪವಾದ ಅವಿದ್ಯೆಯು 'ಅಸ್ಮಿತಾ' ಎಂಬುದಕ್ಕೆ ಕಾರಣ, ಈ ಅಸ್ಮಿತಾ ಎಂಬುದು ಮನುಷ್ಯೋsಹಂ, ಬ್ರಾಹ್ಮಣೋsಹಂ ಎಂಬ ಅಧ್ಯಾಸಕ್ಕೂ **'ಮಮೇದಮಿಷ್ಟಮನಿಷ್ಟಂ ಚ'** ಎಂಬ ಭ್ರಮೆಗೂ ಕಾರಣ. ಈಭ್ರಮೆಯು ರಾಗದ್ವೇಷಗಳಿಗೆ ಕಾರಣ.ರಾಗದ್ವೇಷಗಳು ಅನ್ಯನಿಗ್ರಹ,ಅನ್ಯರ ಅನುಗ್ರಹ ಮೂಲಕ ಧರ್ಮಾಧರ್ಮಗಳಿಗೆ ಕಾರಣ. ಅವು ಭೋಗಕ್ಕೆ ಕಾರಣ. ಈ ಭೋಗವು ವಾಸನೆಗಳಿಗೆ ಕಾರಣ. ಈ ವಾಸನೆಗಳು ಭ್ರಮೆಗೆ ಕಾರಣ. ಹೀಗೆಯೇ ಸಂಸಾಸರವು ಅನಾದಿಯಾಗಿಯೇ ಇರುವುದು (-ಶಾಂಕರಭಾಷ್ಯ-) **'ನ ಚಾವಿದ್ಯಾ ಕೇವಲಾ ವೈಷಮ್ಯಕರೀ ರಾಗದ್ವೇಷಾದಿಕ್ಲೇಶವಾಸನಾಕ್ಷಿಪ್ತಕರ್ಮಾಪೇಕ್ಷಾ ತು ವೈಷಮ್ಯಕರೀ'** (ಸೂ.ಭಾ.) ಇದರ ಅರ್ಥ,–

Sri Vidyabharathi Book Centre, Sringeri

CC-O. In Public Domain. Digitized by eGangotri

ಕೇವಲ ಅವಿದ್ಯೆಯಿಂದೇ ವೈಷಮ್ಯಕ್ಕೆ, ಸೃಷ್ಟಿ ವೈಚಿತ್ರ್ಯಕ್ಕೆ ಕಾರಣವಲ್ಲ, ಮತ್ತೇನು? ರಾಗದ್ವೇಷ ಮೊದಲಾದ ಪುಣ್ಯಪಾಪಕ್ಲೇಶಗಳ ವಾಸನೆಗಳಿಂದ ಎಬ್ಬಿಸಲ್ಪಟ್ಟ ಕರ್ಮಗಳನ್ನು ಅಪೇಕ್ಷಿಸಿದ್ದು (ಅಂದರೆ) ಈ ನಿಮಿತ್ತಗಳಿಂದಿಗೆ ಸೇರಿ ವೈಷಮ್ಯಕ್ಕೆ (ಸೃಷ್ಟಿ ವೈಚಿತ್ರ್ಯಕ್ಕೆ) ಕಾರಣವಾಗುತ್ತದೆ. ಕೇವಲ ಅವಿದ್ಯೆಯು ಸುಷುಪ್ತಿಯಲ್ಲಿ ಮೂರ್ಛೆ, ಮರಣ ಪ್ರಳಯ ಈ ಎಲ್ಲಾ ಕಾಲಗಳಲ್ಲಿ ಬೀಜರೂಪವಾಗಿದ್ದರೂ ಆಗ ವೈಷಮ್ಯವನ್ನುಂಟುಮಾಡದ ಸುಷುಪ್ತಿಯಲ್ಲಿ ಅನುಭವವಿದೆ. ಈ ಅನುಭವವು ಪ್ರಳಯದಲ್ಲೂ ಇದೆ ಎಂದು ತಿಳಿಯಬೇಕು. ಭಾಷ್ಯದಲ್ಲಿನ ಅವಿದ್ಯೆ ಎಂದರೆ ಮೂಲಭೂತವಾದ ಲಯಲಕ್ಷಣವುಳ್ಳ ಅವಿದ್ಯೆ ಎಂದು ತಿಳಿಯಬೇಕು. ಎಲ್ಲ ಜಗತ್ತೂ ಯಾವುದರಲ್ಲಿ ಲಯವಾಗುವುದೋ ಮತ್ತು ಜೀವ ಜಂತುಗಳ ಕರ್ಮಗಳು ವಾಸನೆಗಳು ಯಾವುದರಲ್ಲಿ ಲಯವಾಗುವುದೋ ಅದು ಅವಿದ್ಯೆಯೆಂದು ತಿಳಿಯಬೇಕು. ಕೇವಲ ಅಧ್ಯಾಸವೆಂಬುವ **'ಅಹಂ ಕರ್ತಾ ಭೋಕ್ತಾ ಮಮೇದಮ್'** ಎಂಬುವ ಅವಿದ್ಯೆಯು ಮೋಹ ಅಥವಾ ಭ್ರಮೆ, ಅದನ್ನು ಆದಿ ಪದದಿಂದ ತೆಗೆದುಕೊಳ್ಳಬೇಕು. ಮೂಲಭೂತವಾದ ಅವಿದ್ಯೆಯೇ ಮಾಯೆ, ಪ್ರಕೃತಿ, ಅವ್ಯಕ್ತ, ಅವ್ಯಾಕೃತ ಇತ್ಯಾದಿ ಪದಗಳಿಂದಲೂ ವೇದಗಳಲ್ಲಿ ವ್ಯಪಹರಿಸಲ್ಪಟ್ಟಿದೆ. ಮೇಲೆ ಹೇಳಿದಂತೆ ಸೃಷ್ಟಿಗೆ ಮೂಲವಾದಂತೆ ಜನ್ಮಾಂತರಕ್ಕೂ ಅದೇ ಮೂಲ.

ಕರ್ಮ ವಿಪಾಕ

ಕರ್ಮ ವಿಪಾಕ ಮತ್ತು ಅದರ ಮೂಲ :–

ಕರ್ಮವೆಂದರೆ ಪುಣ್ಯಪಾಪ ಈ ಎರಡು, ಇವುಗಳ ವಿಪಾಕವೆಂದರೆ ಫಲಾವಸ್ಥೆ. ಜೀವರು ಮಾಡಿದ ಪುಣ್ಯಪಾಪಗಳು ವಿಶೇಷವಾಗಿ ಪರಿಪಕ್ವವಾಗುವ ದಶೆ. ಇದನ್ನೇ ಫಲಾವಸ್ಥೆಯೆಂದು ಕರೆದಿದ್ದೆ, ಈ ರೀತಿಯಾದ ಕರ್ಮ ವಿಪಾಕವು ಮನುಷ್ಯ, ಪಶು, ಪಕ್ಷಿ, ಆಯುಸ್ಸು, ಭೋಗ ಎಂದು,

CC-O. Vidyabharathi Book Centre, Sringeri

CC-O. In Public Domain. Digitized by eGangotri

ಸತಿ ಮೂಲೇ ತದ್ವಿಪಾಕೋ ಜಾತ್ಯಾಯುರ್ಭೋಗಾಃ"ಎಂದು ಪೂಜ್ಯ ಪತಂಜಲಿ ಮಹರ್ಷಿಯು ಹೀಗೆಯೇ ಹೇಳಿರುವನು, ಕರ್ಮಗಳಿಗೆ ಮೂಲ ಕಾರಣ"**ಅವಿದ್ಯಾಸ್ಮಿತಾರಾಗದ್ವೇಷಾಭಿನಿವೇಶಾತ್ಮಕಾಃ ಪಂಚಕ್ಲೇಶಾಃ॥** (ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಆಭಿನಿವೇಶ) ಈ ಐದು ಕ್ಲೇಶಗಳು ಕರ್ಮಗಳಿಗೆ ಮೂಲ. ಈ ಐದು ಕ್ಲೇಶಗಳಿದ್ದರೆ ಕರ್ಮಗಳು ಪರಿಪಕ್ವವಾಗಿ ಜನ್ಮವನ್ನು, ಆಯುಸ್ಸನ್ನು, ಭೋಗವನ್ನು ಕೊಡುತ್ತವೆ. ಕ್ಲೇಶ-ಬೀಜವನ್ನು ದಹಿಸಿಕೊಂಡಿರುವ ಬ್ರಹ್ಮಜ್ಞಾನಿಯಾದ ಜೀವನ್ಮುಕ್ತನಿಗೆ ಸಂಚಿತ ಕರ್ಮಗಳು ಫಲವನ್ನು ಕೊಡುವುದಿಲ್ಲ. **"ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇಽರ್ಜುನ"** (ಗೀತೆ) ಎಂದು ಭಗವಂತನು ಉಪದೇಶಿಸಿದಂತೆ ತತ್ವಜ್ಞಾನದಿಂದ ಸರ್ವಸಂಚಿತಕರ್ಮಗಳೂ ನಾಶವಾಗುವುವು.ಹೊಟ್ಟಿಲ್ಲದ ಬತ್ತವು ಹೇಗೆ ಅಂಕುರಿಸುವುದಿಲ್ಲವೋ, ಅಥವಾ ಹುರಿದು ಹಾಕಿದ ಬೀಜವು ಹೇಗೆ ಮೊಳೆಯಲಾರದೋ ಹಾಗೆ ತತ್ವಜ್ಞಾನವೆಂಬ ಬೆಂಕಿಯಿಂದ ಸುಟ್ಟುಹೋದ ಕರ್ಮಗಳು ನಿಶ್ಶಕ್ತಿಕವಾಗಿ ಫಲವನ್ನು ಕೊಡಲಾರವೆ ನಶಿಸುವುವೆಂದರ್ಥ. ಆದ್ದರಿಂದ ಬೀಜಸ್ಥಾನದಲ್ಲಿರುವ ಪಂಚಕ್ಲೇಶಗಳು ಮೂಲವಾಗಿದ್ದು ಅವುಗಳನ್ನು ಅವಲಂಬಿಸಿಯೇ ಕರ್ಮಗಳು ಫಲವನ್ನು ಕೊಡುವ ಅವಸ್ಥೆಯನ್ನು ಹೊಂದುವುವು. ಪಂಚಕ್ಲೇಶಗಳ ಅರ್ಥ, ಆತ್ಮನನ್ನು ಕ್ಲೇಶಪಡಿಸುತ್ತವೆಯಾದ್ದರಿಂದ ಅವಿದ್ಯಾದಿಗಳನ್ನು ಕ್ಲೇಶವೆಂದು ಕರೆಯುವರು. ಅವಿದ್ಯೆಯೆಂದರೆ **"ಅನಿತ್ಯಾಶುಚಿದುಃಖಾನಾತ್ಮಸು ನಿತ್ಯಶುಚಿಸುಖಾತ್ಮಖ್ಯಾತಿರವಿದ್ಯಾ"** (ಪ.ಸೂ.)ಅನಿತ್ಯವಾದ ಸ್ವರ್ಗಾದಿಗಳಲ್ಲಿ ನಿತ್ಯವೆಂಬ ಅಭಿಮಾನ, ಅಶುಚಿಯಾದ ಈ ದೇಹದಲ್ಲಿ ಶುಚಿ ಎಂಬ ಬುದ್ಧಿಯು. (ಭ್ರಮೆಯು) ದುಃಖಿಕರವಾದ ಧನಿತಾದಿ ಭೋಗವಸ್ತುಗಳಲ್ಲಿ ಸುಖವೆಂಬ ಭ್ರಮೆಯೂ ಆತ್ಮವಲ್ಲದ ದೇಹಾದಿಗಳಲ್ಲಿ ಆತ್ಮಬುದ್ಧಿಯೂ ಈ ಬಗೆಯಲ್ಲಿ ನಾಲ್ಕು ಅಂಶಗಳು ಇರುವುದೇ ಅವಿದ್ಯೆ. ಈ ಅವಿದ್ಯೆಯು ಅಸ್ಮಿತಾದಿಗಳಿಗೂ ಉತ್ಪತ್ತಿಗೆ

CC-O. In Public Domain. Digitized by eGangotri

ಸ್ಥಾನವಾದದ್ದು. **"ಅವಿದ್ಯಾಕ್ಷೇತ್ರಮುತ್ತರೇಷಾಂ ಪ್ರಸುಪ್ತತನು-ವಿಚ್ಛಿನ್ನೋದಾರಾಣಾಮ್"** ಎಂದು ಪತಂಜಲಿ ಸೂತ್ರ (ಪಾಠ 2.)

ಅಸ್ಮಿತಾ ಎಂದರೆ **'ದೃಗ್‌ದರ್ಶನ ಶಕ್ತ್ಯೋರೇಕಾತ್ಮತೇವ ಅಸ್ಮಿತಾ"** ಅಂದರೆ ಸತ್ವ, ಪುರುಷ ಈ ಎರಡರಲ್ಲಿ **'ಅಹಮಸ್ಮಿ'** ಎಂದು ಹುಟ್ಟುವ ವಿಕತ್ವಾಭಿಮಾನವೇ ಅಸ್ಮಿತಾ ಎಂದರ್ಥ.

ರಾಗ–ಸುಖಾನುಶಯೀ ರಾಗಃ"ಸುಖವನ್ನು ಅನುಭವ ಮಾಡಿಕೊಂಡವನಿಗೆ ಅದರ ಸ್ಮರಣೆಯಿಂದ ಸುಖಸಾಧನಗಳಲ್ಲಿ ಹುಟ್ಟುವ ಆಸೆಯೇ ರಾಗ, (ಇದೇ ಕಾಮವೆಂಬುದು) ದ್ವೇಷವೆಂದರೆ **"ದುಃಖಾನುಶಯೀ ದ್ವೇಷಃ"** (ಪ-೨-೮) ದುಃಖವನ್ನು ಕಂಡವನಿಗೆ ಅದರ ಸ್ಮರಣೆಯಿಂದಾಗಿ ದುಃಖಸಾಧನಗಳನ್ನು ನಿಂದಿಸುವುದು ಬೇಡವೆಂಬುದಾಗಿ ಹುಟ್ಟುವ ಮನೋವೃತ್ತಿಯೇ ದ್ವೇಷ.

ಅಭಿನಿವೇಶ:-"ಸ್ವರಸವಾಹೀ ವಿದುಷೋಽಪಿ ತಥಾ ರೂಢೋಽಭಿನಿವೇಶಃ" ಮೂಢಾತ್ಮರಿಗೆ ಆಗುವಂತೆ ಪಂಡಿತನಿಗೂ ಸ್ವರಸವಾಗಿ ಹುಟ್ಟಿ ಹಿಂದಿನಿಂದ ಬಂದ ಭಯ, ತ್ರಾಸ–ಇವೇ ಅಭಿನಿವೇಶ. ಪೂರ್ವಜನ್ಮದಲ್ಲಿ ಅನುಭವಿಸಿದ ಮರಣಮುಃಖದ ಸಂಸ್ಕಾರ ಬಲದಿಂದ ಪ್ರಾಣಿ ಮಾತ್ರಕ್ಕೂ ಉಂಟಾಗುವುದೇ ಅಭಿನಿವೇಶ ಶರೀರವೂ ನನ್ನ ಭೋಗವಸ್ತುಗಳೂ ಎಂದಿಗೂ ನನ್ನನ್ನು ಬಿಟ್ಟು ಹೋಗ ಕೂಡದೆಂದು ತವಕಪಡುವ ಜೀವರಿಗೆ ಪ್ರತಿನಿತ್ಯವೂ ಹೊರಗಿನ ನಿಮಿತ್ತವಿಲ್ಲದೆ ತಾನಾಗಿಯೇ ಹುಟ್ಟುವ ಭಯರೂಪವಾದ ವೃತ್ತಿಯೇ ಅಭಿನಿವೇಶವೆಂಬುದಾಗಿ ಉಕ್ತವಾಗಿದೆ.

"ಕ್ಲೇಶಮೂಲಃ ಕರ್ಮಾಶಯೋ ದೃಷ್ಟಾದೃಷ್ಟಜನ್ಮ ವೇದನೀಯಃ" ಈ ಕ್ಲೇಶಮೂಲವಾಗಿರುವ ಕರ್ಮಾಶಯವು, (ಧರ್ಮಾ

Sri Vijayabharathi Collection. Digitized by eGangotri

CC-O. In Public Domain. Digitized by eGangotri

ಧರ್ಮ ಸಂಸ್ಕಾರವು) ಇದು ಇಹಜನ್ಮದಲ್ಲೇ ಅನುಭವಕ್ಕೆ ಬರುವುದು ಒಂದು ಮತ್ತೊಂದು ಅದೃಷ್ಟವಾದ ಜನ್ಮಾಂತರದ ಸ್ವರ್ಗ ನರಕಾದಿ ಜನ್ಮಗಳಿಂದ ಅನುಭವಿಸಬೇಕಾದುದು ಉದಾ:–(ದೃಷ್ಟ ಫಲಕ್ಕೆ) ನಂದಿಕೇಶ್ವರನು ತೀವ್ರ ತಪೋನುಷ್ಠಾನದಿಂದ ಇಹದಲ್ಲೇ ಈಶ್ವರಾರಾಧನೆ ಮಾಡಿ ದೇವ ಸ್ವರೂಪವನ್ನು ಹೊಂದಿದ್ದು. ನಹುಷನು ಅಗಸ್ತ್ಯರಿಗೆ ಅವಮಾನಪಡಿಸಿದ ಅಪರಾಧದಿಂದ ಹೆಬ್ಬಾವಾಗಿ ಹುಟ್ಟಿದ್ದು ತಿನೆಯದು (ಅದೃಷ್ಟ ಫಲಕ್ಕೆ) ಸ್ವರ್ಗ ನರಕಾದಿ ಜನ್ಮಕ್ಕೆ ಹೇತುವಾದದ್ದು ಕರ್ಮಾಶಯದಂತೆ ಕರ್ಮವಿಪಾಕವೂ ಕ್ಲೇಶ ಮೂಲಕವಾಗಿದೆ. ಜನ್ಮ, ಆಯುಸ್ಸು. ಭೋಗ ಇವುಗಳಲ್ಲಿ ಭೋಗವೇ ಮುಖ್ಯ. ಜನ್ಮ. ಆಯುಸ್ಸು ಅದಕ್ಕೆ ಅಂಗ. ತತ್ವಜ್ಞಾನದಿಂದ ಕ್ಲೇಶಗಳು ನಶಿಸಿದರೆ ಕರ್ಮವು ನಿರ್ಬೀಜವಾಗಿ ಹುರಿದ ಬೀಜಗಳಂತೆ ಮೊಳೆಯದೆ ನಶಿಸುವುದು.

ಅಜ್ಞಾನಿಗಳಿಗೆ ಸುಕೃತ ಕರ್ಮ ವಿಪಾಕಗಳು

ಸಾತ್ವಿಕ ಕರ್ಮಗಳಿಂದ 'ದೇವತ್ವಂ ಸಾತ್ವಿಕಾಯಾನ್ತಿ' ಎಂದು ಮನು ವಚನದಂತೆಯೂ ಗೀತೆಯಂತೆಯೂ ದೇವಜನ್ಮವನ್ನು ಹೊಂದುವರು.

ತಾಪಸಾ ಯತಯೋ ವಿಪ್ರಾಃ ಯೇ ಚ ವೈಮಾನಿಕಾಗಣಾಃ॥
ನಕ್ಷತ್ರಾಣಿ ಚ ದೈತ್ಯಾಶ್ಚ ಪ್ರಥಮಾ ಸಾತ್ವಿಕೀ ಗತಿಃ॥

ಎಂದಂತೆ ವಾನಪ್ರಸ್ಥರು, ಯತಿಗಳು, ವಿಪ್ರರು, ಪುಷ್ಪಕವಿಮಾನ ಸಂಚರಿಗಳಾದ ದೇವತಾಗಣಗಳು, ನಕ್ಷತ್ರಗಳು, ದೈತ್ಯರೂ ಸತ್ವಗುಣ ನಿಮಿತ್ತವಾಪ್ತ ವಾನವರ ಮೊದಲನೆಯ ಕನಿಷ್ಠಗತಿಯು (ಜನ್ಮ).

Sri Vidyabharathi Book Centre, Sringeri

CC-O. In Public Domain. Digitized by eGangotri

ಯಜ್ವಾನಃ ಋಷಯೋ ದೇವಾಃ ವೇದಾ ಜ್ಯೋತೀಂಷಿ ವತ್ಸರಾಃ ।
ಪಿತರಶ್ಚೈವ ಸಾಧ್ಯಾಶ್ಚ ದ್ವಿತೀಯಾ ಸಾತ್ವಿಕೀ ಗತಿಃ ॥

ಯಜ್ಞ ಮಾಡುವವರು, ಋಷಿಗಳು, ದೇವತೆಗಳು, ವೇದಾಭಿಮಾನಿ ದೇವತೆಗಳು· ಧ್ರುವನಕ್ಷತ್ರಾದಿ ಜ್ಯೋತಿಗಳು, ಸಂವತ್ಸರಾಭಿಮಾನಿದೇವತೆಗಳು· ಅಗ್ನಿಷ್ವಾತ್ತ ಸೋಮಪ ಮುಂತಾದ ಪಿತೃಗಳು ಸಾಧ್ಯರು-ಈ ಎಲ್ಲಾ ಗತಿಗಳು ಮಧ್ಯಮ ಸಾತ್ವಿಕ ಗುಣಗಳ ಫಲಗಳು.

ಬ್ರಹ್ಮಾ ವಿಶ್ವಸೃಜೋ ಧರ್ಮೋ ಮಹಾನವ್ಯಕ್ತಮೇವ ಚ ।
ಉತ್ತಮಾಂ ಸಾತ್ವಿಕೀಮೇತಾಂ ಗತಿಮಾಹುರ್ಮನೀಷಿಣಃ ॥

ಚತುರ್ಮುಖಿ ಬ್ರಹ್ಮ, ಮರೀಚ್ಯಾದಿ ವಿಶ್ವಸೃಷ್ಟಿಕರ್ತರು, ಧರ್ಮದೇವತೆ ಮಹಾನ್ (ಹಿರಣ್ಯಗರ್ಭ) ಅವ್ಯಕ್ತವೆಂಬುದರ ಅಭಿಮಾನಿ ದೇವತೆ ಈ ಎಲ್ಲವೂ ಉತ್ತಮ ಸಾತ್ವಿಕಗುಣಗಳ ಫಲ, ಉತ್ತಮಾಗತಿಯು,

ಧರ್ಮವೆಂಬುದು ಮೂರು ಬಗೆ–ಶಾರೀರ, ವಾಚಿಕ, ಮಾನಸ ಎಂದು. ಇದನ್ನು ಪುಣ್ಯಕರ್ಮವೆಂದು ಹೇಳುವರು. ಅನುಷ್ಠಾನ ಮಾಡುವ ಧರ್ಮವನ್ನೇ ಮಹರ್ಷಿ ಜೈಮಿನಿಯು ಜಿಜ್ಞಾಸೆ ಮಾಡಿರುವುದು. ಇದರ ಫಲ ಸುಖ, ಶರೀರ, ವಾಕ್ಕು, ಮನಸ್ಸುಗಳಿಂದ ಅನುಭವ ಮಾಡಲ್ಪಡುವ ಭೋಗವು ಮನುಷ್ಯನಿಂದ ಆರಂಭಿಸಿ ಬ್ರಹ್ಮ ಪರ್ಯಂತ ಇರುವ ಜೀವರಲ್ಲಿ ಸುಖವು ತರತಮವಾಗಿರುವುದೆಂದು ಶ್ರುತಿ ಸ್ಮೃತಿಗಳಲ್ಲಿ ತಿಳಿದು ಬರುವುದು. ಇದಕ್ಕೆ ಧರ್ಮದ ತಾರತಮ್ಯವೇ ಕಾರಣ. ಉದಾ:–ಸಾಮಾನ್ಯ ಪ್ರಜೆಗಳಿಗೆ ಇರುವ ಸುಖವು ನೂರುಪಾಲು ಸಾರ್ವಭೌಮನಿಗೆ ಹೆಚ್ಚಾಗಿ ಇರುವುದು. ಅಲ್ಲದೆ ಸಾಮಾನ್ಯರಾಜನಿಗೆ ನೂರು ಸುಖವಿದ್ದರೆ, ಸಾರ್ವಭೌಮನಿಗೆ ಸಾವಿರ ಸುಖವಿರುತ್ತದೆ, ಸ್ವಾತಂತ್ರ್ಯ,

Sri Vidyaranya Granth Book Centre, Sringeri

CC-O. In Public Domain. Digitized by eGangotri

ಇವುಗಳಿಗಿಂತಲೂ ಈ ರಾಜರುಗಳಿಗೆ ಮೇಲ್ಪಟ್ಟ ಚಕ್ರವರ್ತಿಗೆ ಸುಖವು ಹೆಚ್ಚೆಂದು ಹೇಳಬಹುದು, **ಅದರಂತೆ ಚಕ್ರವರ್ತಿಗೂ ಮೇಲ್ಪಟ್ಟು** ಇರುವ ದೇವತೆಗಳು ಪಿತೃ ದೇವತೆಗಳು, ಗಂಧರ್ವರು, ಯಕ್ಷರು, ಕಿನ್ನರರು, ದೇವಗಂಧರ್ವರು ಇತ್ಯಾದಿಯಾಗಿ ಪ್ರಜಾಪತಿಬ್ರಹ್ಮ– ಪರ್ಯಂತರ ಆನಂದವು ಮೇಲಿಂದಮೇಲೆ ನೂರುಪಾಲು ಹೆಚ್ಚಾಗಿರುವುದೆಂದು ತೈತ್ತಿರೀಯ ಶ್ರುತಿಯಲ್ಲಿ ಹೇಳಿದೆ. **'ಸ ಏಕೋ ಮಾನುಷ ಆನಂದಃ-** ಇತ್ಯಾದಿ. ಪಂಚಾಗ್ನಿವಿದ್ಯಾ ಇರುವ ಕರ್ಮಾನುಷ್ಠಾನ ಮಾಡುವವರೂ ಮತ್ತು ಉಪಾಸಕರು ಉಪಾಸನೆಯ ಬಲದಿಂದಲೂ ಸವಾಧಿ ವಿಶೇಷದಿಂದಲೂ ಉತ್ತರ ಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿಯೇ ಕಲ್ಪಪರ್ಯಂತರ ಅತ್ಯಂತ ಹೆಚ್ಚಿನ ಆನಂದವನ್ನು ಅನುಭವಿಸುವರೆಂದು ವೇದ ಹೇಳುತ್ತದೆ. **(ಛಾಂ-ತದ್ಯ ಇತ್ಥಂ ವಿದುಃ ತೇऽರ್ಚಿಷಮಭಿಸಂಭವನ್ತಿ)** ಅಲ್ಲದೆ ಕೇವಲ ಇಷ್ಟಾ, ಪೂರ್ತ, ದತ್ತ ಎಂಬುವ ಪುಣ್ಯಕರ್ಮಗಳ ಸಾಧನದಿಂದ ಧೂಮಾದಿ ಮಾರ್ಗದ ಮೂಲಕ (ದಕ್ಷಿಣ ಮಾರ್ಗದಿಂದ) ಚಂದ್ರಲೋಕಕ್ಕೆ ಹೋಗಿ ಸ್ವರ್ಗ ಸುಖವನ್ನು ತರತಮಪಾಗಿ ಅನುಭವಿಸುತ್ತಾರೆ.

ಇಷ್ಟ ಎಂದರೆ– "ಆಗ್ನಿಹೋತ್ರಂ ತಪಃ ಸತ್ಯಂ ವೇದಾನಾಂ ಚಾನುಪಾಲನಮ್।ಆತಿಥ್ಯಂ ವೈಶ್ವದೇವಂ ಚ ಇಷ್ಟಮಿತ್ಯಭಿಧೀಯತೆ" ಎಂಬ ವಚನದಂತೆ ಆಗ್ನಿಹೋತ್ರ, ತಪಸ್ಸು, ಸತ್ಯ, ವೇದಾಧ್ಯಯನ ಅದರ ರಕ್ಷಣೆ (ಬ್ರಹ್ಮಯಜ್ಞಾನುಷ್ಠಾನದಿಂದ ಆತಿಥ್ಯ, ವೈಶ್ವದೇವ ಇವುಗಳು ಇಷ್ಟವೆಂದು ಹೇಳಲ್ಪಡುವ ಧರ್ಮಗಳು.

ಪೂರ್ತ ಎಂದರೆ– "ವಾಪೀ ಕೂಪ ತಟಾಕಾದಿ ದೇವತಾಯತನಾನಿಚ। ಅನ್ನಪ್ರದಾನ ಮಾರಾಮಃ ಪೂರ್ತಮಿತ್ಯಭಿಧೀಯತೇ॥ ಎಂಬ ವಚನದಂತೆ, ಕೊಳ, ಬಾವಿ, ಕೆರೆ ಮುಂತಾದವುಗಳನ್ನು ತೋಡಿಸಿ ನೀರಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೌಕರ್ಯ ಮಾಡಿಕೊಡುವುದು, ಅನ್ನದಾನ, ಅನ್ನಸತ್ರನಿರ್ಮಾಣ ಮಾಡುವುದು ಇವುಗಳು ಪೂರ್ತವೆಂದು ಕರೆಯಲ್ಪಟ್ಟಿವೆ.

ದತ್ತ ಎಂದರೆ- "ಶರಣಾಗತ ಸಂತ್ರಾಣಂ ಭೂತಾನಾಂ ಚಾಪ್ಯ ಹಿಂಸನಮ್। ಬಹಿರ್ವೇದಿ ಚ ಯದ್ದಾನಂ ದತ್ತಮಿತ್ಯಭಿಧೀಯತೇ" ಎಂಬ ವಚನದಂತೆ ಶರಣಾಗತ ರಕ್ಷಣೆ, ಪ್ರಾಣಿ-ಹಿಂಸೆ ಮಾಡದಿರುವುದು, ಯಜ್ಞದ ಸ್ಥಾನದಲ್ಲಿ ಕೊಡುವ ದಾನ, ಇದಕ್ಕೂ ಹೊರಗೆ ಬಡಬಗ್ಗರಿಗೆ ಕೊಡುವ ವಸ್ತ್ರಾದಿದಾನವೂ ದತ್ತವೆಂದು ಕರೆಯಲ್ಪಡುವುವು,

ಈ ರೀತಿಯಾಗಿ ಕೇವಲ (ಉಪಾಸನೆ ಮಾಡದೆ) ಮಾಡುವ ಮೂರು ಬಗೆಯ ಕರ್ಮಗಳನ್ನು ಮಾಡಿದವರು ದಕ್ಷಿಣಮಾರ್ಗದಿಂದ ಪಿತೃಲೋಕಕ್ಕೆ ಹೋಗಿ (ಚಂದ್ರಲೋಕಕ್ಕೆ ಹೋಗಿ) ಸ್ವರ್ಗಸುಖವನ್ನು ಮನುಷ್ಯರು; ಚಕ್ರವರ್ತಿಗಳೂ ಅನುಭವಿಸುವ ಸುಖಕ್ಕಿಂತಲೂ ಶತಶತ ಪಾಲು ಇಮ್ಮಡಿಯಾಗಿ ಅನುಭವಿಸುವ ಸುಖವು ತರತಮದಿಂದ ಉಂಟಾಗುವುದು.

ಶಾರೀರವೆಂದರೆ–ಕಾಯಿಕವಾಗಿ ಮಾಡುವ ಸ್ನಾನ, ಸಂಧ್ಯಾವಂದನೆ, ತೀರ್ಥಕ್ಷೇತ್ರ ಯಾತ್ರೆ, ಮಾತಾಪಿತೃ ಶುಶ್ರೂಷೆ, ಗುರುಸೇವೆ ಮುಂತಾದವು.

ವಾಚಿಕವೆಂದರೆ–ಸತ್ಯವಚನ, ಪ್ರಿಯವಾಗಿಯೂ ಹಿತವಾಗಿಯೂ ಇರುವ ಸತ್ಯವಚನ, ಜಪ, ವೇದಾಧ್ಯಯನ, ಗುರುದೇವತಾಸ್ತೋತ್ರ ಪಠನ, ಭಾರತ ಭಾಗವತಾದಿ ಪಠನ ಇತ್ಯಾದಿಗಳು.

ಮಾನಸಿಕವೆಂದರೆ-ಸಂಧ್ಯಾಜಪ, ಇತರ ನಾಮ ಮಂತ್ರಗಳ ಜಪ; ಪರಹಿತ ಚಿಂತನ ಇತ್ಯಾದಿ ಈ ಬಗೆಯಲ್ಲಿ ಕರ್ಮಾನುಷ್ಠಾನ ಮಾಡುವ ಮಾನವರಿಗೆ ಬರುವ ಸುಖಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲ್ಕಂಡ ಸುಖ ಅಥವಾ ಆನಂದವು ಮತ್ತು ಜ್ಞಾನ ವೈರಾಗ್ಯಾದಿ ಗಳು ಸಾತ್ವಿಕಕರ್ಮದ ಫಲವಾಗಿವೆ.

ರಾಜಸಕರ್ಮಕ್ಕೆ ದುಃಖವೇ ಫಲ, ತಾಮಸಕರ್ಮಕ್ಕೆ ಅಜ್ಞಾನವೇ ಫಲ ಈ ವಿಭಾಗವೂ ಗೀತೆಯಲ್ಲಿ ಹೇಳಲ್ಪಟ್ಟಿದೆ.

ಕರ್ಮಣಃ ಸುಕೃತಸ್ಯಾಹುಃ ಸಾತ್ವಿಕಂ ನಿರ್ಮಲಂ ಫಲಮ್।
ರಾಜಸಸ್ತು ಫಲಂ ದುಃಖಂ ಅಜ್ಞಾನಂ ತಮಸಃ ಫಲಮ್॥

ಊರ್ಧ್ವಂ ಗಚ್ಛಂತಿ ಸತ್ವಸ್ಥಾಃ ಮಧ್ಯೇ ತಿಷ್ಠಂತಿ ರಾಜಸಾಃ।
ಜಘನ್ಯಗುಣ ವೃತ್ತಿಸ್ಥಾಃ ಅಧೋ ಗಚ್ಛಂತಿ ತಾಮಸಾಃ॥

ಅನಿಷ್ಟಮಿಷ್ಟಂ ಮಿಶ್ರಂಚ ತ್ರಿವಿಧಂ ಕರ್ಮಣಃ ಫಲಮ್
ಭವತ್ಯತ್ಯಾಗಿನಾಂ ಪ್ರೇತ್ಯ.—

ಎಂದು ಹೇಳಿದಂತೆ ಪರಮಹಂಸರನ್ನು ಬಿಟ್ಟು ಉಳಿದ ಜನರಿಗೆ ಪುಣ್ಯದ ಫಲ ಇಷ್ಟವಾದ ದೇವಜನ್ಮ. ಪಾಪದ ಫಲ. ಅನಿಷ್ಟವಾದ ಭೂತಪ್ರೇತ ಪಿಶಾಚಾದಿ ಜನ್ಮ. ಪಾಪಪುಣ್ಯಗಳ ಮಿಶ್ರ ಫಲ ಮನುಷ್ಯಜನ್ಮ ಎಂದು ಸಾಮಾನ್ಯ ರೀತಿಯಲ್ಲೂ ಭಗವಂತನು ಉಪದೇಶಿಸಿದ್ದಾನೆ. ಹೀಗೆಯೆ ವರ್ಣಧರ್ಮ, ಆಶ್ರಮಧರ್ಮಗಳನ್ನು ಆಚರಿಸುವವರಿಗೆ ಸ್ವರ್ಗ ಲೋಕ ಪ್ರಾಪ್ತಿ ಎಂದು ಸಾಮಾನ್ಯವಾಗಿ ಹೇಳಿರುವುದು ಕಂಡಿದೆ. ಗೌತಮ ಧರ್ಮಶಾಸ್ತ್ರ-

"ವರ್ಣಾ ಆಶ್ರಮಾಶ್ಚ ಸ್ವಕರ್ಮನಿಷ್ಠಾಃ ಪ್ರೇತ್ಯಕರ್ಮಫಲ ಮನುಭೂಯ"

ಇದೇ ರೀತಿಯಾಗಿ ಪೂಜೆ ತಪಸ್ಸು. ಉಪಾಸನೆಗಳಿಗೂ ಸ್ವರ್ಗದಿಂದ ಆರಂಭಿಸಿ ಸತ್ಯಲೋಕಪರ್ಯಂತರ ಇರುವ ಭೋಗಭೂಮಿಗಳಲ್ಲಿ ದೇವತೆಯಾಗಿ ಹುಟ್ಟಿ ದಿವ್ಯಕಾಲ ಸುಖಾನುಭವ ಪಡೆಯುವುದು ಉಂಟೆಂದು ವೇದಗಳು ಹೇಳುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಂಕರ ದರ್ಶನ ಸಾರ ಭಾಗ-೨

ಪ್ರಜಾಪತಿಮನುವಿನಿಂದ ಸೃಷ್ಟಿ

ವಿರಾಟಪುರುಷನೆಂಬ ಪ್ರಜಾಪತಿಯು ಮೊದಲು ಒಬ್ಬನೇ ಇದ್ದನು. ಅವನಿಗೆ ಕ್ರೀಡಾಸ್ಥಾನವಿಲ್ಲದೆ ಬೇಜಾರಾಯಿತು. ಆವಾಗ ತನ್ನ ಬೇಜಾರು ಪರಿಹಾರಕ್ಕಾಗಿ ಕ್ರೀಡಾರ್ಥವಾಗಿ ಒಬ್ಬ ಸ್ತ್ರೀಯನ್ನು ಬಯಸಿದನು. ಈ ರೀತಿಯಾಗಿ ಅಭಿಲಾಷೆಪಟ್ಟ ಮಾತ್ರದಿಂದಲೇ ಸ್ತ್ರೀಪುರುಷರು ಕ್ರೀಡಾರ್ಥವಾಗಿ ಪರಸ್ಪರ ಆಲಿಂಗಿಸಿದಾಗ ಯಾವ ರೀತಿ ಮನೋಭಾವವುಳ್ಳವರಾಗುವರೋ, ಹಾಗೆಯೇ ಈ ಪ್ರಜಾಪತಿಯು ಆದೇ ಭಾವವುಳ್ಳವನಾದನು. ಈತನ ಸಂಕಲ್ಪ ಮಾತ್ರದಿಂದ ಸ್ತ್ರೀಪುರುಷ ದ್ವಂದ್ವವನ್ನು ಸೃಷ್ಟಿಸಿದನು. ವಿರಾಟ್‌ಪುರುಷನು ಸತ್ಯಸಂಕಲ್ಪನಾದ್ದರಿಂದ ತನ್ನ ಸ್ವರೂಪಕ್ಕೆ ಚ್ಯುತಿಯಿಲ್ಲದಂತೆ ಸ್ತ್ರೀಪುರುಷ ದ್ವಂದ್ವರೂಪದಲ್ಲಿ ತನ್ನನ್ನು ಸೃಷ್ಟಿಸಿಕೊಂಡನು. ತನಗೆ ಬೇರೆಯಾಗಿ ಸೃಷ್ಟಿಯಾದ ದ್ವಂದ್ವವನ್ನು ಕೆಳಕ್ಕೆ ಹೊತ್ತು ಹಾಕಿದನು. ಹೀಗೆ ಪತನ ಮಾಡಿಸಿದ್ದರಿಂದ ಪತಿ, ಪತ್ನಿಯೆಂದು ದಂಪತಿಗಳಿಗೆ ಹೆಸರು ಬಂದಿತು, ಆರ್ಧಭಾಗ ಸ್ತ್ರೀ ಮತ್ತೊಂದು ಆರ್ಧಭಾಗ ಪುರುಷ. ವಿವಾಹವಾಗುವ ಮುಂಚೆ ತಾನು ಪೂರ್ಣನಾಗುವುದಿಲ್ಲ. ಸ್ತ್ರೀ ವಿವಾಹವಾದ ಮೇಲೆ ಎರಡು ಆರ್ಧಗಳೂ ಸೇರಿ ಪೂರ್ಣವಾಗುವುವು. ಸಂಪುಟೀಕರಣದಿಂದ ಪೂರ್ಣವಾದಂತೆ.

ಯಾಜ್ಞವಲ್ಕ್ಯರು ಹೀಗೆ ಹೇಳಿರುವರು :—

ಪ್ರಕೃತ, ಹುಟ್ಟಿದ ಪ್ರಜಾಪತಿಗೆ ಮನು ಎಂದು ಹೆಸರಾಯಿತು. ಸ್ತ್ರೀಗೆ ಶತರೂಪಾ ಎಂದು ಹೆಸರು ಬಂದಿತು. ಈ ಮನು ಶತರೂಪಾ ಎಂಬುವ ಸ್ತ್ರೀ–ಪುರುಷರ ದ್ವಂದ್ವದಿಂದ ಮಾನವರು ಹುಟ್ಟಿದರು, ಹೀಗೆಯೇ ಮತ್ತೊಂದು ಜಾತಿಯಾಗಿ ಆಂದರೆ ಗೋವಿನ ರೂಪವನ್ನು ತಾಳಿದನು. ಅಂದರೆ ಮನುವು ಮನುಷ್ಯನಾದಂತೆ ವೃಷಭನಾದನು. ಶತರೂಪೆಯು ಗೋವಾಯಿತು. ಇದಕ್ಕೆ ಮಾನವಾದಿಗಳೆಂದೆಂದೂ, ಮುಂದೆ ಹುಟ್ಟುವ

Sri Vidyabharati Foundation, Sringeri

CC-O. In Public Domain. Digitized by eGangotri

ಪ್ರಾಣಿಗಳ ಕರ್ಮಾನುಸಾರವಾಗಿಯೇ ಕರ್ಮಗಳಿಂದ ಪ್ರೇರಿತಳಾದ ಶತರೂಪೆ ಗೋರೂಪವನ್ನು, ಮನುವು ವೃಷಭ ರೂಪವನ್ನು ಪಡೆಯುವರು, ನಂತರ ಅದಕ್ಕೆ ತಕ್ಕಬುದ್ಧಿ ಅವರಿಗೆ ಹುಟ್ಟುವುದು. ಮನುವಿನಿಂದ ಮನುಷ್ಯ ಸಂತತಿ ಯಾದಂತೆ, ಗೋವಿನಿಂದ ಗೋವುಗಳ ಸಂತಾನವು ಸ್ತ್ರೀ–ಪುರುಷ ದ್ವಂದ್ವ ಮೂಲಕ ಆಗುತ್ತಾ ಬಂದಿದೆ. ಇದೇ ರೀತಿ ಕುದುರೆಗಳು, ಕತ್ತೆಗಳು, ಹೇಸರಕತ್ತೆಗಳೂ ಸಹ ಪೂರ್ವಜನ್ಮದ ಕರ್ಮಾನುಸಾರ ದ್ವಂದ್ವ ಸಮಾಗಮ ದಿಂದ ಉತ್ತರೋತ್ತರ ಅವಿಚ್ಛಿನ್ನವಾಗಿ ಬೆಳೆದು ಬಂದು ಅವುಗಳ ಸಂತತಿ ಈಗಲೂ ಕಾಣುತ್ತಿದೆ. ಹೀಗೆಯೇ ಕುರಿಗಳು, ಆಡುಗಳು ಇತ್ಯಾದಿ ಎಲ್ಲಾ ಜಂಗಮಪ್ರಾಣಿಗಳೂ ಆಯಾಯ ಜಾತಿಯ ಸ್ತ್ರೀ-ಪುರುಷ ದ್ವಂದ್ವ ಮೂಲಕ ಸೃಷ್ಟಿಯಾದವು. ದ್ವಂದ್ವಸಮಾಗಮದಿಂದ ಇರುವೆಗಳ ಪರ್ಯಂತರವೂ ಈ ಸಂತತಿ ಬೆಳೆದು ಬಂದಿದೆ. ಒಟ್ಟಿನಲ್ಲಿ ಸತ್ಯಸಂಕಲ್ಪನಾದ ವಿರಾಟಪುರುಷನು ಬ್ರಹ್ಮಾಂಡದೊಳಗೆ ಮೇಲ್ಕಂಡಂತೆಯೇ ಆಯಾಯ ಜೀವರ ಪೂರ್ವಕರ್ಮ, ಭಾವನಾನುಸಾರ ಸೃಷ್ಟಿಯಾದನು. ಹೀಗೆಯೇ ಮಾನವರ ಮತ್ತು ಇತರ ಪ್ರಾಣಿಗಳ ಸೃಷ್ಟಿ ಕ್ರಮವು, ಆದರೆ ಇದರಲ್ಲೂ ಒಂದು ವಿಶೇಷವನ್ನು ಅರಿಯ ಬೇಕಾದದ್ದು ಇದೆ.

ಸೃಷ್ಟಿಯ ಉಪಯೋಗ

ಕರ್ಮಾನುಷ್ಠಾನ ಮತ್ತು ಉಪಾಸನೆ, ಜಪ, ಪೂಜಾದಿಗಳನ್ನು ಅನುಷ್ಠಾನ ಮಾಡತಕ್ಕ ಮಧ್ಯಮಾಧಿಕಾರಿಗಳಿಗೆ ಸೃಷ್ಟಿ ವಿಚಾರವು ಅವಶ್ಯಕ. ಸೃಷ್ಟಿಯು ಎಲ್ಲಿಂದ ಆಯಿತು. ಹೇಗಾಯಿತು! ಇತ್ಯಾದಿ ವಿಚಾರದಿಂದ ಈಶ್ವರ ನೊಬ್ಬನಿದ್ದಾನೆಂಬುದು ನಿರ್ಣಯವಾಗುವುದು. ಈಶ್ವರನಿದ್ದಾನೆಂದು ತಿಳಿದ ಮೇಲೆ ಅಲ್ಲವೆ ನಾವು ಈಶ್ವರನನ್ನು ಆರಾಧಿಸಿ ಪ್ರಸನ್ನಗೊಳಿಸುವುದು **"ಸ್ವಕರ್ಮಣಾ ತಮಭ್ಯರ್ಚ ಸಿದ್ಧಿಂ ವಿಂದತಿ ಮಾನವಃ"** ಎಂದು ಗೀತೆಯಲ್ಲಿ ತನ್ನ ಕರ್ಮದಿಂದ ಆಂಧರೆ, ವರ್ಣ, ಆಶ್ರಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಇವುಗಳಿಗೆ ಹೇಳಿದ ಶಾಸ್ತ್ರೋಕ್ತ ಸಂಧ್ಯಾನುಷ್ಠಾನ. ಯಜ್ಞ, ಜಪ, ತಪ ಇತ್ಯಾದಿಗಳಿಂದ. ಪರಮೇಶ್ವರನನ್ನು ಪೂಜಿಸಿ ಅಂದರೆ ಈಶ್ವರಾರ್ಪಣೆಯಾಗುವಂತೆ ಅದರಿಂದ ಪ್ರಸನ್ನನನ್ನಾಗಿ ಮಾಡಿ, ಮಾನವನು ಸಿದ್ಧಿಯನ್ನು ಜ್ಞಾನದ ಮೂಲಕ ಮುಕ್ತಿಯನ್ನು ಹೊಂದುವನೆಂದು ಹೇಳಿದೆ. ಸೂತ್ರ ಭಾಷ್ಯದಲ್ಲಿ– **"ಸಗುಣೇಷು ಉಪಾಸನೇಷು ಉಪಯೋಕ್ಷ್ಯತ ಇತಿ ಪರಿಣಾಮಂ ಪ್ರಕ್ರಿಯಾಮಾಶ್ರಯಿಷ್ಯತಿ ಚಾಚಾರ್ಯಃ"** ಎಂದು ಸಗುಣ ಈಶ್ವರನ ಉಪಾಸನೆಗಳಿಗೆ ಉಪಯೋಗವಾಗುವುದೆಂದು ತಿಳಿದು ಪರಿಣಾಮ ಪ್ರಕ್ರಿಯೆಯೆಂಬುವ ಸೃಷ್ಟಿಪ್ರಕ್ರಿಯೆಯನ್ನು ಭಗವಾನ್ ಆಚಾರ್ಯಬಾದರಾಯಣರು ಆಶ್ರಯಿಸಿರುತ್ತಾರೆಂದು ಸೃಷ್ಟಿಯ ಅವಶ್ಯಕತೆಯನ್ನು ತಿಳಿಸಿದ್ದಾರೆ.

ಈಶ್ವರನೆಂದರೆ ಸರ್ವಶಕ್ತ, ಸರ್ವಜ್ಞ, ಸಚ್ಚಿದಾನಂದರೂಪ, ಸತ್ಯ-ಸಂಕಲ್ಪ, ಸತ್ಯಕಾಮ, ಜನನ ಮರಣಾದಿ ರಹಿತನು, ಜಗತ್ತಿನ ಸೃಷ್ಟಿ-ಸ್ಥಿತಿ, ಸಂಹಾರಗಳನ್ನು ನಿಗ್ರಹಾನುಗ್ರಹಗಳನ್ನು ಮಾಡುವ ಸರ್ವವ್ಯಾಪಕನಾದ ಪರಮಾತ್ಮನೇ ಈಶ್ವರನು, ಶುದ್ಧಬ್ರಹ್ಮವು ಶಕ್ತಿಯುಕ್ತವಾಗಿಯೇ ಸೃಷ್ಟಿ ಮೊದಲಾದವುಗಳನ್ನು ಮಾಡುವಾಗ ಈಶ್ವರನೆಂಬ ಹೆಸರಿನಿಂದ ಕರೆಯಲ್ಪಡುವುದೆಂದು ಹಿಂದೆಯೇ ತಿಳಿಸಿದೆ.

ಸೃಷ್ಟಿಕ್ರಮವು ವೇದಾಂತದಲ್ಲಿ ಹೀಗೆ ವಿವರಿಸಲ್ಪಟ್ಟಿದೆ:-

ಮಾಯಾಶಕ್ತಿ (ಮೂಲಾಜ್ಞಾನವೆಂಬ ಜಡಶಕ್ತಿ) **"ಮಾಯಾ ಚಾವಿದ್ಯಾ ಚ ಸ್ವಯಮೇನ ಭವತಿ"** ಎಂಬ ಶ್ರುತಿಯಂತೆ ಇದರಿಂದ ಕೂಡಿದ ಪರಬ್ರಹ್ಮನಿಂದ ಮೊದಲು ಪಂಚಮಹಾಭೂತಗಳು ಪುಟ್ಟುತ್ತವೆ. ಈ ಮಾಯಾಶಕ್ತಿಯು ಸಾಕ್ಷಿಗೆ ಗೋಚರವಾಗಿರುವ ಪ್ರಕೃತಿ. ಪರಮೇಶ್ವರನ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧೀನ (ಈ ಪ್ರಕೃತಿಗೆ ಸ್ವತಃ ಅಸ್ತಿತ್ವವೂ, ಸ್ಫೂರ್ತಿಯೂ ಇರುವುದಿಲ್ಲ.) ಈ ಪ್ರಕೃತಿಯು ಬ್ರಹ್ಮನಿಗಿಂತ ಭಿನ್ನವೂ ಅಲ್ಲ; ಸ್ವತಂತ್ರವೂ ಅಲ್ಲ. ಆದ್ದರಿಂದ ಅನಿರ್ವಾಚ್ಯ ಅಭಿನ್ನವೂ ಅಲ್ಲ, ಮತ್ತು ಸತ್ವರಜಸ್ತಮೋಗುಣರೂಪವಾದುದು **"ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ"** ಎಂಬ ಗೀತೆಯು ಇದರ ಸ್ವರೂಪವನ್ನೇ ಹೇಳುವುದು. ಈ ಶಕ್ತಿಯೇ ಅಪರಾಪ್ರಕೃತಿಯೆಂದು ಗೀತೆಯಲ್ಲಿ ಪ್ರಸಿದ್ಧವಾಗಿದೆ. ಇದೇ ಈಶ್ವರನ ವೀಕ್ಷಣ ಮಾತ್ರದಿಂದ ಪೃಥಿವೀಜಲಾದಿ ಪಂಚ ಭೂತಗಳ ರೂಪದಲ್ಲಿ ಪರಿಣಾಮ ಹೊಂದುವುದು. ಬುದ್ಧಿ, ಅಹಂಕಾರ ಎಂಬುವುದು; ಇದಕ್ಕೆ ಮೊದಲು ಹುಟ್ಟುವುದು ಬುದ್ಧಿ. ಸಮಷ್ಟಿಬುದ್ಧಿ, ಹಿರಣ್ಯಗರ್ಭನ ಬುದ್ಧಿ, ಅಂದರೆ **'ತದೈಕ್ಷತ ಬಹುಸ್ಯಾಂ ಪ್ರಜಾಯೇಯೇತಿ'** ಎಂದು ಹೇಳಿದೆ. ನಾನೇ ನಾನಾರೂಪವಾಗಿ ಹುಟ್ಟುವೆನೆಂದು ಸೃಷ್ಟಿ ವಿಷಯದಆಲೋಚನೆಯೇ ವೀಕ್ಷಣ. **"ಸೋಽಕಾಮಯತ ಬಹುಸ್ಯಾಂ ಪ್ರಜಾಯೇಯೇತಿ"** ಎಂಬುವ ಸಂಕಲ್ಪವೇ ಅಹಂಕಾರ. ಅಹಂಕಾರಕ್ಕೂ ಕಾರಣವಾದ ಮೊದಲು ಹುಟ್ಟುವ ಬುದ್ಧಿಯೇ ಮಹತ್ತತ್ವ. ಅಹಂಕಾರವೆಂಬುದು ಅವಿದ್ಯೆಯೆಂದ ಕೂಡಿದ ಅವ್ಯಕ್ತವು. ಅವಿದ್ಯೆಯ ತಾದಾತ್ಮ್ಯ ಹೊಂದಿದ ಅವ್ಯಕ್ತವು ಎಂದರ್ಥ. ಮೇಲೆ ಹೇಳಿದ ಅಹಂಕಾರ, ಬುದ್ಧಿಗಳಿಂದ ಪಂಚ ತನ್ಮಾತ್ರಗಳು ಹುಟ್ಟುವುವು.

ಪಂಚತನ್ಮಾತ್ರಗಳ ವಿವರಣೆ

ಪಂಚೀಕರಣವಾಗದಿರುವ ಪಂಚ ಮಹಾಭೂತಗಳು :-

ಪೃಥಿವಿಯು ಗಂಧತನ್ಮಾತ್ರ. ಅಂದರೆ ಗಂಧ ಒಂದೇ ಒಂದು ಗುಣವಾಗಿದುದ್ದು, ಸೂಕ್ಷ್ಮವೆನ್ನು ಎಂದರ್ಥ. ಹಾಗೆಯೇ ಜಲ–ರಸತನ್ಮಾತ್ರ, ಅಗ್ನಿ-ರೂಪತನ್ಮಾತ್ರ, ವಾಯು-ಸ್ಪರ್ಶತನ್ಮಾತ್ರ ಆಕಾಶ-ಶಬ್ದತನ್ಮಾತ್ರ ಎಲ್ಲವೂ

CC-O. In Public Domain. Digitized by eGangotri

ಒಂದೊಂದೇ ಗುಣವಿಶೇಷಯುಕ್ತವಾಗಿಯೇ ಹುಟ್ಟುವ ಅತಿಸೂಕ್ಷ್ಮವಸ್ತುಗಳು (ಇವುಗಳೇ ಸಾವಯವ ಪರಮಾಣುಗಳು)

ಕ್ರಮಬದ್ಧ ಸೃಷ್ಟಿ :– **"ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ"** ಇತ್ಯಾದಿ ಶ್ರುತಿಯಲ್ಲಿ ಹೇಳಿದಂತೆ ಪ್ರತ್ಯಗಾತ್ಮಸ್ವರೂಪವಾದ ಬ್ರಹ್ಮದಿಂದ ಶಕ್ತಿಮೂಲಕವಾಗಿ ಮೊದಲು ಆಕಾಶವೂ. ಆಕಾಶವಾಗಿ ಪರಿಣಮಿಸಿದ ಬ್ರಹ್ಮದಿಂದ ನಂತರ ವಾಯುವೂ ವಾಯುರೂಪ ತಾಳಿದ್ದ ಬ್ರಹ್ಮದಿಂದ ಅಗ್ನಿಯೂ, ಅಗ್ನಿರೂಪವಾಗಿದ್ದ ಬ್ರಹ್ಮದಿಂದ ಜಲವೂ. ಜಲರೂಪವನ್ನು ಹೊಂದಿದ್ದ ಬ್ರಹ್ಮದಿಂದ ಪೃಥಿವಿಯೂ ಈ ರೀತಿಯಾಗಿ ಬ್ರಹ್ಮವನ್ನು ಬೆಂಬಿಡದೆ ಆಕಾಶಾದಿ ಪಂಚಭೂತಗಳೂ ಸೂಕ್ಷ್ಮವಾಗಿ ಹುಟ್ಟುವವು. ಅನಂತರ ಪಂಚಭೂತಗಳು ಈಶ್ವರನಿಂದ ಪಂಚೀಕೃತವಾಗುತ್ತವೆ.

ಪಂಚೀಕರಣ : –ಒಂದೊಂದರಲ್ಲಿ ಇತರ ಭೂತಗಳ ಅಂಶಗಳು ನಾಲ್ಕು ಸೇರಿದರೆ, ಪೃಥಿವಿಯನ್ನು ಸಮನಾಗಿ ಅರ್ಧ ಮಾಡಿ, ಉಳಿದ ಅರ್ಧವನ್ನು ನಾಲ್ಕು ಭಾಗಮಾಡಿ ಜಲ. ತೇಜಸ್ಸು. ವಾಯು. ಆಕಾಶಗಳಲ್ಲಿ ಸೇರಿಸಿದರೆ ಪೃಥಿವಿಯ ಅಂಶವು ನಾಲ್ಕರಲ್ಲೂ ಸೇರುತ್ತದೆ. ಹೀಗೆ ಜಲದ ನಾಲ್ಕನೇ ಒಂದು ಭಾಗ. ತೇಜಸ್ಸಿನ ನಾಲ್ಕನೇ ಒಂದು ಭಾಗ, ವಾಯುವಿನ ನಾಲ್ಕನೇ ಒಂದು ಭಾಗ, ಆಕಾಶದ ನಾಲ್ಕನೇ ಒಂದು ಭಾಗ ಒಟ್ಟು ಹೀಗೆ ನಾಲ್ಕು ಭೂತಗಳ ಅಂಶಗಳು ಪೃಥಿವಿಯಲ್ಲಿ ಸೇರಿದರೆ ಇದರ ಅರ್ಧದೊಂದಿಗೆ ಪೃಥಿವಿಯು ಪಂಚೀಕೃತವಾಗುವುದು. (ಐದು ಅಂಶಗಳಿಂದ ಕೂಡಿದ ಪೃಥಿವಿಯಾಗುವುದು) ಇದರಂತೆಯೇ ಜಲ, ತೇಜಸ್ಸು, ವಾಯು ಆಕಾಶಗಳೂ ಪಂಚೀಕೃತವಾಗುತ್ತವೆಯೆಂದು ಊಹಿಸಿ ಕೊಳ್ಳಬೇಕು. ಪಂಚೀಕರಣ ಮಾಡುವ ಅಧಿಕಾರ ಮತ್ತು ಶಕ್ತಿ ಈಶ್ವರನಿಗೆ ಮಾತ್ರ. ಜೀವರಿಗೆ ಇಲ್ಲವೆಂಬುದು ಸಿದ್ಧಾಂತ. ಬ್ರಹ್ಮಸೂತ್ರ **"ಸಂಜ್ಞಾಮೂರ್ತಿಕ್ಲೃಪ್ತಿಸ್ತ್ವಿವೃತ್ಕುರ್ವತಃ"** ಒಂದೊಂದರಲ್ಲೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಚ್ಚಾಗಿ ಅರ್ಧಭಾಗವಿರುವುದರಿಂದ ಪೃಥಿವಿ, ಜಲ, ಅಗ್ನಿ, ವಾಯು, ಆಕಾಶ ಎಂದು ಹೆಸರು ಬಂದಿದೆ. ಪಂಚೀಕರಣವನ್ನು ಆಚಾರ್ಯರು ಹೇಳಿಲ್ಲವೆಂದು ಕೆಲವೇ ಆಧುನಿಕ ವಿಮರ್ಶಕರು ಹೇಳುವರು. ಇದಕ್ಕೆ ಛಾಂದೋಗ್ಯದಲ್ಲಿ ತ್ರಿವೃತ್ಕರಣವನ್ನು ತೇಜಸ್ಸು, ಜಲ, ಪೃಥಿವಿ ಈ ಮೂರಕ್ಕೆ ಹೇಳಿರುವುದು ಒಂದು ಕಾರಣ. ಮೇಲ್ಕಂಡ ಸೂತ್ರದಲ್ಲಿ ನಾಮರೂಪಗಳ ಸೃಷ್ಟಿಯು ತ್ರಿವೃತ್ಕರಣ ಮಾಡಿರುವ ಈಶ್ವರನಿಗೇ ಸಂಬಂಧಿಸಿದ್ದೆಂದು ಸ್ಪಷ್ಟೋಕ್ತಿಯೇ ಕಾರಣ. ಅಲ್ಲದೆ ಆಕಾಶ, ವಾಯು ಇವುಗಳಲ್ಲಿ ಪೃಥಿವಿಯ ಗಂಧವಾಗಲಿ, ತೇಜಸ್ಸಿನ ರೂಪವಾಗಲೀ, ಜಲದ ರಸವಾಗಲೀ ಒಂದೂ ಕಾಣುವುದಿಲ್ಲವೆಂಬ ಅನುಭವವೂ ಕಾರಣ. ಆದರೂ ಭಾಷ್ಯಕಾರರು ಛಾಂದೋಗ್ಯದಲ್ಲಿ ತ್ರಿವೃತ್ಕರಣವು ಪಂಚೀಕರಣಕ್ಕೆ ಉಪಲಕ್ಷಣ (ಸೂಚಕ–ಅನುವಾದಕ)ವೆಂದು ಹೇಳಿರುವರು.

"ಅಥವಾ ರೂಪವತಾಮಪಿ ತ್ರಿವೃತ್ಕರಣಂ ಪ್ರದರ್ಶನಾರ್ಥ–ಮೇವ ಮನ್ಯತೇ ಶ್ರುತಿಃ ಯೆಥಾ ತು ತ್ರಿವೃತ್ಕೃತೇ ತ್ರೀಣಿ ರೂಪಾಣೀ-ತ್ಯೇವ ಸತ್ಯಂ ತಥಾಪಂಚೀಕರಣೇಽಪಿ ಸಮಾನೋ ನ್ಯಾಯಃ" **(ಛಾಂ. ಭಾಷ್ಯ ೬–೪–೪)** ವಾಯು, ಆಕಾಶ ಇವುಗಳಲ್ಲೂ ಪಂಚೀಕರಣವನ್ನು ಒಪ್ಪಬೇಕು, ಕೇವಲ ಮೂರನ್ನೇ ಹೇಳಿದರೆ ಈ ಎರಡು ಪೃಥಿವ್ಯಾದಿಗಳಲ್ಲಿ ಸೇರಲಿಲ್ಲವಾದ್ದರಿಂದ ಬ್ರಹ್ಮಜ್ಞಾನವಾದರೆ ಎಲ್ಲವೂ ತಿಳಿದಂತಾಗುತ್ತದೆ ಎಂಬ ವೇದಾರ್ಥವು ಹೋಗುವುದು. ಏಕೆಂದರೆ ಗಂಧ, ರಸ, ಶಬ್ದ, ಸ್ಪರ್ಶಗಳು ಉಳಿದು ಇವುಗಳ ತತ್ವವು ತಿಳಿಯದೆ ಹೋಗುವುವು. ಆದರಿಂದ ಪಂಚೀಕರಣವನ್ನು ಒಪ್ಪಬೇಕು. ಆವಾಗ ರೂಪವುಳ್ಳ ಪೃಥಿವೀ, ತೇಜಸ್ಸು, ಜಲಗಳಲ್ಲಿ ರೂಪ, ಶಬ್ದ, ಸ್ಪರ್ಶಗಳ ಅನುಭವವಿದ್ದಂತೆ ಸ್ಪರ್ಶರೂಪವಾದ ವಾಯು, ಶಬ್ದಗುಣವಿರುವ ಆಕಾಶ ಈ ಭೂತಗಳೂ ಅವುಗಳಲ್ಲಿ ಸೇರಿರುವಂತೆ ಊಹಿಸಬೇಕು. ಹಾಗೂ ಜಲ, ಪೃಥಿವಿಗಳು ರೂಪವುಳ್ಳದ್ದರಿಂದ ರಸ, ಗಂಧಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವುಗಳಲ್ಲಿ ಸೂಕ್ಷ್ಮವಾಗಿ ಸೇರಿವೆಯೆಂದು ಊಹಿಸಿಹೇಳಬೇಕಾಗಿದೆ. ತೇಜ, ಜಲ, ಪೃಥಿವಿಗಳನ್ನೇ ಶ್ರುತಿಯು ಉದಾಹರಿಸಿದ್ದರೂ ಸರ್ವ ಕಾರ್ಯಗಳೂ ಅಂತರ್ಭೂತವಾಗಿವೆಯೆಂದು ಹೇಳದೆ ವಿಧಿಯಿಲ್ಲ. ಅಲ್ಲಿ ಮೂರ್ತವಾದ ದ್ರವ್ಯವನ್ನು ಬಿಡಿಸಿ ವಾಯು, ಆಕಾಶಗಳಲ್ಲಿ ಪೃಥಿವಿಯ ಗಂಧ, ಜಲದ ರಸವು ಪ್ರತ್ಯೇಕ ಕಾಣಿಸುವುದಿಲ್ಲ. ಆದರಿಂದ ಪಂಚೀಕರಣವು ವಿವಕ್ಷಿತ. ತ್ರಿವೃತ್ಕರಣ ವೆಂಬುದು ಒಂದು ಉದಾಹರಣೆ ಮಾತ್ರ. ಮೂರು ದಾರಗಳಿಂದ ಹೊಸೆದು ಮಾಡಿದ ಒಂದು ರಜ್ಜುವಿನಂತೆ ತ್ರಿವೃತ್ಕರಣವು ಈ ಬಗೆಯಲ್ಲಿದೆ. ಪೃಥಿವೀ ತತ್ವದ ಅರ್ಧಭಾಗದ ಜೊತೆಗೆ ಜಲದ ನಾಲ್ಕನೇ ಒಂದು ಭಾಗವನ್ನು, ತೇಜಸ್ಸಿನ ನಾಲ್ಕನೇ ಒಂದು ಭಾಗವನ್ನೂ ಸೇರಿಸಿದರೆ ತ್ರಿವೃತ್ಕೃತ ಪೃಥಿವಿಯಾಗುವುದು. ಹೀಗೆಯೇ ಜಲತತ್ವ. ತೇಜಸ್ತತ್ವಗಳಲ್ಲೂ ಅರ್ಧಭಾಗವಿಟ್ಟು ಉಳಿದ ಅರ್ಧದಲ್ಲಿ ಇತರೆ ತತ್ವಗಳಲ್ಲಿ ಕಾಲುಕಾಲುಭಾಗ ಸೇರಿಸಿದರೆ ತ್ರಿವೃತ್ಕರಣವಾಗುವುದು. ಅಂದರೆ ಪೃಥಿವಿಯಲ್ಲಿ ಪೃಥಿವೀ ಅಂಶ ಅರ್ಧ, ಜಲ ಮತ್ತು ತೇಜಸ್ಸಿನ ಅಂಶಗಳು ಕಾಲು ಕಾಲುಭಾಗ ಸೇರಿ, ಒಂದು ಪೃಥಿವಿಯು. ಜಲ, ತೇಜಸ್ಸುಗಳಿಂದ ಸೇರಿ ಮೂರು ಭಾಗವುಳ್ಳ ಒಂದು ತತ್ವವಾಗುವುದು. ಹೀಗೆ ಜಲವನ್ನು ತೇಜಸ್ಸನ್ನು ಮೂರು ಭಾಗವುಳ್ಳದ್ದಾಗಿ ಭಾವಿಸಬೇಕು. ತ್ರಿವೃತ್ಕರಣ ಮಾಡುವ ಶಕ್ತಿ ಈಶ್ವರನಿಗೇ ಹೊರತು ಜೀವರಿಗೆ ಯಾರಿಗೂ ಇಲ್ಲ. ಹಿರಣ್ಯಗರ್ಭನಿಗೂ ಇಲ್ಲವೆಂಬುದು ಸಿದ್ಧಾಂತವಿದೆ ಇದರಂತೆ ಪಂಚೀಕರಣವೂ ಆಗಿರುವುದೆಂದು ಊಹಿಸಬೇಕು,

ಪಂಚೀಕರಣವಾಗದಿರುವ ದಶೆಯಲ್ಲಿ ಲಿಂಗಶರೀರದ ಉತ್ಪತ್ತಿ

"ಅಪಂಚೀಕೃತ ಭೂತೋತ್ಥಂ ಸೂಕ್ಷ್ಮಾಂಗಂ ಭೋಗಸಾಧನವ"

ಲಿಂಗ ಶರೀರವನ್ನೇ ಸೂಕ್ಷ್ಮ ಶರೀರವೆಂದೂ ಹೇಳುವರು. ಸೂಕ್ಷ್ಮ ಶರೀರ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೆಂದರೆ:-ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳೂ, ಪಂಚ-ಪ್ರಾಣಗಳೂ, ಮನಸ್ಸು ಬುದ್ಧಿ-ಈ ೧೭ ಪದಾರ್ಥಗಳ ಗುಂಪಿಗೆ ಸೂಕ್ಷ್ಮ ಶರೀರ, ಲಿಂಗಶರೀರವೆಂದು ಹೆಸರು. ಇದು ಕಣ್ಣಿಗೆ ಕಾಣುವುದಲ್ಲ. ಆದರಿಂದ ಸೂಕ್ಷ್ಮವೆಂಬುದಾಗಿದೆ. ಇದಿಲ್ಲದೆ ಸ್ಥೂಲಶರೀರದಲ್ಲಿ ಜೀವನಿಗೆ ಭೋಗವು ಆಗುವುದಿಲ್ಲ. ಸ್ಥೂಲಶರೀರವು ಒಂದು ಗೃಹವಿದ್ದಂತೆ, ಸೂಕ್ಷ್ಮಶರೀರವು ಭೋಗಕ್ಕೆ ಬೇಕಾದ ಉಪಕರಣಗಳು ಇವುಗಳು ನಿಲ್ಲುವುದಕ್ಕೆ ಸ್ಥೂಲಶರೀರವೇ ಆಧಾರ **'ಭೋಗಾಯತನಂ ಶರೀರಮ್'** ಎಂದು ತಾರ್ಕಿಕರೂ ದಾರ್ಶನಿಕರೂ ಹೇಳುವರು. ಸೂಕ್ಷ್ಮಶರೀರವು ಭೋಗಸಾಧನವು. ದೇಹಕ್ಕೆ ಬೇರೆಯಾಗಿ ಆತ್ಮನಿದ್ದಾನೆಂದು ತಿಳಿಯುವುದಕ್ಕೆ ತಕ್ಕ ಉಪಾಯ, ಆದರಿಂದ ಲಿಂಗ ಶರೀರವೆಂದು ಹೆಸರಾಗಿದೆ. ಪಂಚಜ್ಞಾನೇಂದ್ರಿಯಗಳಿಂದ ಕೂಡಿದ ಮನಸ್ಸು, ಬುದ್ಧಿ-ಇವುಗಳಿಂದಲೇ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯಗಳನ್ನು ಜೀವನು ಅನುಭವಿಸುವನು. ಆದರಿಂದ ಸೂಕ್ಷ್ಮಶರೀರವು ಅವಶ್ಯವಿರಬೇಕು. ಕರ್ಮೇಂದ್ರಿಯಗಳಿಂದ ವಚನ-ಆದಾನ-ವಿಹರಣ-ಉತ್ಸರ್ಗ, ಆನಂದ ಇವುಗಳ ಕಾರ್ಯಗಳು ಹುಟ್ಟುವುವು.

ಒಟ್ಟಿನಲ್ಲಿ ಸ್ಥೂಲಶರೀರದಂತೆ ಸೂಕ್ಷ್ಮಶರೀರವೂ ಜೀವಾತ್ಮನಿಗೆ ಅವಶ್ಯವೆಂಬುದನ್ನು ನಿರ್ಣಯಿಸಿದೆ. ಈ ಲಿಂಗ ಶರೀರವು ಮೋಕ್ಷಪರ್ಯಂತರ ಪ್ರತಿ ಜೀವರಿಗೂ ಸ್ಥಿರವಾಗಿರುವುದು ಇದರಿಂದಲೇ ಜೀವರು ಇಹಲೋಕ ಪರಲೋಕಗಳಿಗೆ ಗಮನಾಗಮನಗಳನ್ನು ಮಾಡುತ್ತಲಿರುವರು.

ಈ ಲಿಂಗಶರೀರವು ಸಮಷ್ಟಿ, ವ್ಯಷ್ಟಿಯೆಂದು ಎರಡು ಬಗೆ:-

ಲಿಂಗಶರೀರವು ಸಮಷ್ಟಿ, ವ್ಯಷ್ಟಿಯೆಂದು ಎರಡು ಬಗೆಯಾಗಿರುವುದು. ಸಮಷ್ಟಿ ಎಂಬುದು ವನ ಎಂಬಂತೆ. ವ್ಯಾಪಕ. ವ್ಯಷ್ಟಿಯೆಂಬುದು ವೃಕ್ಷ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬುಂತೆ, ಬಿಡಿಬಿಡಿಯಾಗಿರುವುದು ಸಮಷ್ಟಿಲಿಂಗಶರೀರವನ್ನು ವಾಯು, ಸೂತ್ರ, ಪ್ರಾಣ, ಸಮಷ್ಟಿ ಬುದ್ಧಿ. ಹೀಗೆಂದು ಆ ವೇದವು ಹೇಳುವುದು. ಇದು ಆಕಾಶದಂತೆ ಅತಿ ಸೂಕ್ಷ್ಮವಸ್ತು. ಪೃಥ್ವಿ ಪಂಚಭೂತಗಳು ಲಿಂಗಶರೀರವೂ, ಪ್ರಾಣಿಗಳ ಪೂರ್ವಜನ್ಮದ ಕರ್ಮಗಳೂ, ವಾಸನೆಗಳೂ, ಜನ್ಮಾಂತರ ಉಪಾಸನೆಗಳೂ ಈ ಸಮಷ್ಟಿಲಿಂಗಶರೀರದಲ್ಲಿಯೇ ಅಡಗಿರುತ್ತವೆ, ಇವೇ ಮುಂದಿನ ಸೃಷ್ಟಿಗೆ ಬೀಜವಾಗುವುವು. ಮೇಲ್ಕಂಡ ಸಮಷ್ಟಿ ವಾಯುವು ಸಪ್ತ ಸಪ್ತ(ಏಳೇಳು)ಮರುತ್ತುಗಳಾಗಿ ವಾಯುಮಂಡಲದಲ್ಲಿ ಸೇರಿರುವುದು. ಸಮುದ್ರದ ತೆರೆಯಂತೆ ಒಂದು ಸಮಷ್ಟಿವಾಯುವಿನಿಂದ ಸಪ್ತ ಮರುತ್ತುಗಳು ಹೊರಡುವುವು ಬೀಸುವುವು ಈ ವಾಯುವನ್ನೇ ಸೂತ್ರಾತ್ಮನೆಂದೂ ಹೇಳುವುದು–**"ವಾಯುರ್ವೈ ಗೌತಮ ತತ್ಸೂತ್ರಮ್" "ವಾಯುನಾ ವೈ ಗೌತಮ ಸೂತ್ರೇಣ ಅಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಭೂತಾನಿ ಸಂದೃಬ್ಧಾನಿ"** ಎಂದು ಬೃ- ವೇದವು. ಸೂತ್ರ ಎಂದರೆ ದಾರ. ದಾರದ ಆಧಾರದಲ್ಲಿ ಮಣಿಗಳು ನಿಲ್ಲುವುವು **'ಸೂತ್ರೇ ಮಣಿಗಣಾ ಇವ'** ಎಂದಂತೆ ಸೂತ್ರದಂತಿರುವ ಈ ವಾಯು ಪ್ರಾಣ ಎಂಬ ಆತ್ಮನಲ್ಲಿ ಇಹಲೋಕ (ಈ ಶರೀರ) ಪರಲೋಕ (ಪರಲೋಕದ ಶರೀರ) ಬ್ರಹ್ಮನಿಂದ ಆರಂಭಿಸಿ ಕ್ರಿಮಿ, ಕೀಟ ಪರ್ಯಂತರ ಇರುವ ಜೀವ ಜಂತುಗಳೂ ಸಹ ದಾರದಲ್ಲಿ ಪೋಣಿಸಿದ ಮಣಿಗಳಂತೆ ನಿಂತಿರುವುವು. ದಾರವು ತಪ್ಪಿದರೆ ಮಣಿಗಳು ಉದುರಿಬೀಳುವಂತೆ ಈ ಸಮಷ್ಟಿಪ್ರಾಣ ವಾಯುವಿನ ಆಧಾರವು ತಪ್ಪಿತೆಂದರೆ ನಮ್ಮ ಅಂಗಾಂಗಳು ಕಾಷ್ಠದಂತಾಗಿ ಕುಸಿದು ಬೀಳುವವು. ಆದರಿಂದ ಸಮಷ್ಟಿ ಪ್ರಾಣವಾಯುವು ಸರ್ವರಿಗೂ ಆಧಾರ. ಜೀವದಾನ ಮಾಡುವಂತಹುದೆಂದು ತಿಳಿಯುವುದು, ಈ ವಿಷಯವನ್ನೇ ವೇದವು ತಿಳಿಸುವುದು. ಬ್ರಹ್ಮಲೋಕಗಳೂ ಸಹ ಈ ಸೂತ್ರದಲ್ಲೇ ನಿಂತಿವೆ. ಈಗಲೂ ಪೃಥಿವಿಯು ಜಲದಿಂದ ವ್ಯಾಪ್ತವಾಗಿ ಜಲದ ಆಧಾರದಲ್ಲಿ ನಿಂತಿರುವಂತೆ ಇದೆ.

ಈ ಸಮಷ್ಟಿ ಅಖಂಡ ವ್ಯಾಪಕವಾದ ಲಿಂಗಶರೀರದ ಅಭಿಮಾನಿಯೇ

Sri Vidyabharathi Book Centre, Shirgeri

CC-O. In Public Domain. Digitized by eGangotri

ಹಿರಣ್ಯಗರ್ಭನು. ವಾಯು ಸೂತ್ರಾತ್ಮನೆಂಬುವನು. ಸ್ಥಾವರ ಜಂಗಮ ಪ್ರಾಣಿಗಳಿಗೆ ಅಂತರಾತ್ಮನು. **"ಏಷ ಸರ್ವಭೂತಾನ್ತರಾತ್ಮಾ"** ಎಂದು ಮುಂಡಕದಲ್ಲಿ ಹೇಳಿದೆ. ಹೊರಗೂ ಇವನೇ ಇರುವುದು. ಅಧ್ಯಾತ್ಮ, ಅಧಿಭೂತ, ಅಧಿದೈವ ಎಂಬವ ಸ್ಥಳಗಳಲ್ಲೂ ವಿವಿಧವಾಗಿ ಬಿಡಿಯಾಗಿಯೂ ವ್ಯಾಪಿಸಿರುವುದರಿಂದ ವ್ಯಷ್ಟಿಯಾಗಿದೆ. ಕೇವಲ ಸೂತ್ರಾತ್ಮನ ಸ್ವರೂಪ ಸಮಷ್ಟಿ. ಈ ಬಗೆಯ ಎರಡು ರೂಪವುಳ್ಳ ಹಿರಣ್ಯಗರ್ಭನು ಪೂರ್ವಜನ್ಮದ ಪುಣ್ಯಾತಿಶಯದಿಂದ ಹುಟ್ಟವನು. **ಈತನೇ ವಿರಾಟಪುರುಷನಾಗುವನು.** ಪಂಚೀಕೃತವಾದ ಪಂಚಭೂತಗಳು ಹಿಂದೆ ಹೇಳಿದ ಕ್ರಮದಲ್ಲೇ ಹುಟ್ಟಿ ಸ್ಥೂಲರೂಪಕ್ಕೆ ಬಂದು ಜೀವರ ಉಪಭೋಗಕ್ಕೆ ಅನುಭವಕ್ಕೆ ಕಾಣಿಸಿಕೊಳ್ಳುವುವು. ವಿವಿಧ ಜೀವರಾಶಿಗಳಿಂದ ತಂಂಬಿದ ವಿರಾಟಪುರುಷನ ಶರೀರವೇ ಬ್ರಹ್ಮಾಂಡ ಶರೀರವು. ಇದರ ಅಭಿಮಾನಿಯಾದ ಜೀವವೇ ವಿರಾಟ್ ಪುರುಷನು. ವಿರಾಟ್ ಪುರುಷನು **"ತಸ್ಮಾದ್ ವಿರಾಡಜಾಯತ"** ಎಂದು ಹೇಳಿದೆ. ಹುಟ್ಟಿದವನಿಗೆ ಮೇಲಿನ ಲೋಕವೇ ಶಿರಸ್ಸು, ಸೂರ್ಯಚಂದ್ರರೇ ಕಣ್ಣುಗಳು. ದಶದಿಕ್ಕುಗಳೇ ಕಿವಿಗಳು. ಬೀಸುವ ವಾಯುವೇ ಪ್ರಾಣ. ಇಡೀ ಜಗತ್ತೆ ಹೃದಯವು. ಹೊರ ಹೊಮ್ಮಿದ ವೇದಗಳೇ ವಾಕ್ಕು, ಪೃತ್ವಿವಿಯೇ ಪಾದವು. ಬ್ರಾಹ್ಮಣರೇ ಮುಖಗಳು. ಕ್ಷತ್ರಿಯರೇ ಬಾಹುಗಳು. ವೈಶ್ಯರೇ ತೊಡೆಗಳು, ಶೂದ್ರರೇ ಈತನ ಪಾದಗಳು ಒಟ್ಟಿನಲ್ಲಿ ಹದಿನಾಲ್ಕು ಲೋಕಗಳಿಂದ ಕೂಡಿದ ಬ್ರಹ್ಮಾಂಡ ಶರೀರಾಭಿಮಾನಿ ಜೀವನು ವಿರಾಟ್ ಪುರುಷನು. ಇವನಿಗೆ ವಿಶ್ವಎಂದೂ ಹೆಸರಿದೆ. ವೈಶ್ವಾನರ ಎಂದೂ ಹೆಸರಿದೆ. ಹೀಗೆ ಈಶ್ವರ. ಹಿರಣ್ಯಗರ್ಭ. ವಿರಾಟ್‌ಪುರುಷ ಎಂದಂತೆಯೇ ಜೀವರಿಗೂ ವಿಶ್ವ. ತೈಜಸ. ಪ್ರಾಜ್ಞ ಎಂದು ಹೆಸರಿದೆ. ಜಾಗರಾಭಿಮಾನಿ- ವಿಶ್ವ. ಸ್ವಪ್ನಾಭಿಮಾನೀ ತೈಜಸ. ಸುಷುಪ್ತಾಭಿಮಾನೀ- ಪ್ರಾಜ್ಞಮೆಂಬ ಮೂರು ರೂಪಗಳಿವೆ. ಸುಷುಪ್ತಿಯಲ್ಲಿ ಮೂಲಭೂತವಾದ ಅವಿದ್ಯಾ ಪ್ರಕೃತಿಯೊಂದಿಗೆ ಅವ್ಯಕ್ತವಾಗಿ ಪ್ರಾಜ್ಞನೆನಿಸಿ ಆನಂದಾನುಭವಿಯಾಗುವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಪ್ನದಲ್ಲಿ ಕೇವಲ ವಾಸನಾ ರೂಪವಾದ ಪ್ರಪಂಚವನ್ನು ಕಾಣುತ್ತಾ ಸೂಕ್ಷ್ಮಬುದ್ಧಿ ಲಿಂಗಶರೀರಾಭಿಮಾನಿಯಾಗಿ ತೈಜಸನೆಂದಾಗುವನು. ಈತನೇ ಎಚ್ಚರವಾದಾಗ ಬಹಿರಿಂದ್ರಿಯಗಳ ಮೂಲಕ ಬಾಹ್ಯ ಪ್ರಪಂಚವನ್ನು ಕಾಣುತ್ತಾ ಸ್ಥೂಲಶರೀರಾಭಿಮಾನಿಯಾಗಿ ವಿಶ್ವನೆನಿಸುವನು, (ಮಾಂಡೂಕ್ಯದ ಸಾರ)

ಅವಿದ್ಯೆಯು ಸ್ವರೂಪ: ಲಿಂಗಶರೀರವಿರುವ ಸ್ಥಾನ : ಮತ್ತು ಸ್ವಪ್ನ ವೃತ್ತಿಗಳು :

ಮಾನವ ಶರೀರದಲ್ಲಿ ಹಿತ ಎಂಬ ನಾಡಿಗಳಿರುವುವು. ಅವುಗಳು ಬಿಳಿ, ಕೆಂಪು, ನೀಲಿ, ಹಳದಿ ಬಣ್ಣಕ್ಕೆ ಇರುತ್ತವೆ. ತಿಂದ ಆಹಾರದ ಪರಿಣಾಮವೇ ರಸವು. ಪಿತ್ತ ಅಧಿಕವಾದರೆ ಹಳದಿ ಬಣ್ಣವಾಗಿಯೂ, ಶ್ಲೇಷ್ಮವು ಅಧಿಕವಾದರ ಬೆಳ್ಳಗೂ, ಪಿತ್ತ ಕಮ್ಮಿಯಾದರೆ ನೀಲಿ, ಅಥವಾ ಹಸಿರಾಗಿಯೂ, ಧಾತುಗಳು ಸಮವಾಗಿದ್ದರೆ ಕೆಂಪಾಗಿಯೂ ಆಗುವುದು. ಈ ಬಗೆಯ ಬಣ್ಣ ಬಣ್ಣದ ರಸವಾಹಿನಿಯಾದ ನಾಡಿಗಳು ಬಣ್ಣಬಣ್ಣವಾಗಿರುವುವು. ಸುಶ್ರುತದಲ್ಲೂ ಹೀಗೆ ಹೇಳಿದೆ. ಇಂತಹ ನಾಡಿಗಳು ತಲೆಕೂದಲಿನ ನೂರನೇ ಒಂದು ಭಾಗದಷ್ಟು ಸೂಕ್ಷ್ಮವಾಗಿರುವುವು. ಇವು ದೇಹದಲ್ಲಿ ಎಲ್ಲಾ ಕಡೆಯಲ್ಲೂ ವ್ಯಾಪಿಸುವುವು. ಅವುಗಳಲ್ಲಿ ಸಪ್ತದಶಕ(೧೭) ಲಿಂಗ ಶರೀರವು ಇರುವುದು. ಇವನ್ನೇ ಅವಲಂಬಿಸಿ ಎಲ್ಲಾ ಬಗೆಯ ಸಂಸಾರದ ಧರ್ಮಾಧರ್ಮಾನುಭವದಿಂದ ಹುಟ್ಟಿದ ವಾಸನೆಗಳು ಇರುತ್ತವೆ. ಆದರಿಂದ ಲಿಂಗಶರೀರವು ವಾಸನಾಶ್ರಯ. ಇದು ಸೂಕ್ಷ್ಮವಾದ್ದರಿಂದ ಸ್ಫಟಿಕದಂತೆ ಸ್ವಚ್ಛವಾಗಿರುವುದು.

ಇಂತಹ ಲಿಂಗ ಶರೀರವೇ ಸ್ವಪ್ನವೃತ್ತಿಗಳಿಗೂ ಆಶ್ರಯ. ಈ ಸ್ವಪ್ನ ಕಾಲದಲ್ಲಿ ಪಾಪಪುಣ್ಯಗಳಿಂದ ಪ್ರೇರಿತವಾದ ಚಿತ್ತದಲ್ಲಿರುವ ಬಣ್ಣಬಣ್ಣದ ನಾಡಿಗಳ ಸಂಪರ್ಕದಿಂದ ಸ್ವಾಪ್ನಿಕ ವಾದ ಸ್ತ್ರೀ,ರಥ,ಗಜ, ತುರಗ ಮುಂತಾದ

Sri Vidyabharathi Book Centre, Shimoga

CC-O. In Public Domain. Digitized by eGangotri

ಚಿತ್ರವಿಚಿತ್ರ ಮನೋವೃತ್ತಿಗಳು ಜನಿಸುತ್ತವೆ. ಈ ಸ್ವಪ್ನದಲ್ಲಿ ವಾಸನಾ-ನಿಮಿತ್ತವಾಗಿ ಶತ್ರುಗಳೋ, ಕಳ್ಳರೋ ಯಾರೋ ಬಂದು ನಮಗೆ ಹೊಡೆಯುತ್ತಿರುವಂತೆ ತೋರುತ್ತದೆ. ಹಾಗೂ ನಮ್ಮನ್ನು ವಶಪಡಿಸಿಕೊಂಡಂತೆಯೂ ತೋರುತ್ತದೆ, ಆದರಿಂದ ವಾಸನಾ ನಿಮಿತ್ತವಾದ ಆಂತಃಕರಣ ವೃತ್ತಿಗಳು ಭ್ರಾಂತಿಯೇ ಆಗಿ ತೋರುತ್ತವೆ. ಸ್ವಪ್ನದಲ್ಲಿ ದುಃಖ, ಭಯ ಮುಂತಾದವುಗಳನ್ನುಂಟುಮಾಡುತ್ತಿರುವ ಚಿತ್ತ ವೃತ್ತಿಗಳು ಭ್ರಮ ಮಾತ್ರ ವೆಂದು ಅರಿಯಬೇಕು. ವಾಸ್ತವವಾಗಿ ಹೊಡೆಯುವುದಿಲ್ಲ ಮತ್ತು ವಶಪಡಿಸಿ ಕೊಳ್ಳುವುದೂ ಇಲ್ಲ. ವಾಸ್ತವವಾಗಿದ್ದರೆ ಎಚ್ಚರವಾದ ಮೇಲೆ ಹೊಡೆದ ಗಾಯವು ಕಾಣಬೇಕಾಗುವುದು ಆದರಿಂದಲೇ **"ಅಥ ಯತ್ರೈನಂ ಘ್ನಂತೀವ ಜಿನಂತೀವ ಹಸ್ತೀವ ವಿಚ್ಛಾಯತಿ ಗರ್ತಮಿವ ಪತತಿ ಯದೇವಜಾಗ್ರದ್ಭಯಂ ಪಶ್ಯತಿ ತದತ್ರ ಅವಿದ್ಯಯಾ ಮನ್ಯತೇ ಅಥ ಯತ್ರದೇವ ಇವ ರಾಜೇವ"** ಎಂಬ ಶ್ರುತಿಯಲ್ಲಿ ಸರ್ವತ್ರ ಇವ ಶಬ್ದವನ್ನು ಪ್ರಯೋಗಿಸಿ ಹೊಡೆಯುತ್ತಿರುವಂತೆ ವಶಪಡಿಸಿಕೊಳ್ಳುವಂತೆ ಓಡಿಸಿಕೊಂಡು ಬಂದಂತೆ, ಹಳ್ಳಕ್ಕೆ ಬಿದ್ದಂತೆ ತನಗೆ ಕಾಣುವುದೇ ಹೊರತು, ಅದು ನಿಜವಲ್ಲ ಎಂಬ ಆರ್ಥವನ್ನು ಹೊರಪಡಿಸಿದ ಭಾಷ್ಯದಲ್ಲಿ–**"ಮೃಷೈವ ವಾಸನಾ ನಿಮಿತ್ತಃ ಪ್ರತ್ಯಯಃ ಅವಿದ್ಯಾಪ್ಯೋ ಜಾಯತೇ ಏನಂ ಸ್ವಪ್ನದೃಶಂ ಘ್ನಂತೀ ವೇತಿ .....ಕೇವಲಂ ತ್ವವಿದ್ಯಾ ವಾಸನೋದ್ಭವ ನಿಮಿತ್ತಂ ಭ್ರಾಂತಿಮಾತ್ರಂ..... ....ತಾದೃಶೀ ಹಿ ಅಸ್ಯ ಮೃಷಾವಾಸನೋದ್ಭವಶ್ಚ ಅಂತ್ಯಂತ ನಿಕೃಷ್ಟಾಽಧಮೋದ್ಭಾವಿತಾಂತಃ ಕರಣವೃತ್ಯಾಶ್ರಯಾ ದುಃಖರೂಪತ್ವಾತ್"** ಹೀಗೆಯೇ ಹೇಳಿದ್ದಾರೆ.

ಈ ವೃತ್ತಿಗಳೆಲ್ಲವೂ ಅವಿದ್ಯಾವೃತ್ತಿ. ಭ್ರಮೆ ಎಚ್ಚರವಾದ ನಂತರ ಎಲ್ಲವೂ ಇಲ್ಲ, ಸುಳ್ಳೆಂದು ನಮ್ಮ ಅನುಭವಕ್ಕೆ ಬರುತ್ತವೆ. ಜಾಗ್ರತ್ ಕಾಲದಲ್ಲಿ ಆನೆ, ಹುಲಿ, ಚಿರತೆ ಮುಂತಾದ ಭಯಂಕರ ಪ್ರಾಣಿಗಳನ್ನು ಯಾವುದನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡುವನೋ ಹಾಗೆಯೇ ಸ್ವಪ್ನದಲ್ಲಿ ನಿಜವಾದ ಆನೆ, ಹುಲಿ, ಮುಂತಾದುವು ಇಲ್ಲದೇ ಇದ್ದರೂ ಅವಿದ್ಯಾವಾಸನೆಯಿಂದ ಭ್ರಮೆಯಿಂದ ಕಲ್ಪಿತವಾದದ್ದನ್ನು ನೋಡುವನು ಭಯಪಡುವನು ಹಾಗೆಯೇ ರಥ, ಕುದುರೆ, ರಸ್ತೆ ಈ ಯಾವುದೂ ನಿಜವಾಗಿಲ್ಲದಿದ್ದರೂ ಕೇವಲ ಈ ಜನ್ಮದಲ್ಲಿ ಕಂಡಿರುವ ವಸ್ತುಗಳ ವಾಸನೆಗಳಿಂದ ಸ್ವಕರ್ಮದಿಂದ ಪ್ರೇರಿತನಾಗಿ ರಥ, ಕುದುರೆ, ರಸ್ತೆ ಮುಂತಾದ ರೀತಿಯಲ್ಲಿ ಚಿತ್ತ ವೃತ್ತಿಯು ಪರಿಣಾಮ ಹೊಂದಿದಾಗ ಅವುಗಳನ್ನು ಇದ್ದಂತೆ ಕಾಣುವನು ಧರ್ಮನಿಮಿತ್ತವಾಗಿ ನೋಡಿ ಸುಖಪಡುವನು. ಹೀಗೆಯೇ ಆನಂದ ಮೋದ ಪ್ರಮೋದಗಳೆಂಬ ಆನಂದಗಳನ್ನು ಪುತ್ರಲಾಭ ಧನಲಾಭಾದಿ ನಿಮಿತ್ತವಾಗಿ ಬರುವುದನ್ನು ಸಹ ವಾಸನಾ ನಿಮಿತ್ತವಾಗಿ ಸೃಷ್ಟಿಸಿದ್ದನ್ನೇ ಕಾಣುವನು. ಹೀಗೆಯೇ ಗಿರಿ, ನದಿ, ತಟಾಕ ಕೊಳ, ಬಾವಿ ಮುಂತಾದುವಗಳನ್ನು ವಾಸನಾವಿತ್ತವಾಗಿ ಸೃಷ್ಟಿಸಿ ಕಾಣುವನು. ಆದರೆ ಇವುಗಳಿಗೆ ಕರ್ತೃಯಾರೆಂದರೆ ಸ್ವಪ್ನ ಕಾಣುವ ಆತ್ಮನು 'ಸ ಹಿ ಕರ್ತಾ' ಎಂದು ಶ್ರುತಿಯು ಹೇಳಿದೆ. ಆತ್ಮನು ಕರ್ತೃ ಎಂದರೆ ವಾಸನಾಶ್ರಯವಾದ ಚಿತ್ತ ವೃತ್ತಿಗಳು ಉದ್ಭವಿಸುವುದಕ್ಕೆ ನಿಮಿತ್ತವಾದ ಧರ್ಮಾಧರ್ಮಗಳನ್ನು ಮಾಡುವವನು ಜೀವಾತ್ಮನೇ ಆದ್ದರಿಂದ ಗೌಣವಾಗಿ ಕರ್ತೃ. ಮುಖ್ಯ ಕರ್ತೃವಲ್ಲ. ಏಕೆಂದರೆ ತಾನೇ ಕರ್ತೃವಾಗಲು ಸಾಧನ ಸಾಮಗ್ರಿಗಳಿಲ್ಲ. ಕಾರಕಗಳಿಲ್ಲದೆ ಕರ್ತೃವಿನಲ್ಲಿ ಕ್ರಿಯೆಗಳು ಹುಟ್ಟುವುದಿಲ್ಲ. ಮಲಗಿದ ಜೀವಾತ್ಮನಿಗೆ ಹಸ್ತ ಪಾದಾದಿಗಳ ಸಂಬಂಧವು ಸಂಭವಿಸುವುದಿಲ್ಲ. ಸ್ವಪ್ನದಲ್ಲಿ ತನ್ನ ಸ್ಥೂಲ ದೇಹ ಇಂದ್ರಿಯಗಳಲ್ಲಿ ಆತ್ಮಾಭಿಮಾನವನ್ನೇ ಕಳೆದುಕೊಂಡು ಮಲಗುವನು. ಆವಾಗ ನಿಜವಾದ ಜಾಗ್ರದ್ದೆಶೆಯಲ್ಲಿ ಇದ್ದಂತೆ ಮುಖ್ಯ ಕರ್ತನಾಗುವುದಿಲ್ಲ ಅದರಿಂದಲೇ ಗೌಣಕರ್ತನೆಂದು ಹೇಳುವರು.

ಜಾಗೃದ್ದೆಶೆಯಲ್ಲೂ ಹಸ್ತಪಾದಾದಿ ಕಾರ್ಯಕರಣ ಸಂಘಾತವು ಆತ್ಮ ಜ್ಯೋತಿಯಿಂದ ಪ್ರಕಾಶಿತವಾಗಿ ರಥಾದಿ ವಾಸನಾಶ್ರಯವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತಃಕರಣವೃತ್ತಿಗಳಲ್ಲಿ ಉದ್ಭವಿಸಿದ ಕರ್ಮವು ಮುಖ್ಯಕಾರಣವಾದ್ದರಿಂದ ಮುಖ್ಯಕರ್ತನೆಂದು ಹೇಳುವುದಷ್ಟೇ. **'ಆತ್ಮನೈವಂ ಜ್ಯೋತಿಷಾऽऽಸ್ತೇ ಪಲ್ಯಯತೇ ಕರ್ಮ ಕುರುತೇ'** ತತ್ವತಃ ವಿಚಾರ ಮಾಡಿದರೆ ಸ್ವತಃ ಆತ್ಮನಿಗೆ ಸ್ವಯಂ ಜ್ಯೋತಿಸ್ವರೂಪನಾದ್ದರಿಂದ ಕರ್ತನೆನಿಸಿರುವನು. ಚೈತನ್ಯಜ್ಯೋತಿಯು ಅಂತಃಕರಣದ ಮೂಲಕ ಕಾರ್ಯಕರಣಗಳಲ್ಲಿ (ದೇಹ ಇಂದ್ರಿಯಗಳಲ್ಲಿ) ಪ್ರಕಾಶಿತವಾಗುವುದು. ಹೀಗೆ ಪ್ರಕಾಶಿತವಾದ ಕಾರ್ಯ ಕರಣಗಳು ತಮ್ಮ ತಮ್ಮ ಕರ್ಮಗಳಲ್ಲಿ ನಿರತವಾಗುತ್ತವೆ. ಈ ರೀತಿಗಳಿಂದ ಕರ್ತೃತ್ವವು ಪ್ರತ್ಯಗಾತ್ಮನಲ್ಲಿ ಆರೋಪಿತವಾಗಿ ತೋರುವುದಷ್ಟೆ. ಯಾವ ದಶೆಯಲ್ಲೂ ನಿಜವಾಗಿ ಕರ್ತೃತ್ವವಿಲ್ಲವೆಂದೇ ಅರಿಯಬೇಕು. **"ಧ್ಯಾಯತೀವ-ಲೇಲಾಯತೀವ"** ಎಂದು ಶ್ರುತಿಯು. ಇವೆಲ್ಲವೂ ಅವಿದ್ಯೆಯು ಹೆಚ್ಚಿ ಜಾಗ ಆಗುವ ಭ್ರಮೆ.

ವಿದ್ಯೆಯ ಸ್ವರೂಪ : ಶ್ರುತಿಯು ಸ್ವಪ್ನದಲ್ಲೆ ಸರ್ವಾತ್ಮಭಾವ ಸಾಕ್ಷಾತ್ಕಾರವಾಗುವಲ್ಲಿ ವಿದ್ಯೆಯ ಉತ್ಕರ್ಷದ ಪ್ರಭಾವದಿಂದ ಸರ್ವದುಃಖ ನಿರ್ಮುಕ್ತವಾದ ಪರಬ್ರಹ್ಮಾನಂದ ಸ್ವರೂಪ ಲಾಭವಾಗುವುದು. ಹೀಗೆಂದು ಹೇಳಿದೆ, ಆದರೆ ಈ ವಿದ್ಯೆಯು ಜಾಗರಾವಸ್ಥೆಯಲ್ಲೇ ಸರ್ವರಿಗೂ ಆಗಬಹುದು ಸರ್ವಾತ್ಮಭಾವ ಚಿಂತನೆಯು ವಾಸನಾಬಲದಿಂದ ಸ್ವಪ್ನದಲ್ಲೂ ಆಗಬಹುದೆಂದು ಶ್ರುತಿ ಮಾತೆಯು ಹೇಳಿರುವುದಷ್ಟೆ–ಬೃ-ಶ್ರುತಿ-

ಮನುಷ್ಯನ ಜನ್ಮದ ಬಗೆ (ಅದು ದುರ್ಲಭ)

ಭೌತಿಕವಾದ ಈ ಪ್ರಪಂಚವು ವಿರಾಟ್‌ಪುರುಷನಿಂದ ಸೃಷ್ಟಿಯಾದ ನಂತರವೇ ಬ್ರಹ್ಮಾಂಡ ಶರೀರದಲ್ಲಿ ಮನುಷ್ಯನು ಹುಟ್ಟುವುದಕ್ಕೂ ಆಯಾಯಜೀವ

Sri Vidyabharathi Book Centre, Sringeri

CC-O. In Public Domain. Digitized by eGangotri

ಜಂತುಗಳಿಗೂ ಪ್ರತ್ಯೇಕ ಪ್ರತ್ಯೇಕ ಪಂಚಭೂತ ಸೂಕ್ಷ್ಮಗಳೂ ಇರುತ್ತವೆ. ಇವು ಮೋಕ್ಷ ಪರ್ಯಂತರ ಸ್ಥಾಯಿ, **"ತದಾಪೀತೇಃ ಸಂಸಾರವ್ಯಪದೇಶಾತ್"** ಬ್ರಹ್ಮಸೂತ್ರವು ಹೀಗೆಂದು ಹೇಳುವುದು, ಸೂಕ್ಷ್ಮಭೂತಗಳೂ ಮತ್ತು ಸೂಕ್ಷ್ಮಶರೀರವೂ ಇದ್ದು ಇದರ ಸಹಾಯದಿಂದಲೇ ಆತ್ಮನು ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ಹೊಂದುವನು. ಹಳೆಯ ಬಟ್ಟೆಯನ್ನು ಬಿಟ್ಟು ಹೊಸ ಬಟ್ಟೆಯನ್ನು ನಾವು ಧರಿಸುವಂತೆ ಹೊಸ ಹೊಸ ಶರೀರವನ್ನು ತೆಗೆದುಕೊಳ್ಳುವನು, **(ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ..... ॥ಗೀ-೨)** ಪಾತಾ ಪಿತೃಗಳು ತಿನ್ನುವ ಆಹಾರದಲ್ಲಿ ಈ ಜೀವಾತ್ಮನು ಸೂಕ್ಷ್ಮ ಶರೀರ ಮತ್ತು ಭೂತ ಸೂಕ್ಷ್ಮಗಳೊಂದಿಗೆ ಬಂದು ಸೇರುವನು. ಸ್ವರ್ಗಲೋಕದಿಂದ ಪುಣ್ಯವು ಕ್ಷೀಣವಾದೊಡನೆ ಮತ್ತೊಂದು ಪುಣ್ಯ ಪಾಪಗಳನ್ನು ಅನುಭವಿಸುವುದಕ್ಕೆ ಇಲ್ಲಿಗೆ ಬರುವನು. ಇಲ್ಲಿ ಪುಣ್ಯ ಮಾಡಿದವರು ಸ್ವರ್ಗ ಲೋಕಕ್ಕೆ ಅಥವಾ ಚಂದ್ರ ಲೋಕಕ್ಕೆ ಹೋದವರು ಬರುವಾಗ ಆ ದೇವ ಶರೀರವನ್ನು ಬಿಟ್ಟು ಹೇಗೆ ಮೇಲಕ್ಕೆ ಹೋಗಿದ್ದರೋ ಹೆಚ್ಚು ಕಡಿಮೆ ಅದೇ ಮಾರ್ಗದಲ್ಲಿ ಕೆಳಕ್ಕೆ ಇಳಿಯುವರು. ಆಕಾಶದಲ್ಲಿ ಮೊದಲು ಇಳಿದು ಅನಂತರ ವಾಯುವಿನೊಂದಿಗೆ ಬೆರೆತು, ಅನಂತರ ಒಂದು ಬಗೆಯ ಹೊಗೆಯೊಂದಿಗೆ ಸೇರಿ, ಅನಂತರ ಮೋಡದಲ್ಲಿ ಸೇರಿ ಮಳೆಯಾಗಿ ಮಳೆಯೊಂದಿಗೆ ಭೂಮಿಯಲ್ಲಿ ಬಂದು ಬೀಳುವರು, ಇಲ್ಲಿಯ ಕ್ಷೇತ್ರಗಳಲ್ಲಿ ಭತ್ತ, ಗೋಧಿ, ರಾಗಿ, ಜೋಳ ಮುಂತಾದ ಸಸ್ಯಗಳೊಂದಿಗೆ ಸೇರುವರು, ಸಸಿ ನೀರು ಕುಡಿಯುವಾಗ ಈ ಜೀವರ ಸೂಕ್ಷ್ಮಶರೀರದೊಂದಿಗೆ ಕುಡಿಯುವುವು. ಅನಂತರ ಸಸಿಗಳು ಬೆಳೆದು ನಿಲ್ಲುವುವು. ಬೆಳೆ ಬಂದ ನಂತರ ಭತ್ತ, ಗೋಧಿ, ರಾಗಿ, ಜೋಳ, ಉದ್ದು ಮುಂತಾದ ಆಹಾರದಲ್ಲಿ ಸೇರಿಕೊಂಡಿರುವರು, ಅವುಗಳನ್ನು ತಿನ್ನುವ ತರುಣ ತರುಣಿಯರ ಹೊಟ್ಟೆಯಲ್ಲಿ ಬಂದು ಸೇರುವರು. ಆಹಾರದಲ್ಲಿ ಬಂದು ಸೇರಿದರೂ ಬ್ರಹ್ಮಚಾರಿಗಳಲ್ಲಿ ಅಥವಾ ವಿರಕ್ತರಲ್ಲಿ ಬಂದು ಸೇರಿದರೂ ಕ್ಷಯಿಸಿ ಹೋಗಿ ಹುಟ್ಟುವುದಿಲ್ಲ, ಅರ್ಹರಾದ ತರುಣ ತರುಣಿಯರಲ್ಲಿ ಸೇರಿದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮನುಷ್ಯನಾಗಿ ಹುಟ್ಟಿಬಹುದು.

ಜಂತೂನಾಂ ನರಜನ್ಮ ದುರ್ಲಭಮ್

ಇಲ್ಲಿ ಒಂದು ಅತ್ಯಂತ ಗಮನಿಸಬೇಕಾದ ಅಂತವಿದೆ. ಮೇಲಿನಿಂದ ಮಳೆಯ ಜೊತೆಯಲ್ಲಿ ಬಿದ್ದ ಜೀವರು ಪರ್ವತ ಪ್ರದೇಶ ದುರ್ಗಪ್ರದೇಶ ನದೀ ಸಮುದ್ರ, ಅರಣ್ಯ, ಮರುಭೂಮಿ ಮುಂತಾವ ಸ್ಥಳಗಳಲ್ಲಿ ಬೀಳ ಬಹುದು.

ವೇದಾಂತ ಸಿದ್ಧಾಂತಗಳಲ್ಲಿ ಇದೇ ಹೊಸದಾಗಿ ಬಂದ ಮನುಷ್ಯ ಜನ್ಮ ವೆಂತಿಲ್ಲ. ಇದರ ಹಿಂದೆಯೂ ಅಂದರೆ ಪ್ರಳಯಕ್ಕೆ ಮುಂಚೆಯಾದ ಕಲ್ಪದಲ್ಲೂ ಮನುಷ್ಯರಾಗಿ ಹುಟ್ಟಿದವರು ಅನೇಕರು ಇದ್ದರು **"ಧಾತಾ ಯಥಾ ಪೂರ್ವಮಕಲ್ಪಯತ್"** ಎಂದು ಹಿಂದಿನ ಕಲ್ಪದಲ್ಲಿ ಸೃಷ್ಟಿಯು ಯಾವ ಕ್ರಮ ಯಾವ ನಿಯಮಗಳಿಂದ ಆಗಿದ್ದಿತೋ ಅದೇ ಕ್ರಮ ಅದೇ ನಿಯಮವನ್ನು ಅನುಸರಿಸಿ ಈಗಿನ ಸೃಷ್ಟಿಯೂ ಈ ಕಲ್ಪದಲ್ಲೂ ಆಗಿದೆಯೆಂದೇ ತೀರ್ಮಾನ ವಾಗಿದೆ. ಆದಿ ಸೃಷ್ಟಿಯಲ್ಲಿ ಹುಟ್ಟಿದ ಪಶುವರು ಹಿಂದಿನಂತೆ **'ದ್ವಿಪಾತ್'** ಎರಡು ಕಾಲಿನವರೇ ಆಗಿರುವರು. ಪಶುವರ್ಗಗಳಲ್ಲಿ **'ಚತುಷ್ಪಾತ್'** ನಾಲ್ಕು ಕಾಲಿನ ಪಶುಗಳೇ ಸೃಷ್ಟಿಯಾಗುವುವು. **"ದ್ವಿಪಾದೋ ಯೇ ಚತುಷ್ಪದಃ"** ಇತರ ವಿಜ್ಞಾನಿಗಳು ಹೇಳುವಂತೆ ಇದೇ ಮೊದಲೆಂದು ಹೇಳು ವುದಿಲ್ಲ. ಸಂಸಾರ ಪ್ರಪಂಚಕ್ಕೆ ಕೊನೆ ಮೊದಲು ಎಂಬುವುದಿಲ್ಲ. **'ನಾಂತೋ ನಚಾದಿಃ ನ ಚ ಸಂಪ್ರತಿಷ್ಠಾ'** ಎಂಬುದಾಗಿ ಸಂಸಾರ ವೃಕ್ಷವು ಅನಾದಿ ಅನಂತವಂತಲೇ ಭಗವಂತನು ಉಪದೇಶಿಸಿರುವನು. ಚತುರ್ದಶಮನ್ವಂತರಗಳು (೧೪) ಈ ಕಲ್ಪದಲ್ಲಿ ವೈವಸ್ವತ ಮನು ಪ್ರಕೃತ. ಆದಿಯಲ್ಲಿ ಹುಟ್ಟಿದ ಪುರುಷನು ಮನುವಿನಿಂದಲೇ ಬ್ರಹ್ಮನ ಮೂಲಕ ಸೃಷ್ಟಿಯಾದನು. ಪುರುಷನ

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಟ್ಟಿಗೆ ಪಾಪ ಪುಣ್ಯಗಳೇ ಮೂಲ ಕಾರಣವು. **"ಪುಣ್ಯೋ ವೈ ಪುಣ್ಯೇನ ಭವತಿ, ಪಾಪಃ ಪಾಪೇನ ಉಭಾಭ್ಯಾಂ ಮನುಷ್ಯ ಲೋಕಮ್"** ಎಂಬ ಪ್ರಮಾಣದಂತೆ ಅರ್ಧಪುಣ್ಯ, ಅರ್ಧಪಾಪಗಳು ಸಂಮಿಶ್ರವಾಗಿ ಅಂಕುರಿಸಿದಾಗ ಮನುಷ್ಯನಾಗಿ ಹುಟ್ಟುವನು. ಪ್ರತಿಯೊಂದು ಜೀವಜಂತುವಿಗೂ ಅಜ್ಞಾನ, ಕಾಮ, ಕರ್ಮ, ಪೂರ್ವಜನ್ಮದ ಸುಖದುಃಖಾನುಭವ, ಮಾಡಿದ ಸಂಸ್ಕಾರಗಳು ಇದ್ದು ತತ್ವಜ್ಞಾನವು ಹುಟ್ಟುವ ಪರ್ಯಂತರ ಜೀವವನ್ನು ವಿದ್ಯಾವಿದ್ಯೆಗಳು ಹಿಂಬಾಲಿಸುವುವು. **"ತಂ ವಿದ್ಯಾ ಕರ್ಮಣೀ ಸಮನ್ವಾರಭೇತೇ ಪೂರ್ವಪ್ರಜ್ಞಾ ಚ"** ಅರ್ಥ ; ಶರೀರವನ್ನು ಬಿಟ್ಟು ಏಳುವ ಜೀವನನ್ನು (ಪ್ರಾನವನನ್ನು) ತಾನು ಇಹದಲ್ಲಿ ಸಂಪಾದಿಸಿದ ವಿದ್ಯೆ (ಉಪಾಸನೆ) ಉತ್ತಮಾಧಮ ಉಪಾಸನೆಗಳೂ ಪಾಪ ಪುಣ್ಯಗಳೂ, ಅಭ್ಯಾಸ ಮಾಡಿದ ಪೂರ್ವಾನುಭವ ಕಲೆಗಳ ಅನುಭವವೆಂಬ ಪೂರ್ವಪ್ರಜ್ಞೆ(ಗೀತ, ನೃತ್ಯಾದಿಗಳ) ವಾಸನೆ ಹಿಂಬಾಲಿಸುವುವು. ಜ್ಞಾನವು ಬಾರದೆ ಇದ್ದಕಾರಣ ಒಂದೇ ಜನ್ಮದಲ್ಲಿ ಪೂರ್ವದ ಎಲ್ಲಾಕರ್ಮಗಳ ಅನುಭವವಾಗಿರುವುದಿಲ್ಲ. ಅವರಿಂದ ಅನುಭವವಾಗಿದ್ದು. ಉಳಿದ ಕರ್ಮಗಳು ಹಿಂಬಾಲಿಸುವುವು. ಅದರಿಂದ ಜನ್ಮವನ್ನು ಎತ್ತುತ್ತಲೇ ಇರುವುವು, ಜೀವಾತ್ಮದ ಸ್ಥೂಲ ಶರೀರದ ಸೃಷ್ಟಿಗೆ ಅತಿ ಸೂಕ್ಷ್ಮವಾದ ಪಂಚಭೂತ ಸೂಕ್ಷ್ಮಗಳು ಪ್ರತ್ಯೇಕ ಪ್ರತ್ಯೇಕವಾಗಿ ಇರುತ್ತದೆ. ಅದರಿಂದ ಎಲ್ಲಿ ಬೇಕಾದರೂ ಕರ್ಮಾನುಸಾರ ಹುಟ್ಟುತ್ತವೆ, ಪುಣ್ಯಗಳು ಹೆಚ್ಚಾಗಿದ್ದರೆ ಸ್ವರ್ಗಲೋಕದಲ್ಲಿ ಹುಟ್ಟುವುವು. ಪಾಪವು ಹೆಚ್ಚಾಗಿದ್ದರೆ ನರಕದಲ್ಲಿ ಹುಟ್ಟುವುವು. ಭೂತ ಪ್ರೇತ ಪಿಶಾಚಿಗಳಾಗಿಯೂ ಇಲ್ಲಿ ಪಶುಪಕ್ಷ್ಯಾದಿರೂಪದಲ್ಲೂ ಹುಟ್ಟುವುವು. ಪಾಪ ಪುಣ್ಯಗಳು ಸಮ ಸಮವಾಗಿ ಸೇರಿದರೆ. ಜೀವರು ಮನುಷ್ಯರಾಗಿ ಹುಟ್ಟುವರು.

ಹಿಂದೆ ಹೇಳಿದ ರೀತಿಯಲ್ಲೇ ಅಂದರೆ ಸ್ವರ್ಗದಿಂದಲೇ ಎಲ್ಲಾಜೀವರು ಇಳಿದು ಆಕಾಶ ಭೂಮಾದಿಗಳೊಂದಿಗೆ ಸೇರಿ ಮಳೆಯೊಂದಿಗೆ ಬಿದ್ದು ಹುಟ್ಟುತ್ತಾರೆಂದು ಹೇಳಿದ ನಿಯಮವು ನರಕದಿಂದ ಬರ

CC-O. In Public Domain. Digitized by eGangotri

ತಕ್ಕವರಿಗೆ ಇಲ್ಲ. ಕೇವಲ ಮಳೆಯಮೂಲಕ ಸಸಿಗಳಲ್ಲೂ ಬಂದು ಸೇರುವರು ಹಾಗೂ ಸ್ವರ್ಗಕ್ಕೂ ನರಕಕ್ಕೂ ಹೋಗದೆ ಇಲ್ಲಿಯೇ ಹುಟ್ಟುವ ಮಾನವರಿಗೂ ಈ ನಿಯಮವಿಲ್ಲ. ಮತ್ತೇನೆಂದರೆ ಸೂಕ್ಷ್ಮಪಂಚಭೂತಗಳು ಎಲ್ಲೆಲ್ಲಿಯೂ ಇರುವುದರಿಂದ ಆಯಾಯ ಜೀವಜಂತುಗಳು ಆಹಾರದ ಮೂಲಕ ಪ್ರಾಣಿಗಳಲ್ಲೂ ಮನುಷ್ಯರಲ್ಲೂ ಸೇರುವರು. **ಸ್ವರ್ಗಾದ್ವಾ ನರಕಾದ್ವಾಽಯಂ ವೃಷ್ಟಿದ್ವಾರಾನ್ನಸಂಸ್ಥಿತಃ** ಎಂದು (ಅನುಭೂತಿ ಪ್ರಕಾಶ.) ಮಳೆಯ ಮೂಲಕವಾಗಿ ಭೂಮಿಯಲ್ಲಿ ಬಂದು ಸೇರಿದ ಮೇಲೆ ಭತ್ತ, ಗೋಧಿ, ಜೋಳ, ಪರಂತಾದ ಧಾನ್ಯಗಳಲ್ಲಿ ಬೆರೆಯಲು ಶಬ್ದ ಸ್ಪರ್ಶ ರಸ ರೂಪ ಗಂಧಗಳಿರುವಂತೆ ಔಷಧಿ ವನಸ್ಪತಿಗಳಾಗಿ ಕ್ರಮವಾಗಿ ಹುಟ್ಟುವುವು. ಈ ಮೇಲೆ ಹೇಳಿದ ಆಹಾರಗಳನ್ನು ಸ್ತ್ರೀಪುರುಷರು ನಾನಾರೂಪದಲ್ಲಿ ಸೇವಿಸಿದಾಗ ತಾರುಣ್ಯದಲ್ಲಿ ತಿಂದ ಆಹಾರ-ಅನ್ನದಿಂದ ರಸವು ಹುಟ್ಟುವುದು. ರಸದಿಂದ ರಕ್ತವೂ, ರಕ್ತದಿಂದ ಮಾಂಸವೂ ಮಾಂಸದಿಂದ ಮೇದಸ್ಸೂ (ಕೊಬ್ಬು) ಮೇದಸ್ಸಿನಿಂದ ಎಲುಬುಗಳೂ, ಎಲುಬುಗಳಿಂದ ಮಜ್ಜೆಯೂ ಮಜ್ಜೆಯಿಂದ ಶುಕ್ರವೆಂಬ ಪುರುಷರೇತಸ್ಸೂ (ವೀರ್ಯವೂ) ಹುಟ್ಟಿ ಈ ರೇತಸ್ಸೂ ಸ್ತ್ರೀಯ ರಕ್ತದೊಂದಿಗೆ ಮಿಳಿತವಾಗಿ ಅಲ್ಲಿಂದ ಮನುಷ್ಯನಾಗುವುದು. ಹೀಗೆಯೇ ಪಶುವರ್ಗದಲ್ಲೂ ಹುಟ್ಟುವ ಕ್ರಮವಿದೆ. ಆತ್ಮತತ್ವದ ಅಜ್ಞಾನದ ಬಲೆಗೆ ಸಿಕ್ಕಿಕೊಂಡ ಪುರುಷನು ಪ್ರಪಂಚವ್ಯಾಮೋಹದಿಂದ ಉಂಟಾದ ಕಾಮದ ಗಾಣದಲ್ಲಿ ಸಿಕ್ಕಿಹಾಕಿಕೊಂಡು ಕಾಮಧನುಸ್ಸಿನ ಮೂಲಕ ಬಿಟ್ಟ ರಾಗವೆಂಬ ವಿಷಲಿಪ್ತವಾದ ವಿಷಯಬಾಣದಿಂದ ಹೊಡೆಯಲ್ಪಟ್ಟವನಾಗಿ ಜನ್ಮಾಂತರ ಕರ್ಮದಿಂದ ಭೂತಾವೇಶವಾದಂತೆ ಸ್ವಾತಂತ್ರ್ಯ ಕಳೆದುಕೊಂಡು ಆದರಿಂದ ಪ್ರೇರಿತನಾಗಿ ಪತಂಗವು ಬೆಂಕಿಯಲ್ಲಿ ಹಣ್ಣಿನ ಆಸೆಯಿಂದ ಬೀಳುವಂತೆ ಸ್ತ್ರೀಯೆಂಬ ಬೆಂಕಿಯಲ್ಲಿ ಬೀಳುವನು. ಪೂರ್ವಾಕರ್ಮಾನುಸಾರವಾಗಿ ದೇಹದಲ್ಲಿರುವ ಶುಕ್ರವು (ವೀರ್ಯವು) ಸರ್ವತೋಮುಖವಾಗಿ ಆಕರ್ಷಿಸಲ್ಪಟ್ಟು ವೀರ್ಯವಾಹಿಯಾದ ನಾಡಿಯ ಮೂಲಕ ಆದು ಸ್ತ್ರೀಯೋನಿಯಲ್ಲಿ ಬಿಡಲ್ಪಡುವುದು. ಇದೂ ಸಹಾ ಪೂರ್ವಜನ್ಮದ ಕರ್ಮದ ಪರಿಪಾಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಂದಲೇ. ಹೀಗೆಂದು ಸುರೇಶ್ವರರು ವರ್ಣಿಸಿರುವರು. ಸ್ತ್ರೀಯರ ಗರ್ಭದಲ್ಲಿ ಕಲಲ, ಬುಬ್ಬುದ, ಪೇಶೀ (ಮಾಂಸ) ಘನವೆಂದಾಗಿ ನಂತರ ಅಂಗಗಳಾಗಿಯೂ ಅಂಗದಿಂದ ಕೇಶರೋಮಗಳೂ ಹುಟ್ಟುತ್ತವೆ. ಇವು ಹಿಂದಿನ ಜನ್ಮದಲ್ಲಿವ್ಯ ಪಂಚಭೂತ ಸೂಕ್ಷ್ಮಗಳೇ. ಆದೇ ಇಂದ್ರಿಯಗಳು ಪರಿಣಾಮವನ್ನು ಹೊಂದುವವೆಂದು ನಿರ್ಣಯವು. ನದೀ ಸಮುದ್ರಗಳಲ್ಲಿ ಬಿದ್ದಾಗ ಮೀನು ಮೊಸಳೆ ಮುಂತಾದ ಪ್ರಾಣಿಗಳ ಹೊಟ್ಟೆಯಲ್ಲೂ ಸೇರಬಹುದು, ಸಮುದ್ರದ ನೀರು ಮತ್ತೆ ಸೂರ್ಯಕಿರಣಗಳ ಮೂಲಕ ಪುನಃ ಮೋಡ ಗಳಿಂದ ಸೆಳೆಯಲ್ಪಟ್ಟಾಗ ಅದರೊಂದಿಗೂ ಪುನಃ ಕೆಳಕ್ಕೆ ಮಳೆಯೊಂದಿಗೆ ಬೀಳಬಹುದು, ಕದಾಚಿತ್ ಪಶುಗಳು, ಮೃಗಗಳೂ, ಈ ನೀರನ್ನು ಕುಡಿಯ ಬಹುದು, ಅಥವಾ ಮರ, ಗಿಡ ಮೊದಲಾದ ಸ್ಥಾವರಗಳಲ್ಲಿ ಸೇರ ಬಹುದು. ಇದೆಲ್ಲವನ್ನು ತಪ್ಪಿಸಿಕೊಂಡು ಆಹಾರದ ಮೂಲಕ ಮನುಷ್ಯ ಶರೀರದೊಳಗೆ ಬಂದು ಸೇರುವುದು. ತುಂಬಾ ವಿಳಂಬವೂ ಕಷ್ಟವೂ ಆಗುವುದು. ಅಸಮರ್ಥವಾದ ಜೀವರು ಸ್ವೇಚ್ಛಾನುಸಾರ ಮನುಷ್ಯರಲ್ಲಿ ಬಂದು ಸೇರಿ ಹುಟ್ಟಲು ಸಾಧ್ಯವಿಲ್ಲ. ಈಶ್ವರಾನುಗ್ರಹದಿಂದ ಪುಣ್ಯಾನುಸಾರ ವಾಗಿ ಮನುಷ್ಯಶರೀರದಲ್ಲಿ ಬಂದು ಸೇರಬೇಕು. ಕದಾಚಿತ್ ಮನುಷ್ಯರಲ್ಲಿ ತರುಣ ತರುಣಿಯರಲ್ಲಿ ಹುಟ್ಟುವರು, ಈ ಕಾರಣದಿಂದಲೇ ಮನುಷ್ಯ ಜನ್ಮವು ದುರ್ಲಭವೆಂದು ಪ್ರಶಸ್ತವೆಂದೂ ಆಚಾರ್ಯರು ಹೇಳಿರುವರು. **"ಜಂತೂನಾಂ ನರಜನ್ಮದುರ್ಲಭತಮ್"** ಎಂದು. (ವಿವೇಕ ಚೂಡಾಮಣಿ) ಸಂನ್ಯಾಸಿಗಳು ಊರ್ಧ್ವರೇತಸ್ಸುಳ್ಳವರು, ಬಾಲಕರೂ ಪುಂಸ್ತ್ವವಿಲ್ಲದ ನಪುಂಸಕರು, ಬಂಜೆಯರೂ ತಿಂದ ಆಹಾರದಲ್ಲಿ ಈ ಜೀವರು ಬಂದು ಸೇರಿದರೂ ವ್ಯರ್ಥವೇ ಆಗಿ ಹೊರಕ್ಕೆ ಬರುವರು. ಸ್ಥಾವರಗಳಲ್ಲಿ ಸೇರಿದ್ದು ವ್ಯರ್ಥವೇ ಆಗುವುದು. ಆದ್ದರಿಂದ ಚಂದ್ರಲೋಕಕ್ಕೆ (ಸ್ವರ್ಗಕ್ಕೆ) ಇಲ್ಲಿಂದ ಪುಣ್ಯ ಕರ್ಮಾನುಸಾರ ಹೋಗಿದ್ದರೂ ಪುಣ್ಯವು ಭೋಗದಿಂದ ಕ್ಷಯಿಸಿದ ಮೇಲೆ ಅವಶಿಷ್ಟ ಪುಣ್ಯಾನುಸಾರವಾಗಿಯೇ ಇಲ್ಲಿಯೇ ಹುಟ್ಟಬೇಕು. **'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ'** ಎಂದಂತೆ ಇದು ಈಶ್ವರಾಧೀನ.

Sri Vidyabharathi Book Centre, Sringeri

CC-O. In Public Domain. Digitized by eGangotri

'ರಮಣೀಯಚರಣಾಃ ರಮಣೀಯಾಂ ಯೋನಿಮಾಪದ್ಯೇರನ್ ಬ್ರಾಹ್ಮಣ ಯೋನಿಂ ವಾ' ಇತ್ಯಾದಿ ಶ್ರುತಿ, ಮತ್ತು ಯಾವ ಪ್ರಾಣಿಯು ತನ್ನ ಆಹಾರವನ್ನು ಸೇವಿಸುವಮೋ ಸೇವಿಸಿ ತಾರುಣ್ಯದಲ್ಲಿ ತನ್ನ ಪ್ರೀತ್ಯಾಸ್ಪದವಾದ ಹೆಣ್ಣಿನ ಮೇಲೆ ರೇತಸ್ಸನ್ನು ತನ್ನ ಆಕಾರವನ್ನೇ ಭಾವಿಸುತ್ತಾ ಬಿಡುವುದೋ, ಆ ಪ್ರಾಣಿಯು ಅದೇ ಆಕಾರವನ್ನು ಹೊಂದುವದು. ಮನುಷ್ಯನಿಂದ ಮನುಷ್ಯನೂ ಗೋವಿನಿಂದ ಗೋವು, ಕುದುರೆಯಿಂದ ಕುದುರೆಯೂ ಹುಟ್ಟುವದು. ಎಂದಿಗೂ ಜಾತಿ ಬದಲಾಗದು.

"ಯೋ ಯೋ ಹ್ಯನ್ನೆಮತ್ತಿ ಯೋ ರೇತಃ ಸಿಂಚತಿ ತದ್ಭೂಯ ಏವ ಭವತಿ" ಎಂಬುದೇ ಇದಕ್ಕೆ ಪ್ರಮಾಣ ವಚನವು. ಇದು ಅನುಭವಾನುಸಾರಿವಚನವು.

ಮತ್ತೊಂದು ವಿಶೇಷವು ಗಮನೀಯ

ಸಾಮಾನ್ಯವಾಗಿ ಸ್ತ್ರೀ ಪುರುಷರ, ಹೆಣ್ಣುಗಂಡುಗಳ ಸಮಾವೇಶದಿಂದ ಹುಟ್ಟುವರೆಂಬುದು ನಿಯಮವು ಇದ್ದರೂ ಇದಕ್ಕೆ ಅಪವಾದವೂ ಇದೆ. ದ್ರೌಪದಿಯು ಅಗ್ನಿಕುಂಡದಿಂದ ಹುಟ್ಟಿರುವುದೂ ಮತ್ತು ಸೀತಾದೇವಿಯು ಯಜ್ಞಶಾಲೆಯಲ್ಲಿ ಊಳುವಾಗ ಹುಟ್ಟಿದಳೆಂದೂ ಪ್ರಸಿದ್ಧವಾಗಿದೆ. ಇವರು ಅಯೋನಿಜರು. ದ್ರೋಣರು ಸ್ತ್ರೀಸಂಪರ್ಕವಾಗಿ ಸ್ತ್ರೀಯಲ್ಲಿ ಹುಟ್ಟಿಲ್ಲ, ಶುಕರೂ ಹುಟ್ಟಿಲ್ಲ. ಹಾಗಾದರೆ ಹೇಗೆ ಹುಟ್ಟಿದ್ದರೆಂದರೆ – ಎಲ್ಲೆಲ್ಲಿಯೂ ಪಂಚಭೂತ ಸೂಕ್ಷ್ಮಗಳೂ ಇದ್ದೇ ಇರುತ್ತವೆಯಾದ್ದರಿಂದ ಕರ್ಮಾನುಸಾರ ಈಶ್ವರ ಸಂಕಲ್ಪದಂತೆ ಹುಟ್ಟಬಹುದು. ಶರೀರಕ್ಕೆ ಬೇಕಾದ ಉಪಾದಾನ ಕಾರಣವಾದ ಪಂಚಭೂತಗಳೂ ಇಲ್ಲದೇ ಹುಟ್ಟುವ ಸಂಭವವಿಲ್ಲ. ದ್ರೋಣನಿಗೆ ಮತ್ತು ಶುಕರಿಗೆ ಸ್ತ್ರೀಯಗರ್ಭದಲ್ಲಿ ಪ್ರವೇಶವಾಗದಿದ್ದರೂ ಪುರುಷನ ವೀರ್ಯದಿಂದ ಹುಟ್ಟಲು ಅವಕಾಶವಾಯಿತು. ಋಷ್ಯಶೃಂಗರು ಮನುಷ್ಯರ ಹೊಟ್ಟೆಯಲ್ಲಿ ಹುಟ್ಟಿಲ್ಲ. ಅವರು ಜಿಂಕೆಯ ಹೊಟ್ಟೆಯಲ್ಲಿ ಹುಟ್ಟಿದರು.

CC-O. In Public Domain. Digitized by eGangotri

(ಜಿಂಕೆಯು ಹೊಟ್ಟೆಯಲ್ಲಿ ಜಿಂಕೆಯೇ ಹುಟ್ಟುವುದೆಂಬ ನಿಯಮ ತಪ್ಪಿತು) ಆದರೆ ಇಲ್ಲಿ ವಿಭಂಡಕ ಮುನಿಯ ರೇತಸ್ಸು ಉಪಾದಾನಕಾರಣ ಬೀಜವು ಇದೆ. ಕಲ್ಲು ಬಂಡೆಯೊಳಗೆ ಕಪ್ಪೆಯು ಹುಟ್ಟುವುದನ್ನು ಕೇಳಿದ್ದೇವೆ. ಹೇಗೆ? ಅಂದರೆ–ಕಪ್ಪೆಯು ಹುಟ್ಟುವುದಕ್ಕೆ ಬೇಕಾದ ಸೂಕ್ಷ್ಮ ಭೂತಗಳು ಒಳಗೆ ಸೇರಿಕೊಂಡಿದ್ದು ಕಲ್ಲು ಬೆಳೆಯುತ್ತಾ ಬಂದ ಹಾಗೂ ಒಳಗೆ ಬೆಳೆದಿದೆ. ಮನುಷ್ಯರು ಅಯೋನಿಜರು ಎಂದು ಹೇಳಿದ ಉದಾಹರಣೆ ಬಹಳ ಅಲ್ಪ. ಭೂಮಿಯಲ್ಲಿ ಬೇಸಿಗೆಯಲ್ಲಿ ಸೆವೆ ಜಾಸ್ತಿಯಾದರೆ ಆ ಬೆವರಿನಿಂದ ಹೇನುಗಳೂ ಶೀರುಗಳೂ, ಹುಟ್ಟುವುವು. ಸೊಳ್ಳೆಗಳು ಮಳೆಗಾಲದಲ್ಲಿ ಹುಟ್ಟುವುವು. ಇವೂ ಸಹ ಅಯೋನಿಜಗಳು ಇದೊಂದು ದೈವನಿಯಾಮಕವೆಂದು ತಿಳಿಯಬೇಕು. ಪ್ರಾಣಿವರ್ಗವು ನಾಲ್ಕು ಬಗೆ. ಜರಾಯುಜ, ಅಂಡಜ, ಉದ್ಭಿಜ್ಜ, ಸ್ವೇದಜ ಎಂದು. ಗರ್ಭದ ಜೀಲದಲ್ಲಿ ಹುಟ್ಟಿ ಈಚೆಗೆ ಬರುವರು ಮನುಷ್ಯರು, ಪಶುಗಳು, ಇವು ಜರಾಯುಜ. ಪಕ್ಷಿಗಳು ಅಂಡಜ–ಮೊಟ್ಟೆಯಿಂದ ಒಡೆದು ಬರುವುವು. ಭೂಮಿಯನ್ನು ಭೇದಿಸಿಕೊಂಡು ಬರುವುವು. ಗಿಡಮರಗಳು ಸ್ಥಾವರ, ಸ್ವೇದಜ, ಹೇನು ಮೊದಲಾದುವು ಈ ರೀತಿಯಾಗಿ ಭೂಮಿಯಲ್ಲಿ ಹುಳ ಹುಪ್ಪಟೆಗಳು ಹುಟ್ಟುವುವು. ಎಲ್ಲಾ ಶರೀರಗಳಿಗೂ ಭೂತ ಸೂಕ್ಷ್ಮಗಳಿದ್ದೇ ಇರುತ್ತವೆ.

ಜೀವರು ಹುಟ್ಟುವರೆ? ಜನ್ಮಾಂತರವುಂಟೆ?

ಜೀವಾತ್ಮನು ಎಂದಿಗೂ ಹುಟ್ಟುವುದಿಲ್ಲವೆಂಬ ಸಿದ್ಧಾಂತವಿದೆ. **'ನಾತ್ಮಾಶ್ರುತೇಃ ನಿತ್ಯತ್ವಾಚ್ಚ ತಾಭ್ಯಃ'** ಬ್ರಹ್ಮ ಸೂತ್ರ **"ನ ಜಾಯತೇ ಮ್ರಿಯತೇ ವಾ ಕದಾಚಿತ್"** ಎಂಬುವ ಶ್ರುತಿ. ಗೀತೆಗಳೂ ಪ್ರಮಾಣವಾಗಿವೆ. ಹೀಗಾದರೆ ಹಿಂದೆ ಸ್ಥಾವರ ಜಂಗಮಗಳು ಹುಟ್ಟಿದವೆಂದು ಹೇಗೆ ಹೇಳಿದ್ದು?. ಉತ್ತರ : ಜೀವರ ಉತ್ಪತ್ತಿ ನಾಶವೆಂಬುದು ಅವುಗಳ

CC-O. In Public Domain. Digitized by eGangotri

ಸ್ವರೂಪಕ್ಕೆ ಅಲ್ಲ. ಆದು ನಿತ್ಯ: ಆದರೆ ಶರೀರವು ಹುಟ್ಟಿದರೆ ಜೀವ ಹುಟ್ಟಿತು. ಶರೀರವು ನಾಶವಾದರೆ ನಾಶವಾಯಿತು ಎಂದು ಗೌಣವಾಗಿ ಹೇಳುವ ಪಾಡಿಕೆ, **ಚರಾಚರ ವ್ಯಪಾಶ್ರಯಸ್ತು ಸ್ಯಾತ್ ತದ್ಭಾವಭಾವಿತ್ವಾತ್ ತದ್ವ್ಯಪದೇಶೋ ಭಾಕ್ತಃ** (ಬ್ರಹ್ಮಸೂತ್ರ) ದೇಹದಂತೆ ಜೀವಕ್ಕೆ ಹುಟ್ಟುನಾಶಗಳಿದ್ದರೆ ಜನ್ಮಾಂತರವನ್ನು ಹೇಳುವುದಕ್ಕೆ ಆಗುವುದಿಲ್ಲ. ದೇಹಾತ್ಮವಾದಂತೆ ಆಗುಪದು. ಜನ್ಮಾಂತರ ಒಪ್ಪದಿದ್ದರೆ ಮೊಟ್ಟಮೊದಲು ಹುಟ್ಟಲು ನಿಮಿತ್ತವೇ ಇಲ್ಲವೆಂದಾಗುವುದು. ಜೀವನು ಶರೀರವನ್ನು ಹೊಂದುವುದು ಪೂರ್ವ ಪೂರ್ವ ಜನ್ಮದ ಕರ್ಮಾನುಸಾರ. ಹಿಂದೆ ಹಿಂದಿನ ಜನ್ಮದಲ್ಲಿ ಮಾಡಿದ ಪಾಪ ಪುಣ್ಯಗಳು ಮುಂದು ಮುಂದಿನ ಜನ್ಮದಲ್ಲಿ ಶರೀರ ಬರಲು ಕಾರಣವಾಗುತ್ತವೆ. ಆಯಾಯ ಪಾಪಪುಣ್ಯಗಳ ಫಲಾನುಭವವಾದೊಡನೆ ಮತ್ತೊಂದು ಕರ್ಮದ ಫಲವಾಗಿ ಶರೀರವು ಬರುವುದು, ಬೀಜಾಂಕುರ ನ್ಯಾಯದಂತೆ ಅಥವಾ ಬೀಜವೃಕ್ಷನ್ಯಾಯದಂತೆ. ಈಗಿನ ವೃಕ್ಷವು ಹಿಂದಿನ ಬೀಜದಿಂದ ಹಿಂದಿನ ಬೀಜವು ಆದರ ಹಿಂದಿನ ವೃಕ್ಷದಿಂದ, ಈ ರೀತಿಯಲ್ಲಿ ಅನಾದಿಯಾಗಿ ಒಂದರಿಂದೊಂದು ಹುಟ್ಟಿಕೊಳ್ಳುತ್ತಾ ಬಂದಿವೆ. ಈ ರೀತಿಯಾಗಿ ಶರೀರಗಳ ಪುಟ್ಟಿಲೇ ಜೀವರ ಹುಟ್ಟು, ಬೇರೆಯಲ್ಲ. ಜೀವನು ನಿತ್ಯ, ಅನಾದಿ ನಾಶರಹಿತ.

ಜೀವರೆಂದರೆ ಏನು? ಅದರ ಸ್ವರೂಪವೇನು?

ವೇದಾಂತ ಸಿದ್ಧಾಂತದಂತೆ ಒಬ್ಬ ಸಚ್ಚಿದಾನಂದರೂಪನಾದ ಆತ್ಮನು ಅದ್ವಿತೀಯ. ಸರ್ವಭೂತಗಳಲ್ಲೂ ನೆಲೆಸಿದವನು. ಸರ್ವವ್ಯಾಪಕನು, ಕರ್ಮ ಸಾಕ್ಷಿ, ಸಾಕ್ಷೀಭೂತ, ಚೈತನ್ಯರೂಪನು ಕರ್ತನಲ್ಲ. ನಿರ್ಗುಣ, ಸತ್ವರಜಸ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೋಗುಣಗಳಿಲ್ಲದವನು. ಇದೇ ನಿಜವಾದ ಆತ್ಮ. ಆದರೂ ಈ ಚೇತನವು ಪ್ರತಿ ಶರೀರಗಳಲ್ಲಿ ಅಂತಃಕರಣಗಳಲ್ಲಿ ಪ್ರತಿಬಿಂಬಿಸಿ ಸೂರ್ಯನು ಅನೇಕ ಜಲಪಾತ್ರಗಳಲ್ಲಿ ಜಲವು ಕಂಪಿಸಿದಾಗ ಪ್ರತಿಬಿಂಬ ಸೂರ್ಯನು ಕಂಪಿಸುವಂತೆ ಜಲವು ಇಳಿದರೆ ಇಳಿದಂತೆಯೂ, ಜಲವು ವೃದ್ಧಿಯಾದರೆ ವೃದ್ಧಿಯಾದಂತೆಯೂ ತೋರುವನು. ಸೂರ್ಯನು ಅನೇಕ ಜಲಪಾತ್ರಗಳಲ್ಲಿ ಪ್ರತಿಬಿಂಬಿಸಿ ಪ್ರತ್ಯೇಕ ತೋರುವಂತೆ ಪ್ರತ್ಯೇಕವಾಗಿ ತೋರುವನು. ತೋರುವಾಗ **(ಅಹಂ ಕರ್ತಾ ಭೋಕ್ತಾ)** ನಾನು ಕರ್ತಾ, ಭೋಕ್ತಾ, ಸುಖಿ, ದುಃಖಿ ಎಂದು ಅಂತಃಕರಣದ ಉಪಾಧಿಧರ್ಮದಿಂದ ವೃದ್ಧಿಹ್ರಾಸಗಳಿಂದ ತೋರಿ ಬರುವನು. ಹೀಗೆ ತೋರುವಪನೇ ಜೀವನು.

ಅಹಂ ಮಮ ಎಂಬ ಅಧ್ಯಾಸವು ಸಂಸಾರದ ಬೀಜ

ಅಹಂಕಾರವೆಂಬ ಜಡವಸ್ತುವಿನೊಂದಿಗೆ ಚೈತನ್ಯವು ಭಾಸವಾಗುವುದು ಕಾಷ್ಠದಲ್ಲಿ ಹೊತ್ತಿಕೊಂಡು ಉರಿಯುವ ಬೆಂಕಿಯಂತೆ ಅಭಿನ್ನವಾಗಿ ಒಂದಾಗಿ ತೋರುವುದು, ಇದು ಎಲ್ಲಾ ಜೀವರಿಗೂ 'ನಾನು ನಾನು' ಎಂದು ತೋರುವುದು. ಇದೇ ಜೀವಸ್ವರೂಪದ ಅಪರೋಕ್ಷಾನುಭವ, ಚೈತನ್ಯವೂ ಜಡವೂ ತತ್ವಾಜ್ಞಾನದಿಂದ ಒಂದಾಗಿ ಆತ್ಮವೇ ಎಂದು ತಿಳಿಯುತ್ತಿರುವುದು ಭ್ರಾಂತಿ. ಅನಾದಿ ಅಧ್ಯಾಸ ಎಂದು ಶಂಕರರು ಸ್ಪಷ್ಟಪಡಿಸಿದ್ದಾರೆ. ಈ ಅಧ್ಯಾಸವು ಅಜ್ಞಾನ ಮೂಲಕವಾದ್ದರಿಂದ ಅಜ್ಞಾನವೆಂದು (ಅವಿದ್ಯೆಯೆಂದು) ಕರೆಯಲ್ಪಟ್ಟಿದೆ. **"ತಮೇತಮೇವಂ ಲಕ್ಷಣ ಮಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯನ್ತೇ"** ಎಂದು ಭಾಷ್ಯಕಾರರು. ನಾನೇ ಕರ್ತ, ಭೋಕ್ತ. ನಾನು ಮನುಷ್ಯ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇತ್ಯಾದಿ ರೂಪದಲ್ಲಿ ತೋರುವ ಅಧ್ಯಾಸವು, ಸಂಸಾರ ಬಂಧಕ್ಕೆ ಕಾರಣ. ಆಮೇಲೆ ಬರುವ 'ನನ್ನದು' ಎಂಬ ಮಮತಾಧ್ಯಾಸವು ಪುತ್ರಮಿತ್ರ ಕಳತ್ರಾದಿಗಳಲ್ಲಿ ಬರುವದು. ಇದೇ ಸಂಸಾರದ ಸಕಲಾನರ್ಥಗಳಿಗೂ ಕಾರಣವಾಗಿರುವುದು. ಅವಿದ್ಯಾನಾಶ

Sri Vidyabharathi Book Centre, Shirgeri

CC-O. In Public Domain. Digitized by eGangotri

ವಾದರೆ ಶುದ್ಧಸ್ವರೂಪವು ಈ **'ಅಹಂ ಮಮ'** ಎಂಬ ಅಧ್ಯಾಸವಿರುವವರೆಗೂ ಕಲ್ಪಿತ ಜೀವಸ್ವರೂಪವು ಸ್ಥಿರ. ತತ್ವಜ್ಞಾನವಾದೊಡನೆ ಅಹಂತೆ ಮಮತೆಗಳು ಹೋಗಿ ಒಂದೇ ಒಂದು ಆತ್ಮಸ್ವರೂಪವಾಗಿ ಉಳಿಯುವುದು. ಆಗಲೇ ಶುದ್ಧ ಸೂರ್ಯ–ಚಂದ್ರ ಬಿಂಬವು ಗ್ರಹಣದಿಂದ ನಿರ್ಮುಕ್ತವಾಗಿ ತೋರುವಂತೆ ಶುದ್ಧ ಸಚ್ಚಿದಾನಂದ ರೂಪವಾದ ಪರಬ್ರಹ್ಮ(ಪರಮಾತ್ಮ) ನಾಗಿಯೇ ಅನುಭವಕ್ಕೆ ಬರುವನೆಂದು ಬ್ರಹ್ಮವಿದರು ಹೇಳುವರು.

(ಅಧ್ಯಾಸವೆಂಬ) ಅವಿದ್ಯೆಯಿಂದ ಕಾಮವು-ಇದರಿಂದ ಕರ್ಮ, ಜನ್ಮ

ಕೇವಲ ಅವಿದ್ಯೆಯಿಂದ ಜನ್ಮವಲ್ಲ. ಮಧ್ಯೆ ಕಾಮವು (ರಾಗ) ಹುಟ್ಟಿ ಇದರಿಂದ ಕರ್ಮವು (ಪಾಪಪುಣ್ಯಗಳು) ಹುಟ್ಟಿ, ಇವುಗಳಿಂದ ಜನ್ಮವು ಬರುವುದು, ಈಗ ನಮಗೆ ಬಂದಿರುವ ಜನ್ಮಕ್ಕೆ ಜನ್ಮಾಂತರದ ಕರ್ಮವೇ ಕಾರಣ. ಈ ಕರ್ಮಕ್ಕೆ ನಮ್ಮ ಫಲಕಾಮನೆ ಕಾರಣ, ಇದಕ್ಕೆ ಮೂಲಾಜ್ಞಾನದಿಂದ ಬರುವ ಅಧ್ಯಾಸ ಕಾರಣ, ಈ ಜನ್ಮದಲ್ಲಿ ಯಾವುದೇ ಒಂದು ಕರ್ಮವನ್ನು ಮಾಡುವುದಕ್ಕೂ ಕಾಮವೇ ಕಾರಣ, ಕರ್ಮದ ಫಲವು ಅಭ್ಯುದಯ,ಪುತ್ರ, ಪಶು, ಧನಕನಕಾದಿಗಳು, ವಿದ್ಯಾ, ಬುದ್ಧಿ, ಮೇಧಾ ಆಯುರಾರೋಗ್ಯಾದಿಗಳೂ ಸಹ, ಹಿಂದೆ ಹೇಳಿದಂತೆ ಇತರ ಕರ್ಮವಿಪಾಕವನ್ನೂ ಅರಿಯಬೇಕು.

CC-O. In Public Domain. Digitized by eGangotri

ಗೀತೆಯಲ್ಲಿ ಹೇಳುವ ಸಮ್ಯಕ್ ಜ್ಞಾನ (ಯಥಾರ್ಥಜ್ಞಾನ)

ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ।
ಅವಿಭಕ್ತಂ ವಿಭಕ್ತೇಷು ತತ್ ಜ್ಞಾನಂ ವಿದ್ಧಿ ಸಾತ್ತ್ವಿಕಮ್॥

ಅ.೧೮–ಶ್ಲೋ.೨೦.

ಅವ್ಯಕ್ತನೆಂಬ ಹಿರಣ್ಯಗರ್ಭನಿಂದ ಆರಂಭಿಸಿ ಸ್ಥಾವರಾಂತ ಪ್ರಾಣಿಗಳಲ್ಲಿ ಆತ್ಮವೆಂಬ ನಿತ್ಯನಿರ್ವಿಕಾರವಾದ ವಸ್ತುವನ್ನು ಯಾವ ಜ್ಞಾನದಿಂದ ಕಾಣುವನೋ ಅಲ್ಲದೆ,ಆ ವಸ್ತುವು ಪ್ರತಿ ಶರೀರಗಳು ವಿಭಕ್ತವಾಗಿದ್ದರೂ ಅವುಗಳಲ್ಲಿ ಅವಿಭಕ್ತವಾಗಿ ಆಕಾಶದಂತೆ ಭೇದವಿಲ್ಲದೆ ಒಂದಾಗಿರುವಂತೆ ಯಾವಾತನು ಕಾಣುತ್ತಾನೋ, ಆ ಜ್ಞಾನವೇ ಸಾಕ್ಷಾತ್ ಅನುಭವವಾಗುವ ಸಮ್ಯಕ್ ದರ್ಶನವೇ ಯಥಾರ್ಥಜ್ಞಾನ, ಈ ಅದ್ವೈತಾತ್ಮಜ್ಞಾನವೇ ಸಾತ್ತ್ವಿಕ ಪೆಂದು ತಿಳಿ.

ಇತರ ದ್ವೈತ ದರ್ಶನಗಳು ಸಮ್ಯಕ್‌ದರ್ಶನಗಳಲ್ಲ. ಅವೆಲ್ಲಾ ರಾಜಸ-ತಾಮಸಗಳಾಗಿದ್ದು, ನೇರವಾಗಿ ಸಂಸಾರ ಬಂಧ ನಾಶಕ್ಕೆ ಕಾರಣವಾಗುವುದಿಲ್ಲ; ಮೋಕ್ಷಕ್ಕೆ ಕಾರಣವಾಗುವುದಿಲ್ಲ.

ಪೃಥಕ್ತ್ವೇನ ತು ಯಜ್ಜ್ಞಾನಂ ನಾನಾಭಾವಾನ್ ಪೃಥಗ್‌ವಿಧಾನ್।
ವೇತ್ತಿ ಸರ್ವೇಷು ಭೂತೇಷು ತತ್ ಜ್ಞಾನಂ ವಿದ್ಧಿ ರಾಜಸಮ್ ॥

ಅ-೧೮:ಶ್ಲೋ-೨೧.

ಪ್ರತಿ ಶರೀರದಲ್ಲೂ ಬೇರೆ ಬೇರೆ ವಿಧವಲ್ಲಿರುವ ಭಿನ್ನಾತ್ಮರನ್ನು ಯಾವ ಜ್ಞಾನದಿಂದ ತಿಳಿಯುವನೋ, ಅದು ರಾಜಸಗುಣವು. ರಜೋಗುಣದಿಂದ ಪುಟ್ಟಿದ್ದು-

"ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ"

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ಶ್ರುತಿಯು ಆತ್ಮನಲ್ಲಿ ಭೇದವಿಲ್ಲದಿದ್ದರೂ ಇವನಂತೆ ಭ್ರಮಿಸಿ ತಿಳಿಯುವ ವಚನವು ಮೇಲಿಂದ ಮೇಲೆ ಸಾವನ್ನು ಹೊಂದುತ್ತಾನೆ; ಪುನಃ ಪುನಃ ಜನ್ಮ-ಮರಣಗಳನ್ನು ಹೊಂದುತ್ತಾನೆ.

ಯತ್ತು ಕೃತ್ಸ್ನವದೇಕಸ್ಮಿನ್ ಕಾರ್ಯೇ ಸಕ್ತಮಹೈತುಕಂ ।
ಅತತ್ತ್ವಾರ್ಥವದಲ್ಪಂ ಚ ತತ್ತಾಮಸಮುದಾಹೃತಮ್ ॥

ದೇಹದಲ್ಲಾಗಲೀ, ಪ್ರತಿಮಾದಿಗಳಲ್ಲಾಗಲೀ ಯಾವುದೇ ಒಂದು ಹುಟ್ಟಿದ ವಸ್ತುವಿನಲ್ಲಾಗಲೀ, ಅದಕ್ಕೆ ತಕ್ಕಂತೆ ಆತ್ಮ ಅಥವಾ ಈಶ್ವರನಿರುತ್ತಾನೆ.-ಬೇರೆಯಲ್ಲವೆಂದು ಯಾವ ಜ್ಞಾನದಿಂದ ತಿಳಿಯುವನೋ ಅದು ತಾಮಸ ಜ್ಞಾನ, ಹೇಗೆ ದಿಗಂಬರಸಿದ್ಧಾಂತದಲ್ಲಿ ಶರೀರದೊಳಗೆ ದೇಹವಿರುವಷ್ಟು ಪರಿಮಾಣದಲ್ಲಿರುವವನೇ ಆತ್ಮನೆಂದು ಹೇಳುವರೋ, ಹಾಗೆ ಈಶ್ವರ ಕಲ್ಲು, ಮರ ಮುಂತಾದವುಗಳಿಂದ ಮಾಡಿದ ಮೂರ್ತಿಯಷ್ಟೇ ಪರಿಣಾಮವುಳ್ಳವನೆಂದು ಪಾಮರರು ಭಾವಿಸುವಂತೆ ತಿಳಿಯುವ ನಿರ್ಯುಕ್ತಿಕ ಮತ್ತು ತತ್ತ್ವಾರ್ಥಶೂನ್ಯವಾದ ಈ ಅಲ್ಪಜ್ಞಾನವು ತಾಮಸ ಜನರಿಗೆ ಬರುವುದು.

ಸಾತ್ತ್ವಿಕರಿಗೆ ಮೋಕ್ಷಕ್ಕೆ ಬೇಕಾದ ಸಾಕ್ಷಾತ್ ಸಮ್ಯಕ್ ದರ್ಶನವೇ ಗ್ರಾಹ್ಯವು. ಉಪನಿಷತ್ತುಗಳು ಆತ್ಮನ ಭೇದಜ್ಞಾನವು ಮೋಕ್ಷಕ್ಕೆ ಕಾರಣವಾಗುವುದಿಲ್ಲವೆಂದೂ, ಪದೇ ಪದೇ ಜನನ ಮರಣ ರೂಪವಾದ ಸಂಸಾರಕ್ಕೆ ಕಾರಣವಾಗುತ್ತದೆ ಎಂದು ಸಾರಿ ತಿಳಿಸುತ್ತವೆ.

ಜ್ಞಾನದಿಂದಲೇ ಮೋಕ್ಷ

ಜ್ಞಾನವೇ ಮೋಕ್ಷಕ್ಕೆ ಸಾಧನವೆಂಬುದು ಗೀತಾ ನಿರ್ಣಯ

"ಯದ್ ಜ್ಞಾತ್ವಾ ಮೋಕ್ಷಸೇಽಶುಭಾತ್

CC-O. In Public Domain. Digitized by eGangotri

"ಜ್ಞಾನಂ ಲಭ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ"
"ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ"
"ಅಶರೀರಂ ಶರೀರೇಷ್ವನವಸ್ಥೇಷ್ವವಸ್ಥಿತಮ್
ಮಹಾನ್ತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ"

ಇತ್ಯಾದಿ ಸ್ಥಳಗಳಲ್ಲಿ ಹೇಳಿದ ಆತ್ಮಜ್ಞಾನವು ಜೀವಬ್ರಹ್ಮೈಕ್ಯಜ್ಞಾನವೇ ಹೊರತು ಬೇರೆಯಲ್ಲ. ಎಲ್ಲೆಲ್ಲಿಯೂ ತನ್ನ ಆತ್ಮನು ಒಂದಾಗಿರುವಂತೆ ಕಾಣುವುದು. ಇದೇ **''ಅಹಂ ಬ್ರಹ್ಮಾಸ್ಮಿ''** ಎಂದು ಉಂಟಾಗುವ ಅಪರೋಕ್ಷಾನುಭವ. ಇದು **'ತತ್ತ್ವಮಸಿ'** ಎಂಬ ಮಹಾ ವಾಕ್ಯೋಪದೇಶದಿಂದ ಬರುವುದು. ಅದರಂತೆ **'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ'** ಎಂದು ಹೇಳಿರುವ ವಾಕ್ಯೋಪದೇಶದಿಂದ ಬರುವು ಜ್ಞಾನವೂ ಅದೇ ಜ್ಞಾನದಿಂದ ಅಜ್ಞಾನವೂ ಅದರ ಕಾರ್ಯವಾದ ದೇಹಾತ್ಮಭ್ರಮೆ. ಅಹಂ ಮಮಾಧ್ಯಾಸವೂ ಮಮತಾಧ್ಯಾಸವೂ ಹೋಗುವುವು. ಅಹಂಕರ್ತಾ, ಭೋಕ್ತಾ, ಸಂಸಾರೀ ಎಂದು ತಿಳಿಯುವುದೇ ಅಹಂತಾಧ್ಯಾಸವೆಂಬುವ ಮೊದಲಿನ ಭ್ರಮೆ ಪುತ್ರ ಮಿತ್ರ ಕಳತ್ರಾದಿಗಳಲ್ಲಿ ಮಮತಾಭಿಮಾನವೂ ನಮ್ಮ ದೇಶ, ನಮ್ಮ ರಾಷ್ಟ್ರ, ನಮ್ಮ ಪ್ರಜೆ, ನಮ್ಮ ನಗರ, ನಮ್ಮೂರು, ಇತ್ಯಾದಿ ದೇಶಾಭಿಮಾನಗಳೂ ಸಹ ಎರಡನೆಯದಾದ ಮಮತಾಧ್ಯಾಸ. ಇವು ಮೊಟ್ಟ ಮೊದಲು ಹುಟ್ಟುವುವು, ಸ್ಥೂಲಸೂಕ್ಷ್ಮ ದೇಹಗಳಲ್ಲಿ ಆತ್ಮಾಭಿಮಾನವು, ಹುಟ್ಟಿದ ಅನಂತರವೇ ಮಮತಾಭಿಮಾನವು ತನ್ನ ಸಂಬಂಧಿಯಾದ ಪುತ್ರಾದಿಗಳಲ್ಲೂ, ಇತರ ದೇಶ, ನೆಗರ, ಗ್ರಾಮಾದಿಗಳಲ್ಲೂ ಹುಟ್ಟುವ ಮಮತಾಭಿಮಾನವು. ಜೀವಸ್ವರೂಪವಾದ ಬ್ರಹ್ಮ ಜ್ಞಾನವು ಅನುಭವಕ್ಕೆ ಬಂದ ಕೂಡಲೆ (ಅಹಂ ಅಭಿಮಾನವು) ಹೋಗುವುದು. ಅದು ಹೋದರೆ ಮಮತಾಭ್ರಮೆಗೆ ಒಳಗಾದ ವಿಶ್ವದಲ್ಲೇ ಇದ್ದ ಮಮತೆಯು ಹೋಗುವುದು. ಆದ್ದರಿಂದ ಸಮಸ್ತ ಜಗತ್ತಿನ ತತ್ವವು ನಿಜವಾಗಿ ಪರಮಾತ್ಮನ ಸ್ವರೂಪವೇ ಎಂದು ಅನುಭವವು ಬರುವುದು **''ವಾಸುದೇವಃ**

CC-O. In Public Domain. Digitized by eGangotri

ಸರ್ವಮಿತಿ" ಸ ಮಹಾತ್ಮಾ ಸುದುರ್ಲಭಃ" ಎಂದು ಈ ರೀತಿಯಾಗಿ ಜ್ಞಾನವಾದವನೇ ಮಹಾತ್ಮನೆಂದು ಆಧ್ಯಾತ್ಮ ಶಾಸ್ತ್ರದಲ್ಲಿ ಹೇಳಲ್ಪಡುವನು, ಇಂತಹವನು ಅಪರೂಪ. ಆದ್ದರಿಂದಲೇ **"ಸ ಮಹಾತ್ಮಾ ಸುದುರ್ಲಭಃ"** ಎಂದು ಭಗವಂತನು ಹೇಳಿರುವನು.

ಆತ್ಮಭೇದ ಜ್ಞಾನವು ಎಂದಿಗೂ ಮೋಕ್ಷಕ್ಕೆ ಕಾರಣವಲ್ಲ ಅದು ರಾಜಸ, ತಾಮಸವಾಗುವುದು.

"ಬ್ರಹ್ಮ ತಂ ಪರಾದಾತ್ ಯೋಽನ್ಯತ್ರಾತ್ಮನೋ ಬ್ರಹ್ಮವೇದ..... ಸರ್ವಂ ತಂ ಪರಾದಾತ್ ಯೋಽನ್ಯತ್ರಾತ್ಮನೋ ಬ್ರಹ್ಮವೇದ" ಇತ್ಯಾದಿ ಶ್ರುತಿಗಳು ಪರಮಾತ್ಮನಿಗೆ ಬೇರೆಯಾಗಿ ಬ್ರಾಹ್ಮಣಾದಿ ಚಾತುರ್ವರ್ಣ್ಯದವರನ್ನು ಭೇದಬುದ್ಧಿಯಿಂದ ನೋಡುವಂತಹವನನ್ನು ಈ ದೃಷ್ಟಿಯು ಪರಮ ಮುಕ್ತಿಯಿಂದ ತಿರಸ್ಕರಿಸಿ ದೂರವಿರಿಸುವವೆಂದು ಹೇಳಿವೆ, ಉಪನಿಷತ್ತನ್ನೇ ಹೊಂದಿಕೊಂಡಿರುವ ಗೀತೆಗೂ ಇದೇ ತಾತ್ಪರ್ಯವೆಂದು ತಿಳಿಯಬೇಕು, ಭಗವಂತನೇ ವೇದ ವೇದಾಂತಗಳನ್ನು ಸೃಷ್ಟಿಸಿದನು. **"ವೇದಾಂತಕೃದ್ವೇದ ವಿದೇವ ಚಾಹಮ್"** ಗೀತೆಯನ್ನು ಹಾಡಿದವನು ಅವನೇ ಬೇರೆಯಲ್ಲ. ಪರಮಾತ್ಮನ ವಿಭೂತಿಪುರುಷ ವಾಸುದೇವ. **"ವೃಷ್ಣೀನಾಂ ವಾಸುದೇವೋಽಸ್ಮಿ"** ಎಂದಲ್ಲವೇ ಉಪದೇಶಿಸಿದ್ದು.

ಆದ್ದರಿಂದ ಬ್ರಹ್ಮಾದಿ ಸಮಸ್ತ ಶರೀರವೆಂಬ ಕ್ಷೇತ್ರಗಳಲ್ಲಿರುವ ಶುದ್ಧ ಪ್ರತ್ಯಗಾತ್ಮನಾದ ಶೋಧಿತ ಜೀವನನ್ನು ಪರಮಾತ್ಮನೆಂದೇ ತಿಳಿಯುವುದು. **"ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ"** ಎಂದು ಉಪದೇಶಿಸಿದ್ದು ಛಾಂದೋಗ್ಯದ ಮಹಾವಾಕ್ಯವನ್ನು ಹೊಂದಿಕೊಂಡಿದೆ. ಜೀವೇಶ್ವರಭೇದವಾದಿಗಳಿಗೆ ನಿಜವಾಗಿ ಗೀತಾರ್ಥವು ಹೊಂದದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮತಾಚಾರ್ಯರು ಕೆಲವರು ಉಪಾಸನೆಗಾಗಿ ಭೇದವನ್ನು ಒಪ್ಪಿದರು. ಕೆಲವರು ದ್ವೈತ ವಿಶಿಷ್ಟಾದ್ವೈತ ಹೇಳಿದರು ಅಷ್ಟೆ. ಇದು ವ್ಯವಹಾರದಲ್ಲಿರುವ ಭೇದವು. ಅಜ್ಞಾನಿಗಳಿಗೆ ಮಾತ್ರ. ಪರಮಾರ್ಥ ಅನ್ವೇಷಕರಾದ ಉತ್ತಮಾಧಿಕಾರಿಗಳಿಗೆ ಅದ್ವೈತವೇ ಎಂಬುದನ್ನು ಮರೆಯಬಾರದು.– **ಬ್ರಹ್ಮವಿದ್ ಬ್ರಹ್ಮೈವ ಭವತಿ" "ಜ್ಞಾನೀತ್ವಾತ್ಮೈವ ಮೇ ಮತಮ್ "ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್" "ಆತ್ಮೈವೇದಂ ಸರ್ವಂ"** ಎಲ್ಲೆಲ್ಲೂ ಆತ್ಮನು ಒಬ್ಬನಾಗಿರುವನು. ಆದರೂ ಭಿನ್ನವಾಗಿರುವಂತೆ ತೋರುವನು. ಹೀಗೆಂಬುದಾಗಿ ಗೀತೆ–

ಅವಿಭಕ್ತಂ ವಿಭಕ್ತೇಷು ವಿಭಕ್ತಮಿವ ಚ ಸ್ಥಿತಮ್

ಅರ್ಥ– ಈ ಆತ್ಮನು ವಿಭಕ್ತವಾದ ಭಿನ್ನವಾಗಿರುವ ಶರೀರಗಳಲ್ಲಿ ಅವಿಭಕ್ತನಾಗಿ (ಅಭಿನ್ನನಾಗಿರುವನು)ಆದರೂ ವಿಭಕ್ತನಾಗಿರುವಂತೆ ತೋರುವನೆಂದು ಇವ ಶಬ್ದದಿಂದ ತಿಳಿದುಬರುವ ಅರ್ಥ. ನಿಜವಾಗಿ ವಿಭಕ್ತನಾಗಿದ್ದರೆ "ಇವ" ಶಬ್ದವನ್ನು ಸೇರಿಸುತ್ತಿರಲಿಲ್ಲ. ಇವ ಶಬ್ದವು ನಿಜವಾಗಿರುವುದಿಲ್ಲವೆಂಬ ಅರ್ಥವನ್ನು ಕೊಡುವುದು. ಇವ ಶಬ್ದಕ್ಕೆ ಸಾದೃಶ್ಯವೆಂಬ ಅರ್ಥವು ಇದ್ದರೂ ಇಲ್ಲಿ ಆ ಅರ್ಥವಿಲ್ಲ. ಸಾದೃಶ್ಯವಾಗಿದ್ದರೆ ಮುಖಂ ಚಂದ್ರ ಇವ ಎಂದಂತೆ ಉಪಮೇಯವನ್ನು ಬೇರೆ ಹೇಳಬೇಕಾಗಿತ್ತು. ಅದಿಲ್ಲವಾದ್ದರಿಂದ **"ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ"** (ಗೀತೆ) **"ಯಸ್ಮಾತ್ ಪರಂ ನಾ ಪರಮಸ್ತಿ ಕಿಂಚಿದ್ ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್ । ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕಸ್ತೇನೇದಂ ಪೂರ್ಣಂ ಪುರುಷೇಣ ಸರ್ವಮ್॥** ಸನಿಗಿಂತ ನಾರಾಯಣನಿಗಿಂತ ಮತ್ತೊಂದು ಶ್ರೇಷ್ಠ ಅಥವಾ ನಿಕೃಷ್ಟ, ಆಣು, ಮಹತ್ತು ಯಾವುದೂ ಇಲ್ಲ. ನಿಂತ ಮರದಂತೆ ಅಲ್ಲಾಡದೆ ಸ್ತಬ್ಧವಾಗಿ ಅಚಲನಾಗಿಯೇ ಆತ್ಮನು ಪರಮಾತ್ಮನು ಇರುವನೆಂದು ಉಪನಿಷತ್ತಿನ ಅರ್ಥವು ಇದು ಗೀತೆಗೆ ಅರ್ಥ.

Sri Vidyabharathi Book Centre; Sringeri

CC-O. In Public Domain. Digitized by eGangotri

ನಿಜವಾಗಿ ಆತ್ಮನು ಒಬ್ಬನಾದರೂ (ಶರೀರಾದಿ ಭೇದದಿಂದ) ಉಪಾಧಿಭೇದದಿಂದ ಭಿನ್ನೈಸಿ ತೋರುವನು.

ಮಹಾಕಾಶವು ಒಂದಾದರೂ ಭಿನ್ನಭಿನ್ನವಾಗಿ ಭೇರೀ, ಮೃದಂಗ, ಘಟ, ಕರಕ (ಕಮಂಡಲು) ಇತ್ಯಾದಿ ಸ್ಥಾನಭೇದದಿಂದ ಭಿನ್ನಭಿನ್ನವಾಗಿ ತೋರುವುದು ಹೇಗೋ ಹಾಗೆಯೇ ಆತ್ಮನು ಒಬ್ಬನಾದರೂ ಭಿನ್ನಭಿನ್ನವಾಗಿ ಶರೀರಭೇದದಿಂದ ಮೂರ್ತಿ ಭೇದದಿಂದ ತೋರಿ ಬರುವನು ಅಷ್ಟೆ–

ಜೀವಾತ್ಮನು ಪ್ರತಿಯೊಬ್ಬನಿಗೂ ನಾನು ಬೇರೆ. ನೀನು ಬೇರೆ ಎಂಬು ದಾಗಿಯೇ ಅಜ್ಞಾನದಿಂದ ತೋರುತ್ತಲಿರುವುದು ಸ್ಪಷ್ಟ-

"ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ" ಈ ಶ್ರುತಿಯಲ್ಲೂ ಇವ ಶಬ್ದದೊಂದಿಗೆ ದ್ವೈತ ಪದವನ್ನು ಉಪಯೋಗಿಸಿ ದ್ವೈತವು ಇದ್ದಂತೆ ಯಾರಿಗೆ ಯಾವಾಗ ತೋರುವುದೋ ಆವಾಗಲೇ ಆತ್ಮನು ಭಿನ್ನನಾಗಿ ಮತ್ತೊಂದನ್ನು ನೋಡುವನು, ಕೇಳುವನು, ಇತ್ಯಾದಿ ವ್ಯವಹಾರವನ್ನು ಮಾಡುವನೆಂದು ಹೇಳಿದ್ದರಿಂದ ದ್ವೈತವು (ಭೇದವು) ಪರಮಾರ್ಥವಲ್ಲ ಬ್ರಹ್ಮನಂತೆ ಸತ್ಯವಲ್ಲವೆಂದರ್ಥ. **"ಅದ್ವೈತಂ ಪರಮಾರ್ಥೋ ಹಿ ದ್ವೈತಂ ತದ್ಭೇದ ಉಚ್ಯತೇ"(ಗೌಡಪಾದಕಾರಿಕಾ) "ಮಾಯಾಮಾತ್ರಮಿದಂ ದ್ವೈತಂ ಅದ್ವೈತಂ ಪರಮಾರ್ಥತಃ"** ಎಂದು ಅದ್ವೈತವನ್ನು ಪರಮಾರ್ಥವೆಂದೇ ಘೋಷಿಸಿದ್ದಾರೆ. ಏನೊಂದೂ ಭೇದವಿಲ್ಲದ ಬ್ರಹ್ಮವೇ ಸತ್ಯ, ಮತ್ತೊಂದಲ್ಲ ಎಂದು ಅರ್ಥ **"ಸತ್ಯಂ ಜ್ಞಾನಮನಂತಂ ಬ್ರಹ್ಮ"** ಎಂಬುದರಿಂದ ತಿಳಿಸಿದ್ದಾರೆ.

"ವಿಶ್ವಂ ಸತ್ಯಂ ಮಘವಾನಾಯುವೋರಿತ್" ಸತ್ಯಂಚಾನೃತಂ ಚ ಸತ್ಯಮಭವತ್" ಇತ್ಯಾದಿ ಶ್ರುತಿಗಳಲ್ಲಿ ಹೇಳಿದ ಜಗತ್ತೂ ಸತ್ಯವೆಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಥವು ವ್ಯವಹಾರದಲ್ಲಿ ಸತ್ಯವಾಗಿರುವಂತೆ ಅಬಾಧಿತವಾಗಿದೆಯೆಂದರ್ಥ, ಜ್ಞಾನವು ಉಂಟಾದ ನಂತರ ಅಸತ್ಯವಾಗಿಯೇ ಬಿಡುವುದು. **'ಜ್ಞಾತೇ ದ್ವೈತಂ ನ ವಿದ್ಯತೇ'** ಎಂದು ಹೇಳಿದೆ, ಸತ್ಯವೇ ಆಗಿದ್ದರೆ ಬ್ರಹ್ಮನಂತೆ ಎಂದೆಂದೂ ಹೋಗದೆ ಸ್ಥಿರವಾಗಿದ್ದೀತು, ಹಾಗಿಲ್ಲ ಪ್ರಳಯವಾದೊಡನೆ ನಶಿಸಿಹೋಗುವುದು. ಸೃಷ್ಟಿಯಿದ್ದಾಗಲೇ ಅನೇಕ ನದಿಗಳು ಒಣಗಿ ಹಾರಿ ಹೋಗುವುವು. ಗಿರಿಗಳು ಜರಿದು ಹೋಗುವುವು, ನಗರಗಳೂ ನೀರಿನಲ್ಲಿ ಮುಳುಗಿ ಕರಗಿ ಹೋಗುವುವು. ಮೊದಲಿದ್ದ ದ್ವಾರಕೆಯು, ಮೊದಲಿದ್ದ ಅಯೋಧ್ಯಾ ನಗರಿಯು ಎಲ್ಲಿದೆ? ಆ ಸ್ಥಳಗಳು ಮಾತ್ರ ಸದ್ಯಃ ಇವೆ. ಇವೆಲ್ಲಾ ಭೂತ ಭೌತಿಕ ಪ್ರಪಂಚವೂ ಅಜ್ಞಾನಿಗಳ ದೃಷ್ಟಿಯಲ್ಲೂ ನಶಿಸುವುವು, ಜ್ಞಾನವು ಉಂಟಾದರೆ ಅಸತ್ಯವೇ ಆಗುವುವು.

"ಆದಾವನ್ತೇ ಚ ಯನ್ನಾಸ್ತಿ ವರ್ತಮಾನೇऽಪಿ ತತ್ತಥಾ।
ವಿತಥೈಃ ಸದೃಶಾಃ ಸನ್ತಃ ಅವಿತಥಾ ಇವ ಲಕ್ಷಿತಾಃ॥

ಯಾವುದೇ ಒಂದು ವಸ್ತುವು ಹುಟ್ಟುವ ಮುಂಚೆ ಇಲ್ಲದೆ ಅನಂತರ ಹುಟ್ಟಿ ಕೆಲವು ಕಾಲ ಇದ್ದು ಪುನಃ ನಾಶವಾಗುವುದೋ, ಅದು ಸತ್ಯವಲ್ಲ. ನಿಜವಾಗಿಲ್ಲ, ಹೀಗಿದ್ದರೂ ಮಧ್ಯಕಾಲದಲ್ಲಿ ಇದ್ದಂತೆ ಸತ್ಯವಾಗಿರುವಂತೆ ತೋರುವುದು ನಿಜವಾಗಿ ವರ್ತಮಾನ ಕಾಲದಲ್ಲಿ ವಾಸ್ತವವಲ್ಲ. ಯಾವುದು ತ್ರಿಕಾಲದಲ್ಲೂ ಅಚ್ಚಳಿಯದೇ ಇರುವುದೋ ಅದೇ ಸತ್ಯ, ನಿತ್ಯ, ಕಾಲ ಸಂಬಂಧವಿಲ್ಲದ್ದು. ಅದು ಬ್ರಹ್ಮವೊಂದೇ **"ಸತ್ಯಂ ಜ್ಞಾನಮನನ್ತಂ ಬ್ರಹ್ಮ"** ಎಂದು ದೇಶಕಾಲ ಪರಿಚ್ಛೇದವಿಲ್ಲದೆಯೂ, ವಸ್ತುಪರಿಚ್ಛೇದವಿಲ್ಲದೆಯೂ ಇರುವುದೋ ಅದು ನಿರತಿಶಯವಾದ ಮಹತ್ವದಿಂದ ಕೂಡಿದ್ದು, ಅದು ನಿತ್ಯ ಚಿದ್ರೂಪ (ನಿತ್ಯ ವಿಜ್ಞಾನ ಸ್ವರೂಪ) ಅಲ್ಲದೆ ಅಖಂಡಾನಂದರೂಪ. **"ವಿಜ್ಞಾನಮಾನಂದಂ ಬ್ರಹ್ಮ"** ಎಂದು ಬೃ- ಶ್ರುತಿಯು ಹೇಳುವದು. ವಿಶ್ವಂ ಸತ್ಯಂ ಎಂದು ವ್ಯಾವಹಾರಿಕವಾಗಿ ಅಂದರೆ ಅದ್ವಿತೀಯಾತ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನವಾಗುವ ತನಕ ಅಬಾಧಿತವಾಗಿ ತೋರುವುದರಿಂದ ಇದು ಸತ್ಯವೆಂದು ಹೇಳಿದ್ದಷ್ಟೆ ಬ್ರಹ್ಮನಂತೆ ಪಾರಮಾರ್ಥಿಕವಲ್ಲ. ಆದ್ದರಿಂದ **"ಅದ್ವೈತಂ ಪರಮಾರ್ಥತಃ"**ಎಂದು ಗೌಡಪಾದರು ಹೇಳಿದ್ದೇ ತ್ರುತಿಸ್ಮೃತಿ ಸಂಮತ. ಯುಕ್ತಿಗೂ ಅನುಭವಕ್ಕೂ ಹೊಂದುವದು. ಇಂತಹ ಬ್ರಹ್ಮಾತ್ಮೈಕ್ಯ ಜ್ಞಾನವಾದರೆ ಪರಮ ಮುಕ್ತಿ. ಅನುಭವದಲ್ಲಿ**"ಅಹಂ ಬ್ರಹ್ಮಾಸ್ಮಿ"**ಎಂದು ಕಂಡರೆ ಮಾತ್ರ ಜ್ಞಾನವನಿಸುವುದು ಇದೇ ಪುರುಷಾರ್ಥ ಸಾಧನ.

ಈ ತತ್ವಜ್ಞಾನವು ಮಹಾವಾಕ್ಯೋಪದೇಶದಿಂದಲೇ ಆಗುವುದು. ಸಾಧನ ಚತುಷ್ಟಯ ಸಂಪನ್ನನಾಗಿದ್ದು ಯೋಗಾಭ್ಯಾಸ ಮಾಡುತ್ತಾ ಶ್ರವಣ, ಮನನ, ನಿಧಿಧ್ಯಾಸನಗಳನ್ನು ಅನೇಕಬಾರಿ ಆಚರಿಸಿದಾಗ ಆಗುವುದು ತತ್ವಜ್ಞಾನ ಸಾಧನಗಳು ಅಂತರಂಗ ಸಾಧನಗಳು ಅಂದರೆ ತತ್ವಜ್ಞಾನಕ್ಕೆ ಸಹಕಾರಿ ಕಾರಣಗಳು, ಜಿಜ್ಞಾಸುವಿಗೆ ಇವು ಅತ್ಯವಶ್ಯ. ಈ ಸಾಧನಗಳನ್ನು ಗೀತೆಯಲ್ಲಿ (೧೩ನೇ ಅಧ್ಯಾಯ) ಉಪದೇಶಿಸಿದೆ–

(ಅಹಿಂಸಾ ಸಮತಾ ತುಷ್ಟಿಃ)
ಅಮಾನಿತ್ವಮದಂಭಿತ್ವಮಹಿಂಸಾ ಕ್ಷಾಂತಿರಾರ್ಜವಮ್।
ಆಚಾರ್ಯೋಪಾಸನಂ ಶೌಚಂ ಸ್ಥೈರ್ಯಮಾತ್ಮವಿನಿಗ್ರಹಃ॥
ಇಂದ್ರಿಯಾರ್ಥೇಷು ವೈರಾಗ್ಯಮನಹಂಕಾರ ಏವ ಚ।
ಜನ್ಮಮೃತ್ಯುಜರಾವ್ಯಾಧಿ ದುಃಖದೋಷಾನುದರ್ಶನಮ್।
ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು॥
ನಿತ್ಯಂ ಚ ಸಮಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು
ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ
ವಿವಿಕ್ತದೇಶಸೇವಿತ್ವ ಮರತಿರ್ಜನಸಂಸದಿ॥
ಅಧ್ಯಾತ್ಮಜ್ಞಾನನಿತ್ಯತ್ವಂ ತತ್ವಜ್ಞಾನಾರ್ಥದರ್ಶನಮ್।
(ಏತದ್ ಜ್ಞಾನಮಿತಿ ಪ್ರೋಕ್ತಂ) (೧೩–೫ರಿಂದ ೧೧)

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಜ್ಞಾನ ಸಾಧನವನ್ನು ಬೋಧಿಸಿದೆ. ಅಹಿಂಸಾ, ಸಮತಾಬುದ್ಧಿ, ತೃಪ್ತಿ. ಅಪರಿಗ್ರಹ. ಶೌಚ, ಆಚಾರ್ಯಸೇವೆ. ನಿತ್ಯವೂ ಅಧ್ಯಾತ್ಮಜ್ಞಾನ-ವಿಚಾರ ಇಂತಹ ಸಾಧನ ಸಂಪತ್ತು ಇರುವ ಜಿಜ್ಞಾಸುವಿಗೆ ಶುದ್ಧಾಂತಃಕರಣ ವಿರುವ ವಿರಕ್ತಪುರುಷನಿಗೆ. ಅತ್ಯವಶ್ಯ. ಮಹಾವಾಕ್ಯದಿಂದ ಅಪರೋಕ್ಷಾನು-ಭವವು ಬಂದೇ ಬರುತ್ತದೆ,

ಯಾರಿಗೂ ಈ ಅನುಭವವಾಗುವುದಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಅನುಭವ ಮಾಡಿಕೊಳ್ಳಲು ಮೇಲೆ ಹೇಳಿದ ಯೋಗ್ಯತೆಯು ಬೇಕು. ಪರಮಹಂಸಾಶ್ರಮವನ್ನು ಸ್ವೀಕರಿಸಿದ ಯತಿಗಳಿಗೆ ಇದು ಉಂಟಾಗುವದು. ಸಕೃದುಪದೇಶದಿಂದ ಇಹದಲ್ಲಿ ಆಗದಿದ್ದರೆ ಮುಂದಿನ ಜನ್ಮದಲ್ಲಿ ಆಗುವುದು. ಜ್ಞಾನವುಂಟಾಗಲು ಪಾಪವು ಪ್ರತಿಬಂಧವಾಗಿದ್ದರೆ ಇಹದಲ್ಲಿ ಜ್ಞಾನವಾಗದು. ಪ್ರತಿಬಂಧಕವಿಲ್ಲದಿದ್ದರೆ ಅವಶ್ಯ ಇಹ ಜನ್ಮದಲ್ಲಿ ಉಂಟಾಗುವುದೆಂದು ವ್ಯಾಸ ಸೂತ್ರ ನ್ಯಾಯ-

"ಐಹಿಕಮಪ್ಯಪ್ರಸ್ತುತ ಪ್ರತಿಬಂಧೇ ತದ್ದರ್ಶನಾತ್"

ಉದಾಹರಣೆ:- ವೇದವ್ಯಾಸರು, ಶುಕರು, ಶ್ವೇತಕೇತು, ಜನಕ, ಯಾಜ್ಞವಲ್ಕ್ಯ ಇತ್ಯಾದಿ ಮಹಾಪುರುಷರಿಗೆ ಈ ಜ್ಞಾನವು ಒಂದೇ ಜನ್ಮದಲ್ಲಿ ಬಂದಿದೆ, ವಾಮದೇವರಿಗೆ ಮುಂದಿನ ಜನ್ಮದಲ್ಲಿ ಆಗಿದೆಯೆಂಬುದು ಶ್ರುತಿಸಿದ್ಧ- **"ಗರ್ಭ ಏವ ಏತಚ್ಛಯಾನೋ ವಾಮದೇವ ಏವಮುವಾಚ, "ಅಹಂ ಮನುರಭವಂ ಸೂರ್ಯಶ್ಚಾಹಂ ಕಕ್ಷೀವಾನಸುರಸ್ಯ ---"** ಪೂರ್ವ ಜನ್ಮದಲ್ಲಿ ಮಾಡಿದ ಶ್ರವಣ ಮನನಾದಿಗಳಿಂದ ಹಿಂದೆ ಉಂಟಾಗದ ಸರ್ವಾತ್ಮ ಭಾವವು ಮುಂದೆ ಬಂದ ಜನ್ಮದಲ್ಲಿ ಹುಟ್ಟುವ ಮುಂಚೆ ಗರ್ಭದಲ್ಲೇ ಮಲಗಿದ್ದಾಗ ಸರ್ವಾತ್ಮಭಾವವನ್ನು ಈ ರೀತಿ ಹೇಳಿಕೊಂಡಿದ್ದಾನೆ. "ನಾನೇ ಮನುವಾಗಿದ್ದೆನು. ನಾನೇ ಸೂರ್ಯನಾಗಿದ್ದೆನು." ಎಂದೀ ಬಗೆಯಲ್ಲಿ ಸ್ವಾನುಭವವನ್ನು ಹೇಳಿಕೊಂಡಿದ್ದಾನೆ. ಸರ್ವಾತ್ಮಭಾವವೇ ಸರ್ವಜಗತ್ ಸ್ವರೂಪನಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮನು ಬೇರೆಯಲ್ಲ. ಸರ್ವಾತ್ಮಭಾವವೆಂದರೆ ಎಲ್ಲಾ ಜೀವರೂ ಮತ್ತು ಜೀವರ ಭೋಗ್ಯವಸ್ತುಗಳಾದ ಜಗತ್ತಿನ ಎಲ್ಲಾ ಜಡವಸ್ತುಗಳೂ ಸಕಲ ಭೋಗ ಲೋಕಗಳೂ ಸೇರಿಕೊಂಡ ಜಗತ್ತೇ **'ಸರ್ವ'** ಎಂಬುದರ ಅರ್ಥ. ಜ್ಞಾನ ವುಂಟಾಗುವ ಮುಂಚೆ ಈ ಭಾವವಿರುವುದಿಲ್ಲ. ಜ್ಞಾನವು ಬಂದಮೇಲೆ ಸರ್ವಜಗತ್ತಿನ ತತ್ವವಾದ ಬ್ರಹ್ಮವೇ ನಾನೆಂದು ತಿಳಿದುಬರುವುದಷ್ಟೆ, ಇದನ್ನೇ **"ವಾಸುದೇವಃ ಸರ್ವಮ್"** ಎಂದು ಗೀತೆ **"ಇದಂ ಸರ್ವಂ ಯದಯ-ಮಾತ್ಮಾ"** **'ಬ್ರಹ್ಮೈವೇದಂ ಸರ್ವಂ"** **"ಆತ್ಮೈವೇದಂ ಸರ್ವಂ"** ಇತ್ಯಾದಿ ಉಪನಿಷತ್ತುಗಳು ಸಾರುವುವು. ಸಂಸಾರಮೂಲವಾದ ಅಹಂಕರ್ತಾ, ಭೋಕ್ತಾ, ಸಂಸಾರೀ, ಎಂಬುವ ಮೊದಲಿನ ಆತ್ಮಾನಾತ್ಮ ಭ್ರಮೆಯು ಆತ್ಮತತ್ವಜ್ಞಾನದಿಂದ ನಿರ್ಮೂಲವಾಗಲು, ಎರಡನೆಯದಾದ **'ಮಮತಾ'** ಭ್ರಮೆಯೂ ನಾಶವಾಗಿಬಿಡುವುದು. ಈ ರೀತಿಯಾಗಿ ಅಜ್ಞಾನವು ಆದರ ಕಾರ್ಯವು ಸಕಲ ಸಂಸಾರ ದುಃಖವೂ ಹೋದಕೂಡಲೇ ನಿತ್ಯಶುದ್ಧ ಬುದ್ಧ ಮುಕ್ತನಾದ ಪರಬ್ರಹ್ಮಸ್ವರೂಪಾನಂದ ಲಾಭವಾಗುವುದೇ ಮುಕ್ತಿ. ಇದಾದ ಮೇಲೆ ಪುನರ್ಜನ್ಮಕ್ಕೆ ಅವಕಾಶವಿರುವುದಿಲ್ಲ. ಏಕೆಂದರೆ **"ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್‌ಕುರುತೇ ತಥಾ॥** ಎಂದು ಜ್ಞಾನವೆಂಬ ಬೆಂಕಿಯು ಜನ್ಮಕ್ಕೆ ಕಾರಣವಾದ ಸಂಚಿತಪಾಪಪುಣ್ಯಗಳೂ ಆಗಾಮಿ ಪಾಪ-ಪುಣ್ಯಗಳು ಬೀಜವೂ ಉಳಿಯದಂತೆ ಬೂದಿ ಮಾಡುವದು, ಆದರಿಂದ ಜನ್ಮವು ಪುನಃ ಎದಿನಂತೆ ಬಾರದೆಂದು ಗೀತೆಯು ಸ್ಪಷ್ಟವಾಗಿ ಹೇಳುವುದು. **"ಮದ್ ಭಾವಾಯೋಪಪದ್ಯತೇ"**, **"ಬ್ರಹ್ಮಭೂಯಾಯ ಕಲ್ಪತೇ"** **"ಲಭತೇ ಬ್ರಹ್ಮನಿರ್ವಾಣಮ್"**, **"ಬ್ರಹ್ಮಭೂತಮಕಲ್ಮಷಮ್"** ಇತ್ಯಾದಿಯಾಗಿ ಶುದ್ಧಬ್ರಹ್ಮ ಸ್ವರೂಪಾವಿರ್ಭಾವವೇ ಮೋಕ್ಷವೆಂಬುದು ಸ್ಪಷ್ಟವಾಗಿದೆ;

"ನಿರಂಜನಃ ಪರಮಂ ಸಾಮ್ಯಮುಪೈತಿ" ಈ ಶ್ರುತಿಯು ಮುಕ್ತಾತ್ಮನು ಕರ್ಮ ಮುಂತಾದ ದೋಷಗಳಿಂದ ನಿರ್ಲಿಪ್ತನಾಗಿ ಪರಮ-

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಮ್ಯವನ್ನು ಪರಬ್ರಹ್ಮಭಾವವನ್ನು ಹೊಂದುವನೆಂದು ಹೇಳುವದು.ಸಾಮ್ಯ ಎಂದರೆ ಸಾದೃಶ್ಯವೆಂದರ್ಥವಲ್ಲ. **'ನಿರ್ದೋಷಂ ಹಿ ಸಮಂ ಬ್ರಹ್ಮ'** ಎಂದು ಹೇಳಿದ ನಿರ್ವಿಶೇಷ ಮತ್ತು ನಿರ್ದೋಷವಾದ ಪರಬ್ರಹ್ಮ. ಅದರ ಸ್ವರೂಪವೇ ಸಾಮ್ಯ. ಅದು ಅತ್ಯಂತ ಉತ್ಕೃಷ್ಟ, ಭೇದರಹಿತ, **"ಪಂಡಿತಾಃ ಸಮದರ್ಶಿನಃ"** ಎಂದರೂ ಬ್ರಹ್ಮವೆಂಬ ಸಮದರ್ಶಿಗಳೆಂದರ್ಥ.

ಬೇರೆ ಮತಾಚಾರ್ಯರು (ಶ್ರೀ ಮಧ್ವಾಚಾರ್ಯರು) **'ಮದ್ಭಾವಂ ಸೋಽಧಿಗಚ್ಛತಿ'** ಎಂಬಲ್ಲಿ **ಮಯಿಭಾವಃ-ಮದ್‌ಭಾವಃ** ಎಂದು ನನ್ನಲ್ಲಿ ಪರಮಾತ್ಮನಲ್ಲಿ ಇರುವಿಕೆಯೆಂದರ್ಥಮಾಡಿರುವಿಕೆಯು**"ಬ್ರಹ್ಮಭೂಯಾಯ ಕಲ್ಪತೇ"** ಎಂಬೀ ಗೀತೆಗೆ ವಿರುದ್ಧವಾಗಿದೆ. ಬ್ರಹ್ಮಭೂಯಾಯ- ಎಂದರೆ ಬ್ರಹ್ಮಭಾವ ಬ್ರಹ್ಮಸ್ವರೂಪವೆಂದೇ ಅರ್ಥವು **"ಜ್ಞಾನೀತ್ವಾತ್ಮೈವ ಮೇ ಮತಮ್'** ಎಂಬುದಕ್ಕೆ ತೀರಾ ವಿರುದ್ಧ ಜ್ಞಾನಿಗೂ ಪರಮಾತ್ಮನಿಗೂ ಭೇದವೇ ಇರದೆ ಅವನು ನನ್ನ ಆತ್ಮನೆ ಎಂದು ಹೇಳಿದೆ. ಭೇದವು ಭಗವಂತನ ಮತಕ್ಕೆ ವಿರುದ್ಧವಾಗಿದೆ.

ಕರ್ಮದಿಂದಾಗಲೀ ಉಪಾಸನೆಯಿಂದಾಗಲೀ, ನೇರವಾಗಿ ಮೋಕ್ಷವು ಬರುವುದಿಲ್ಲ. ಕರ್ಮದಿಂದ ಸ್ವರ್ಗಲೋಕಾದಿಗಳು ಲಭಿಸುವಂತೆ ಮೋಕ್ಷವು ಲಭಿಸುವುದಾದರೆ ಅದು ನಿತ್ಯವಾಗಲಾರದು. ನಿತ್ಯಶುದ್ಧ,ನಿತ್ಯಬುದ್ಧ ನಿತ್ಯಮುಕ್ತನಾದ ಬ್ರಹ್ಮಸ್ವರೂಪವು ಕರ್ಮದಿಂದ ಹುಟ್ಟುವುದಿಲ್ಲ. ಕರ್ಮದಿಂದ ಸಂಸ್ಕಾರ್ಯವಲ್ಲ. ನಿತ್ಯಶುದ್ಧವಾದ್ದರಿಂದ ನಿರ್ವಿಕಾರನಾದ್ದರಿಂದ ವಿಕಾರ್ಯ ಅಲ್ಲ. ಪರಿಣಾಮಿಯಲ್ಲ,ಪ್ರಾಪ್ಯವೂ ಅಲ್ಲ.ಮುಮುಕ್ಷುವಿನ ಆತ್ಮವೇ ಆಗಿರಲು ಹೊಸದಾಗಿ ಪಡೆದುಕೊಳ್ಳಲಾಗದು, ಪರಮಾತ್ಮ ಅಥವಾ ಶುದ್ಧ ಬ್ರಹ್ಮವು ಯಾವತ್ತೂ ನಿರ್ವಿಕಾರ, ಅದು ಮಣ್ಣು, ಮಡಕೆ, ಕುಡಿಕೆ ಮುಂತಾದ ಪರಿಣಾಮವಾಗುವಂತೆ ಇನ್ನೊಂದರ ಪರಿಣಾಮವಲ್ಲ, ಮತ್ತು ಹಾಲು ಮೊಸರಾಗುವಂತೆಯೂ ಪರಿಣಮಿಸುವುದಿಲ್ಲ ಹಾಗೂ ಶುದ್ಧ ಸ್ಫಟಿಕದಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿತ್ಯವೂ ಸ್ವಚ್ಛ, ನಿರ್ಮಲ, ಸ್ಫಟಿಕವು ದಾಸವಾಳದ ಹೂವಿನೊಂದಿಗೆ ಇದ್ದಾಗ ಕೆಂಪಾಗಿ ತೋರಿದರೂ ಕೆಂಪು ಬಣ್ಣವು ಅದಕ್ಕೆ ಪತ್ತುವುದಿಲ್ಲ. ಹೊಸದಾದ ಸಂಸ್ಕರಣವೂ ಬೇಕಿಲ್ಲ. ಜ್ಞಾನರೂಪದಲ್ಲಿ ಸದಾ ಹೊಳೆಯುವುದು. ಬ್ರಹ್ಮವು ನಮ್ಮ ಆತ್ಮನೇ ಆಗಿರುವಾಗ ಅದನ್ನು ನಾವು ಹೊಂದುವುದೆಂಬ ಅರ್ಥವೂ ಸರಿಯಲ್ಲ. ಅದರಿಂದ ಕರ್ಮದಿಂದ ಉತ್ಪತ್ತಿ ವಿಕಾರ ಸಂಸ್ಕಾರ ಲಾಭಗಳು ಬ್ರಹ್ಮನಿಗೆ ಇರುವುದಿಲ್ಲ. ಧ್ಯಾನವೂ ಒಂದು ಮಾನಸಿಕ ವ್ಯಾಪಾರ. ಅದರಿಂದಲೂ ಬರುವುದಿಲ್ಲ. ಹೊಸದಾಗಿ ಬರುವ ಸ್ವರೂಪ ನಿತ್ಯವಾಗಲಾರದು. ಆದ್ದರಿಂದ ಕರ್ಮ ಮತ್ತು ಉಪಾಸನೆಗಳಿಂದ ನೇರವಾಗಿ ಮೋಕ್ಷವು ಬರುವುದಿಲ್ಲ. ಜ್ಞಾನದಿಂದ ಪರಬ್ರಹ್ಮಸ್ವರೂಪದಲ್ಲಿರುವ ನಮ್ಮ ಅಜ್ಞಾನವು ನಾಶವಾಗಿ ಇದ್ದಂತೆ ಪ್ರಕಾಶವಾಗುವುದು. ಇದನ್ನೇ **"ಬ್ರಹ್ಮವಿದಾಪ್ನೋತಿ ಪರಮ್", "ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ"** ಎಂಬ ಶ್ರುತಿಗಳು ಹೇಳುವುವು. ಉಪಾಸನೆಯಿಂದ ಬರುವ ಬ್ರಹ್ಮಲೋಕ ಮುಂತಾದ ಲೋಕಗಳು ಅನಿತ್ಯ. ಪುನರಾವರ್ತಿಯನ್ನು ಮರಳಿ ಸೃಷ್ಟಿಯೊಳಗೆ ಬರುವಿಕೆಯನ್ನೇ ಉಂಟು ಮಾಡುವುದು. ಗೀತೆ–

"ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ"

ಎಂದೇ ಹೇಳುವುದು. ಕೈಲಾಸ, ವೈಕುಂಠ, ಸ್ವರ್ಗ, ದೇವಲೋಕ, ಪಿತೃಲೋಕ ಮುಂತಾದ ಚತುರ್ದಶ ಲೋಕಗಳೂ ಶಾಶ್ವತವಲ್ಲ. ಎಲ್ಲಿಗೆ ಹೋದರೂ ಪುನಃ ಜನ್ಮವನ್ನು ಎತ್ತಲು ಪಾಪವನ್ನು ಬರಬೇಕಾಗುವುದು-

"ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ-ಮರ್ತ್ಯಲೋಕಂ ವಿಶಂತಿ" ಎಂದು. ಸ್ವರ್ಗಕ್ಕೆ ಹೋದವರೂ ಅಲ್ಲಿಯ ಭೋಗವನ್ನು ಅನುಭವಿಸಿದ ನಂತರ ಪುಣ್ಯ ಕ್ಷಯವಿಸಿದೊಡನೆ ಮನುಷ್ಯ ಲೋಕವನ್ನೇ ಪ್ರವೇಶಿಸುವರೆಂದು ಭಗವಂತನ ಉಪದೇಶವಿದೆ. ಆದ್ದರಿಂದ ಗೀತಾರ್ಥವು ಜ್ಞಾನದಿಂದಲೇ ಮೋಕ್ಷವೆಂಬುದಾಗಿ ನಿರ್ಣಯವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ನಾನ್ಯಃ ಪಂಥಾ ವಿದ್ಯತೇಽಯನಾಯ" ಮುಕ್ತಿಗೆ ಜ್ಞಾನವನ್ನು ಬಿಟ್ಟು ಬೇರೆ ಮಾರ್ಗವೇ ಇಲ್ಲವೆಂದು ವೇದವು ಸಾರಿದೆ.

ಬ್ರಹ್ಮ ನಮ್ಮ ಆತ್ಮಸ್ವರೂಪವೇ ಆಗಿದ್ದರೆ ಏಕೆ ಹಾಗೆಯೇ ತೋರುವುದಿಲ್ಲ ?

ನಾನು ಈಶ್ವರನಲ್ಲ, ದೇವರಲ್ಲ ಇತ್ಯಾದಿಯಾಗಿ ಭೇದ ಬುದ್ಧಿ ಎಲ್ಲರಿಗೂ ಇದೆಯಷ್ಟೆ. ಎಂಬ ಪ್ರಶ್ನೆಯು ಏಳುವುದು. ಅದಕ್ಕೆ ಉತ್ತರ-

"ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾ ಸಮಾವೃತಃ"
ಮೂಢೋಽಯಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್॥
"ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ" –ಗೀತೆ

ಅರ್ಥ:- ನಾನು ಎಲ್ಲರಿಗೂ ಪ್ರಕಾಶಿಸುವುದಿಲ್ಲ ಏಕೆ? ಯೋಗ ಮಾಯೆಯಿಂದ ಮುಚ್ಚಿ ಹೋಗಿದ್ದೇನೆ. **ಯೋಗ** ಎಂದರೆ ಅಘಟಿತ ಘಟನೆ. ಅದನ್ನುಂ ಉಂಟುಮಾಡುವದು. ಮಾಯೆ, ಈಶ್ವರನ ಅಧೀನವಾದ ತ್ರಿಗುಣಾತ್ಮಕವಾದ ಶಕ್ತಿ. ಅದು ಪಂಚಭೂತಾತ್ಮಕವಾಗಿಯೂ ಭೌತಿಕ ರೂಪದಲ್ಲಿ, ಶರೀರ ಇಂದ್ರಿಯಗಳ ರೂಪದಲ್ಲಿ ಪರಿಣಾಮ ಹೊಂದಿರುವ ಈಪ್ರಪಂಚವೇ ಆಗಿದ್ದು ನಮಗೆಲ್ಲ ಆವರಣವೆಂಬ ಅಜ್ಞಾನವನ್ನುಂಟುಮಾಡಿರುವುದು, ಆದ್ದರಿಂದಲೇ. ಇದನ್ನು ಮೂಲಭೂತವಾದ **ಅವಿದ್ಯೆಯೆಂದೂ** ಭಾಷ್ಯದಲ್ಲೂ ಪ್ರಕರಣ ಗ್ರಂಥಗಳಲ್ಲೂ ಕರೆದಿರುವದು. **"ಅಘಟಿತ ಘಟನಾ ಪಟೀಯಸೀಮಾಯಾ"** ಎಂದು ಮಾಯಾ ಪಂಚಕದಲ್ಲೂ **'ಸರ್ವಂಚೈತದವಿದ್ಯಯಾ-ತ್ರಿಗುಣಯಾಽಶೇಷಂ ಮಯಾ ಕಲ್ಪಿತಮ್'** ಎಂದು ಮನೀಷಾ-ಪಂಚಕದಲ್ಲೂ ಅವಿದ್ಯೆಯೆಂದು ಅದನ್ನೂ ಕರೆದಿರುವುದು ಸ್ಪಷ್ಟ, ಗೀತೆಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸನ್ನ್ಯಸ್ಯ– ಎಂದರೆ ಜ್ಞಾನಿಯೋಗಿಯನ್ನು ಬಿಟ್ಟುಳಿದ ಎಲ್ಲಾ ಜೀವಜಂತುಗಳಿಗೂ, ಸಕಲಮಾನವರಿಗೂ ಎಂದರ್ಥವು, ಆದ್ದರಿಂದ ನಮ್ಮ ನಿಜವಾದ ಆತ್ಮಸ್ವರೂಪವುಳ್ಳವನು ಪರಮಾತ್ಮನಾಗಿದ್ದರೂ ಬದ್ಧಜೀವರಿಗೆ ಪರಿಪೂರ್ಣ ಸಚ್ಚಿದಾನಂದರೂಪದಲ್ಲಿ ಕಾಣದೆ ಹೋಗಿರುವನೆಂದು ಭಾವಾರ್ಥವು, ಜೀವರನ್ನು ಮುಚ್ಚಿದಂತೆ ಪರಮಾತ್ಮನನ್ನು ನಿತ್ಯಪ್ರಕಾಶವುಳ್ಳವನನ್ನೂ ಮುಚ್ಚಲಾರದು. ಉದಾ:-ಮಾಯಾವಿಯು ಇಂದ್ರಜಾಲವನ್ನು ತೋರಿಸುವ ಮಾಯಾಶಕ್ತಿಯನ್ನು ಪ್ರಯೋಗಿಸಿದಾಗ ಪ್ರೇಕ್ಷಕರನ್ನು ಮುಚ್ಚಿ ಮಂಕು ಬಡಿಸುವುದು, ಆಷ್ಟೆ, ಆದರೆ ಮಾಯಾವಿಗೆ ಆ ಇಂದ್ರಜಾಲವು ಅಜ್ಞಾನವನ್ನುಂಟುಮಾಡುವುದಿಲ್ಲ, ಹೀಗಿರಲು ಮಹಾಮಾಯಾವಿ ಭಗವಂತನನ್ನು ಈ ಮಾಯೆಯು ಹೇಗೆಮುಚ್ಚೀತು? ಮುಚ್ಚುವುದಿಲ್ಲ ಎಂದು ಈ ಗೀತಾಭಾಷ್ಯದಲ್ಲಿ ಹೇಳಿದೆ.

ಮುಮುಕ್ಷುಗಳಿಗೆ ಅದ್ವೈತ ತತ್ವದ ಬೋಧನೆಯ ಕ್ರಮ

ಶಂಕರ ಸಿದ್ಧಾಂತದಲ್ಲಿ ಅದ್ವೈತತತ್ವ ಬೋಧನಾಕ್ರಮಗಳು ಸೂತ್ರ-ಭಾಷ್ಯದಂತೆ ಎರಡು ಬಗೆ, ವಿಧಿರೂಪದಿಂದಲೂ ನಿಷೇಧರೂಪದಿಂದಲೂ ತಿಳಿಸುವ ಶ್ರುತಿಗಳನ್ನು ಅನುಸರಿಸಿ ಶಂಕರರು ಹೀಗೆ ಬೋಧಿಸಿದ್ದಾರೆ,

"ಸತ್ಯಂ ಜ್ಞಾನಮನನ್ತಂ ಬ್ರಹ್ಮ" 'ವಿಜ್ಞಾನಮಾನನ್ದಂ ಬ್ರಹ್ಮ" 'ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯನ್ತೇ' 'ಪ್ರಜ್ಞಾನ ಘನಃ" ಪ್ರಜ್ಞಾನಂ ಬ್ರಹ್ಮ" ಇತ್ಯಾದಿ ವಿಧಿರೂಪದ ಶ್ರುತಿಗಳು **'ಯತ್ತದದ್ರೇತ್ಯ-ಮಗ್ರಾಹ್ಯಮ್' 'ಅಥಾತ ಆದೇಶೋ ನೇತಿ ನೇತಿ'** ಇತ್ಯಾದಿ ನಿಷೇಧರೂಪದ ಶ್ರುತಿಗಳು. ವಿಧಿಯೆಂದರೆ ಭಾವರೂಪ. ನಿಷೇಧವೆಂದರೆ ಅಭಾವರೂಪ. **"ಸತ್ಯಂ ಜ್ಞಾನ ಮನನ್ತಂ ಬ್ರಹ್ಮ" "ವಿಜ್ಞಾನಮಾನನ್ದಂ ಬ್ರಹ್ಮ"** ಇದರಲ್ಲಿ ಭಾವರೂಪವಾದ ಸಚ್ಚಿದಾನಂದ ಸ್ವರೂಪವೇ ಬ್ರಹ್ಮ-

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ತಿಳಿಸುವುದು. "ಅಥಾತ ಆದೇಶೋ ನೇತಿ ನೇತಿ" 'ಅಶಬ್ದಮಸ್ಪರ್ಶಮರೂಪಮವ್ಯಯಂ ತಥಾರಸಂ ನಿತ್ಯಮಗಂಧವಚ್ಚ ಯತ್' ಅನಾದ್ಯನನ್ತಂ ಮಹತಃ ಪರಂ ಧ್ರುವಮ್..... 'ಅಸ್ಥೂಲಮನಣು ಅಹ್ರಸ್ವಮದೀರ್ಘಮಲೋಹಿತಮಸ್ನೇಹಮ್' ಇತ್ಯಾದಿ ವಾಕ್ಯಗಳು ನಿಷೇಧರೂಪವಾದದ್ದು. ಅವು ಈ ರೀತಿ ಬೋಧಿಸುತ್ತವೆ. ಮೂರ್ತಸ್ವರೂಪವೂ ಅಲ್ಲ, ಅಮೂರ್ತ ಸ್ವರೂಪವೂ ಅಲ್ಲ, ಅಂದರೆ ಪಂಚ ಭೂತಾತ್ಮಕವಲ್ಲ. ಶಬ್ದಸ್ಪರ್ಶರೂಪ ರಸ ಗಂಧಗಳಲ್ಲಿ ಯಾವುದೂ ಇಲ್ಲದ್ದು. ಸ್ಥೂಲವೂ ಅಲ್ಲ. ಪರಮಾಣುವಂತೆ ಚಿಕ್ಕದಲ್ಲ. ಗಿಡ, ಉದ್ದ, ದೊಡ್ಡದು, ಸಣ್ಣದು ಎಂಬುವ ಅಳತೆಯಿಲ್ಲದ್ದು. ನನ್ತಮ್- ದೇಶದ ಮಿತಿ, ಕಾಲದಮಿತಿಯಿಲ್ಲದ್ದು. ಇದಕ್ಕೆ ನಿಜವಾಗಿ ಎರಡನೇ ವಸ್ತುವಿಲ್ಲ. ಆದ್ದರಿಂದ ದೇಶ. ಕಾಲಗಳ ಅಳತೆ, ವಸ್ತುವಿನ ಅಳತೆ ಇಲ್ಲದೆ ಅನಂತ ವ್ಯಾಪಕ ಎಂದು ತಿಳಿಯುವುದು. ಬ್ರಹ್ಮನಿಗೆ ಬೇರೆಯಾಗಿ ಜಗತ್ತು, ಜೀವರು ನಿಜವಾಗಿದ್ದರೆ ವಸ್ತು ಪರಿಚ್ಛೇದ ಬಂದೀತು. ಆವಾಗ ಆನಂತ್ಯವು ಬ್ರಹ್ಮನಿಗೆ ಹೊಂದುವುದಿಲ್ಲ. ಕೆಲವು ಕಡೆ ಬ್ರಹ್ಮವೂ, ಆತ್ಮನೂ ಒಂದು ಎಂದು 'ತತ್ತ್ವಮಸಿ' 'ಅಹಂ ಬ್ರಹ್ಮಾಸ್ಮಿ' ಇತ್ಯಾದಿ ವಾಕ್ಯಗಳು ತಿಳಿಸುವುವು. ಇತರ ವಾಕ್ಯಗಳೂ ಹೀಗಿವೆ-

ಅಂಗುಷ್ಠಮಾತ್ರಃ ಪುರುಷೋ ಜ್ಯೋತಿರಿವಾಧೂಮಕಃ ।
ಈಶಾನೋ ಭೂತಭವ್ಯಸ್ಯ ಸ ವಿವಾದ್ಯ ನ ಊಶ್ವಃ ॥

ಎಂದು ಕಠವಾಕ್ಯವು ಮತ್ತು "ಅಂಗುಷ್ಠ ಮಾತ್ರಃ ಪುರುಷಃ ಅಂಗುಷ್ಠಂಚ ಸಮಾಶ್ರಿತಃ। ..... ಪ್ರಭುಃ ಪ್ರೀಣಾತಿ ವಿಶ್ವಭುಕ್॥" "ಯಸ್ಮಾತ್ ಪರಂ ನಾ ಪರಮಸ್ತಿ ಕಂಚಿದ್ ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್" ಎಂಬ ನಾರಾಯಣೋಪನಿಷದ್ ವಾಕ್ಯವೂ ಇದೆ. ಜೀವಾತ್ಮನ ಸ್ವರೂಪವು ಅಹಂ ಕರ್ತಾ ಭೋಕ್ತಾ ಇತ್ಯಾದಿ ರೂಪದಲ್ಲಿ ತೋರುವುದು, ಜೀವತ್ವವು ಅವಿದ್ಯೆಯಿಂದ ತೋರಿದ್ದಾದ್ದರಿಂದ ಜೀವಭಾವ

CC-O. In Public Domain. Digitized by eGangotri

ವನ್ನು ತೊಡೆದು ಹಾಕಿ, ಅಂದರೆ "ನೀನು ಸಂಸಾರಿಯಲ್ಲ, ಕರ್ತನಲ್ಲ, ಭೋಕ್ತನಲ್ಲ" ಮತ್ತೇನೆಂದರೆ ಅಸಂಸಾರಿಯಾದ ಶುದ್ಧಬ್ರಹ್ಮವೇ ಆಗಿರುತ್ತೀಯೆ, ಎಂದು ಮಹಾವಾಕ್ಯದಿಂದ ಬೋಧಿಸುವ ಕ್ರಮವು. **'ಅಹಂ ಬ್ರಹ್ಮಾಸ್ಮಿ'** ಎಂಬುದು ಜ್ಞಾನಿಗಳ ಸ್ವಾನುಭವದ ಮಾತು. ಕಂಠವಾಕ್ಯದಲ್ಲೂ ಅಂಗುಷ್ಠಪರಿಣಾಮವುಳ್ಳದ್ದಾಗಿ ಅವಿದ್ಯಾದಶೆಯಲ್ಲಿ ಸಣ್ಣದಾಗಿ ಕಾಣಿಸಿಕೊಂಡ ಜೀವನು ನಿಜವಾಗಿ ಕಾಲತ್ರಯದಲ್ಲೂ ಈ ಪ್ರಪಂಚವನ್ನು ಸೃಷ್ಟಿಸಿ ನಿಯಮಿಸುವ ಈಶ್ವರನೇ (ಪರಮಾತ್ಮನೇ) ಆತನು. ಅವನು ಈಗಲೂ ನಾಳೆಯೂ ಇರುವವನು. ಹಿಂದೆಯೂ ಇದ್ದವನೆಂದು ಬೋಧಿಸುತ್ತಾ, ಜೀವಾತ್ಮನ ತತ್ತ್ವವು ಹೊಗೆಯಿಲ್ಲದ ಬೆಂಕಿಯಂತೆ, ಕಲ್ಪಿತವಾದ ಸಂಸಾರದ ಮಾಲಿನ್ಯವಿಲ್ಲದ **ಶುದ್ಧ** ಚೈತನ್ಯರೂಪವೇ ಎಂದು ಹೇಳುತ್ತಾ ಐಕ್ಯವನ್ನು ಬೋಧಿಸುವದು. ಎಲ್ಲೆಲ್ಲಿ ಶಂಕರರು ಜೀವಬ್ರಹ್ಮೈಕ್ಯವನ್ನು ಹೇಳುವರೋ ಅಲ್ಲಲ್ಲಿ ಜೀವಾತ್ಮನ ಹೀನಜೀವಭಾವವನ್ನು ಕಲ್ಪಿಸಿಕೊಂಡಿರುವುದನ್ನು ತೊಡೆದು ಹಾಕಿಯೇ ಶುದ್ಧ ಸಚ್ಚಿದಾನಂದ ಬ್ರಹ್ಮ ಸ್ವರೂಪವನ್ನು ಬೋಧಿಸುವರು ಅಷ್ಟೆ. ಜೀವಾತ್ಮನು- ಈಶ್ವರನೂ ಒಂದು ಎಂದು ಎಂದಿಗೂ ಇದ್ದಹಾಗೆ ಹೇಳುವುದಿಲ್ಲ. ಜೀವ ಎಂಬುದು ಸೂರ್ಯಚಂದ್ರರ ಪ್ರತಿಬಿಂಬದಂತೆ ಬುದ್ಧಿಯಲ್ಲಿ ಪ್ರತಿಬಿಂಬಿಸಿದ ಬ್ರಹ್ಮ ಚೈತನ್ಯವದು. ಬಿಂಬಸ್ಥಾನದಲ್ಲಿ ಬ್ರಹ್ಮ ಚೈತನ್ಯವು ಇದೆ. ಸೂರ್ಯ ಚಂದ್ರರ ಪ್ರತಿಬಿಂಬವು ಅಜ್ಞಾನದಿಂದ ತೋರಿದ ರೂಪ, ಸತ್ಯವಲ್ಲ. ವಾಪೀ,ಕೂಪ, ತಟಾಕ, ಮೊದಲಾದ ಜಲಪಾತ್ರಗಳಲ್ಲಿ ಕಾಣುವ ಪ್ರತಿಬಿಂಬವು ಆ ಪಾತ್ರಗಳು ಇರುವವರೆಗೂ ಭಿನ್ನ ಭಿನ್ನವಾಗಿ (ಸೂರ್ಯ-ಚಂದ್ರ ಪ್ರತಿಬಿಂಬಗಳು) ಕಂಡೇ ಕಾಣುತ್ತವೆ. ಹಾಗೆಯೇ ಪ್ರತಿಯೊಂದು ಜೀವನ ಶರೀರದೊಳಗೆ ಬುದ್ಧಿಯಲ್ಲಿ (ಅಂತಃಕರಣದಲ್ಲಿ) ಈ ಉಪಾಧಿಯೂ ಇರುವಾಗ ಪ್ರತ್ಯೇಕವಾಗಿ ಸತ್ಯವಾಗಿ ತೋರುವುದು, ಈಶ್ವರನೂ ಸಹ ಮಾಯೋಪಾಧಿಯೊಂದಿಗೆ ಇರುವನೆಂಬುದು ಶಾಸ್ತ್ರ ಹೇಳುವುದು ಎರಡು ಉಪಾಧಿಗಳು ಸತ್ಯವಾಗಿವೆಯೆಂದು ತೋರುವವರೆಗೂ ಅವುಗಳ್ಳೊಂದಿಗೆ ಕಾಣುವ ಎರಡು ಬಗೆಯ ತೋರಿಕೆಯು ಹೋಗು

Sri Vidyabharathi Book Centre, Sringeri

CC-O. In Public Domain. Digitized by eGangotri

ದಿಲ್ಲ. ಅಭಿನ್ನ ಎಂಬ ಜ್ಞಾನವು ಬರುವುದಿಲ್ಲ. ತತ್ವಜ್ಞಾನವು ಬಂದೊಡನೆ ಅಂತಃಕರಣವೂ ಅಸತ್ಯವೆಂದಾಗಿ ತಿಳಿಯುವುದರಿಂದ ಅದ್ವಿತೀಯವಾದ ಪ್ರತ್ಯಗಾತ್ಮನು ಎಲ್ಲೆಲ್ಲಿಯೂ ಒಂದಾಗಿ ಅನುಭವಕ್ಕೆ ಬರುವನು.

ಅದ್ವೈತವೆಂದರೇನು ?

ಅದ್ವೈತವೆಂದರೆ ಭೇದವಿಲ್ಲದ್ದು. ಅದು ಪ್ರತ್ಯಗಾತ್ಮನೆಂಬ ತತ್ವ, ಪ್ರತ್ಯಗಭಿನ್ನ ಬ್ರಹ್ಮವೇ ಆಗುವುದು ಅದ್ವೈತವೆಂಬುದು ಮತವಲ್ಲ. ನಿರ್ಗುಣ ನಿರ್ವಿಶೇಷವಾದ ಪರಬ್ರಹ್ಮ **"ಶಾನ್ತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ"** ಎಂದು ಪಾಂಡೂಕ್ಯದಲ್ಲಿ ಹೇಳಿದ ತುರೀಯಾತ್ಮನು ಯಾವನು ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬುವ ಮೂರು ಅವಸ್ಥೆಗಳೂ, ಎಚ್ಚರ ನಿದ್ದೆ ಈ ಎರಡರ ಅಂತರಾಳದ ಅವಸ್ಥೆಯಿಲ್ಲದ್ದೂ, ಹಾಗೂ ಮೂರ್ಛೆಯೆಂಬ ಅವಸ್ಥೆಯಿಲ್ಲದ್ದು ಪ್ರಜ್ಞೆಯೆಂಬುವ ಪ್ರತ್ಯೇಕಧರ್ಮವಿಲ್ಲದೆ, ನಿತ್ಯವಿಜ್ಞಾನಘನ (ಅಖಂಡ ನಿತ್ಯ ವಿಜ್ಞಾನ ಸ್ವರೂಪನೂ) ಆದದ್ದು, ಚಕ್ಷುರಾದಿ ಇಂದ್ರಿಯಗಳಿಗೆ ಅಗೋಚರನೂ, ಹಸ್ತದಿಂದ ಹಿಡಿಯಲು ಆಗದವನೂ ಬಾಹ್ಯಲಕ್ಷಣರಹಿತನೂ, ತರ್ಕದಿಂದ ಊಹಿಸಲು ಆಗದವ, ವಾಚಾಮಗೋಚರವಾಗಿ ಸರ್ವತ್ರ ವಿಕರೂಪವಾಗಿಯೇ ತೋರುವವನೂ, ಸಂಸಾರದ ದುಃಖವೇನೂ ಇಲ್ಲದೆ ಸರ್ವದಾ ಶಾಂತವಾಗಿ, ಮಂಗಳಸ್ವರೂಪನೂ,ಆದ ಅದ್ವೈತ ಸ್ವರೂಪನೂ, ನಾಲ್ಕನೆಯವನು ಯಾರೋ, ಅವನನ್ನು ಯಾವ ಜ್ಞಾನಿಗಳು ತಿಳಿದಿರುವರೋ ಅವನೇ ಆತ್ಮನು ಮುಮುಕ್ಷುಗಳಿಗೆ ಅವಶ್ಯ ತಿಳಿಯಬೇಕಾದ ಆತ್ಮನು.

ಬೃಹದಾರಣ್ಯಕದಲ್ಲಿ **"ಸಲಿಲ ಏಕೋ ದ್ರಷ್ಟಾ ಅದ್ವೈತಃ"** ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ನೀರಿನಂತೆ ಸ್ವಚ್ಛವಾಗಿದ್ದು ನಿತ್ಯಚೈತನ್ಯರೂಪದಿಂದ ಅದ್ವಿತೀಯನಾಗಿ ನೋಡುವಾತನು ಅದ್ವೈತ ಎಂದು ಹೇಳಿರುವುದು ಕಂಡಿದೆ.

ಅದ್ವೈತವೆಂಬ ಪದಕ್ಕೆ **ನ ವಿದ್ಯತೇ ದ್ವೈತಂ ಯಸ್ಮಿನ್ ಸಃ** ಎಂದು ಬಹುವ್ರೀಹಿ ಸಮಾಸವು. ದ್ವೈತಸ್ಯ ಅಭಾವಃ ಎಂದು ನ ಞ್ ತತ್ಪುರುಷವಲ್ಲ. ಭೇದವಿಲ್ಲವೆಂದೇ ಅರ್ಥವಾದೀತು, ಈ ರೀತಿಯಾಗಿ ಅರ್ಥಮಾಡಿದರೆ ಬೌದ್ಧ ಸಿದ್ಧಾಂತದ ಅದ್ವಯವಾದವಾಗುವುದು. ಬಹುವ್ರೀಹಿ ಸಮಾಸವೇ ಅಭಿಮತ. ಆವಾಗ ದ್ವೈತವು ಯಾವುದರಲ್ಲಿ ನಿಜವಾಗಿ ಇರುವುದಿಲ್ಲವೋ ಅದು ಅದ್ವೈತ ವೆಂದು ವೇದಸಮ್ಮತವಾದ ಅದ್ವಿತೀಯನಾದ ಪರಮಾತ್ಮನೆಂದು ಅರ್ಥ ವಾಗುವುದು. ಈ ಅದ್ವೈತವೇ ವೈದಿಕ ಸಿದ್ಧಾಂತ. ಬೃ– ಶ್ರುತಿಯ ಅರ್ಥ– ಸುಷುಪ್ತಿಯಲ್ಲಿ ಭೇದಬುದ್ಧಿಯನ್ನುಂಟುಮಾಡುವ ಅವಿದ್ಯೆಯು ಶಾಂತವಾಗಿ ರುತ್ತದೆ. **"ಅಹಂ ಮಮ"** ಎಂಬೀ ಅಧ್ಯಾಸವು ಇರುವುದಿಲ್ಲ. ಆದರಿಂದ ಭೇದವೂ ಇರುವುದಿಲ್ಲ. ಆವಾಗ ಶುದ್ಧ ಪ್ರತ್ಯಗಾತ್ಮನು ಅದ್ವಿತೀಯವಾಗಿಯೇ ಇರುವನು ನೀರಿನಂತೆ ನಿರ್ಮಲ, ಸ್ವಚ್ಛ. ಸಮಸ್ತ ಅಪರಿಚ್ಛಿನ್ನ ಅದ್ವಿತೀಯ ನಿತ್ಯಚೈತನ್ಯರೂಪದಲ್ಲಿ ನೋಡುವನು. ಸ್ವಯಂ ಪ್ರಕಾಶನೂ ಇದೇ. ಅಮೃತ ಅಭಯಸ್ಥಾನ, ಮುಕ್ತನಿಗೆ ಬ್ರಹ್ಮಲೋಕವು ಇದೇ. (ಬ್ರಹ್ಮಸ ಲೋಕವಲ್ಲ) ಇದೇ ಸರ್ವೋತ್ಕೃಷ್ಟ ಗತಿಯು ಅಂದರೆ ಮುಕ್ತರು ಕಾಣುವ ವಿಷ್ಣುಪದ. (ಸ್ವರೂಪ) ಇತರೆ ಗತಿಗಳು ಅಶಾಶ್ವತ ಇದು ನಿತ್ಯ. ಇತರೆ ಸಮಸ್ತ ವಿಭೂತಿ ಗಳು ಅಶಾಶ್ವತ. ನಿಕೃಷ್ಟವಾಗಿದ್ದರೆ ಇದು ಹಾಗಿಲ್ಲ. ಸರ್ವದಾ ಇರುವ ಸಂಪತ್ತು. ಇದೇ ಸರ್ವೋತ್ಕೃಷ್ಟಲೋಕ. (ಆತ್ಮಾರಾಮರ ಭೋಗಸ್ಥಾನ) ಇದೇ ಸರ್ವೋತ್ಕೃಷ್ಟವಾದ ಅಖಂಡಾನಂದವು, ಇದರ ಲವಲೇಶವೆನಿಸಿದ ವಿಷ ಯಾನಂದಗಳನ್ನು ಪ್ರಾಣಿಗಳು ತರತಮವಾಗಿ(ಹೆಚ್ಚು ಕಡಿಮೆಯಿಂದ)ಕರ್ಮಾ ನುಸಾರ ಅನುಭವಿಸುವುವು. ಈ ಸಮುದ್ರಸ್ಥಾನದಲ್ಲಿರುವ ಅಖಂಡಾನಂದ ಸ್ವರೂಪವನ್ನೇ ಆಶ್ರಯಿಸಿ, ಮನುಷ್ಯಾದಿಗಳು ಆನಂದವನ್ನು ಅನುಭವಿಸು ವರು. ಈ ರೀತಿಯಾಗಿ ಯಾಜ್ಞವಲ್ಕ್ಯರು ಜನಕನಿಗೆ ಉಪದೇಶಿಸಿದ ಅದ್ವೈತ ಸ್ವರೂಪವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ರೀತಿ ವರ್ಣಿಸಿದ ನಿತ್ಯಸಿದ್ಧನಾದ ಸ್ಥಿರವಾದ ಆತ್ಮನನ್ನು ಬೌದ್ಧರು ಒಪ್ಪುವುದಿಲ್ಲ. ಈ ಅದ್ವೈತವೇ **ಪರಮಾರ್ಥ**. ತನಗೆ ವಿಜಾತೀಯ, ಸಜಾತೀಯ, ಸ್ವಗತಭೇದವಿಲ್ಲದ್ದು. ಹೇಗೆ ಮಾವಿನ ಮರಕ್ಕೆ ಹಲಸಿನ ಮರ ವಿಜಾತೀಯವೋ, ಹಾಗೆಯೇ ಮತ್ತೊಂದು ಮಾವಿನ ಮರ ಸಜಾತೀಯ. ಮರದಲ್ಲಿರುವ ರೆಂಬೆ, ಕೊಂಬೆಗಳು, ಸ್ಕಂಧ ಬೇರು ಇವುಗಳೇ ಸ್ವಗತ ಭೇದಗಳು ಅಂತಹ ಭೇದವು ಪರಬ್ರಹ್ಮ ಅಥವಾ ಆತ್ಮನಲ್ಲಿ ಇರುವುದಿಲ್ಲ. ಆತ್ಮನಿಗೆ ಸಜಾತೀಯ ಚೇತನ, ಈಶ್ವರ ಮತ್ತು ಜೀವ ಎಂದು ಹೇಳಬಹುದು. ಆದರೂ ಮೂಲಭೂತವಾದ ಅಜ್ಞಾನದಿಂದ ಈ ಒಳಭೇದವು ಕಲ್ಪಿತವಾಗಿದೆ, ಅದ್ದರಿಂದ ನಿಜವಾಗಿಲ್ಲ, ಹಾಗೆಯೇ ಆತ್ಮನಿಗೆ ವಿಜಾತೀಯವಾದದ್ದು ಪ್ರಕೃತಿ, ಅಹಂಕಾರ ಬುದ್ಧಿ, ಪಂಚಮಹಾಭೂತಗಳೂ ಭೌತಿಕವಾದ ಜಗತ್ತೆಲ್ಲವೂ ಜಡವಾದ್ದರಿಂದ ಆಗುವುದು. ಈ ಜಗತ್ತು ಜೀವೇಶ್ವರಭೇದ, ಎಲ್ಲವೂ ಜಡವಾದ್ದರಿಂದ ಆಗುವುದು. ಈ ಜಗತ್ತು, ಜೀವೇಶ್ವರಭೇದ ಎಲ್ಲವೂ ಅವಿದ್ಯಾಕಲ್ಪಿತವೇ. ಅದರಿಂದ ಪರಮಾರ್ಥವಾಗಿಲ್ಲ **"ತದನನ್ಯತ್ವಮ್"** ಇತ್ಯಾದಿ ಸೂತ್ರನ್ಯಾಯದಿಂದ ಮೂಲಕಾರಣವಾದ ಬ್ರಹ್ಮಕ್ಕಿಂತ ಬೇರೆ ಒಂದು ಪರಿಣಾಮವಸ್ತು ನಿಜವಾಗಿರುವುದಿಲ್ಲ. ಮಣ್ಣಿನಿಂದ ತಯಾರಾದ ಮಡಕೆ, ಕುಡಿಕೆ ಮುಂತಾದ ಪಾತ್ರೆಗಳು ಆಕಾರದಲ್ಲಿ ಭಿನ್ನವೆನಿಸಿ ತೋರುತ್ತಲಿದ್ದರೂ ಎಲ್ಲವೂ ಮಣ್ಣೆ. ಹೀಗೆಯೇ ಚಿನ್ನದಿಂದ ತಯಾರಾದ ಬಳೆ, ಓಲೆ, ಸರ, ಮುಂತಾದ ಆಭರಣಗಳು ಬೇರೆಬೇರೆಯಾಗಿ ಕಂಡರೂ ಎಲ್ಲವೂ ಚಿನ್ನವೇ. ಆದರಲ್ಲಿ ನಿಜವಾಗಿರುವುದು ಚಿನ್ನವೇ, ಆದಕ್ಕೆ ಬೇರೆ ಎಂದಂತೆಯೇ ಪರಬ್ರಹ್ಮನಿಂದ ಸೃಷ್ಟಿಯಾದ ಈ ಜಗತ್ತಿನಲ್ಲಿ ನಾನಾ ಭೇದಗಳು ಮಾಯಾ ವೈಚಿತ್ರ್ಯದಿಂದ ಬೇರ್ಪಟ್ಟು ತೋರುತ್ತಲಿದ್ದರೂ ತತ್ವಜಿಜ್ಞಾಸುಗಳ ದೃಷ್ಟಿಯಲ್ಲಿ ಸರ್ವದಾ ಇರುವ ಪರಬ್ರಹ್ಮವೇ ನಿಜವಾದದ್ದು **"ಸದೇವ ಸೌಮ್ಯೇದಮಗ್ರ ಆಸೀತ್, ಏಕಮೇವಾದ್ವಿತೀಯಮ್" ಮೃತ್ತಿಕೇತ್ಯೇವಸತ್ಯಮ್ "ಸದೇವ ಸತ್ಯಮ್"** ಇತ್ಯಾದಿ ಛಾಂದೋಗ್ಯ ಶ್ರುತಿಯಂತೆಯೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲ್ಕಂಡ ನ್ಯಾಯ ಸೂತ್ರದ ತೀರ್ಮಾನದಂತೆಯೂ ಜಗತ್ತೆಲ್ಲವೂ ಬ್ರಹ್ಮವೇ, ಅದನ್ನು ಬಿಟ್ಟು ಪರಮಾರ್ಥವಾಗಿಲ್ಲ. **"ಸರ್ವಂ ಖಲ್ವಿದಂ ಬ್ರಹ್ಮ"** **ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್ "ಆತ್ಮೈವೇದಂ ಸರ್ವಮ್ ಬ್ರಹ್ಮೈವೇದಂ ಸರ್ವಮ್** ಎಂದು ಶ್ರುತಿಗಳು **"ವಾಸುದೇವಃ ಸರ್ವಮಿತಿ"** ಎಂದು ಗೀತೆಯೂ ಹೇಳುವುದು. ಆದ್ದರಿಂದಲೇ **"ಮಾಯಾ ಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ" "ಅದ್ವೈತಂ ಪರಮಾರ್ಥೋ ಹಿ ದ್ವೈತಂ ತದ್ಭೇದ ಉಚ್ಯತೇ"** ಎಂದು ಗೌಡಪಾದರೂ ಸಹ ದ್ವೈತವು ಮಾಯಾ ಮಾತ್ರ ಅಂದರೆ ಪರಮಾರ್ಥವಲ್ಲ. ಅದ್ವೈತವೇ ಪರಮಾರ್ಥ, ನಿಜವಾದ ತತ್ವವು ಎಂಬುದಾಗಿ ಸ್ಪಷ್ಟಪಡಿಸಿರುತ್ತಾರೆ.

ಪರಮಾರ್ಥವೆಂಬುದಕ್ಕೆ ವಿರುದ್ಧವಾದ **ಮಾಯಾಮಾತ್ರಮ್** ಎಂಬುದು ನಿಜವಲ್ಲವೆಂಬರ್ಥದಲ್ಲೇ ಪ್ರಯುಕ್ತವಾಗಿದೆ ಇಚ್ಛಾಮಾತ್ರವೆಂದಾಗಲಿ ಬೇರೆ ಯಾವುದೊಂದರ್ಥವೂ ಇದಕ್ಕೆ ಸಲ್ಲದು. ಸಿತ- ಎಂಬುದಕ್ಕೆ ಅಸಿತ ಎಂಬುದು ವಿರುದ್ಧವೆಂದಂತೆ ಮಾಯಾಮಾತ್ರವೆಂಬುದು ಸ್ವಪ್ನದಲ್ಲಿ ಕಾಣುವ ಗಜತುರಗಾದಿ ಪ್ರಪಂಚವೂ ವ್ಯಕ್ತಿಗಳು, ಗ್ರಾಮ, ನಗರಾದಿಗಳೂ ಕಾಣುವಂತೆ ಇವು ಕಾಣುವುವು. ಎದ್ದಮೇಲೆ ಎಲ್ಲಾ ಸುಳ್ಳೆಂದು ಸತ್ಯವಲ್ಲವೆಂದು ಅರಿವಾಗುವಂತೆ ಜಾಗರ ಪ್ರಪಂಚವು ತತ್ವಸಾಕ್ಷಾತ್ಕಾರವಾಗುವವರೆಗೆ ಸತ್ಯ ಅಬಾಧಿತ. ತತ್ವಸಾಕ್ಷಾತ್ಕಾರವು **'ಸರ್ವಂ ಬ್ರಹ್ಮಮಯಮ್' "ಅಹಂ ಬ್ರಹ್ಮಾಸ್ಮಿ"** ಎಂದು ಅನುಭವಕ್ಕೆ ಬಂದ ಕೂಡಲೆ ಮಿಥ್ಯೆಯೆಂಬುದಾಗಿ ಅರಿವಾಗುವುದು, **"ಜ್ಞಾತೇ ದ್ವೈತಂ ನ ವಿದ್ಯತೇ"** ಎಂದು ಗೌಡಪಾದರೂ ಭಾಷ್ಯಕಾರರೂ ಸ್ಪಷ್ಟವಾಗಿ ಹೇಳಿರುವರು. ಪ್ರಕೃತ, ಉದಾಹರಿಸಿದ ಮೇಲ್ಕಂಡ ಶ್ರುತಿವಾಕ್ಯಗಳಲ್ಲಿ ಅದ್ವೈತವೆಂಬುದು ಪರಮಾರ್ಥವಾದ ಪರಬ್ರಹ್ಮಸ್ವರೂಪವಾದ ಆತ್ಮನೇ ಎಂಬುದು ವಿಚಿತವಾಗಿದೆ. ಇದನ್ನು ತಿಳಿದರೆ ಎಲ್ಲವೂ ತತ್ವತಃ ತಿಳಿದ ಹಾಗೆಯೆ. **ಯಜ್ಜ್ಞಾತ್ವಾ ನೇಹ ಭೂಯೋಽನ್ಯತ್ ಜ್ಞಾತವ್ಯಮವಶಿಷ್ಯತೇ।** ಎಂದು ಹೇಳಿದಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತೊಂದು ತಿಳಿಯಬೇಕಾದದ್ದು ಒಂದೂ ಉಳಿಯುವುದಿಲ್ಲ. ಇದನ್ನು ತಿಳಿಯಲು ಮುಮುಕ್ಷುವು ಸರ್ವಕರ್ಮಸಂನ್ಯಾಸ ಮಾಡಿ ಗುರುವನ್ನು ಆಶ್ರಯಿಸಿ ಅವನ ಸೇವೆಯಿಂದ ಅರಿಯಬೇಕೆಂದು ಗೀತೆಯು ಹೇಳಿದೆ.

ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ।
ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ॥

ವಾರ್ತಿಕಕಾರರು - ಅದ್ವೈತ ಪದಾರ್ಥವನ್ನು ಮತ್ತೊಂದು ರೀತಿಯಲ್ಲೂ

ದ್ವಿಧೇತಂ ದ್ವೀತಮಿತ್ಯಾಹುಃ ತದ್ಭಾವೋ ದ್ವೈತಮುಚ್ಯತೇ।
ತನ್ನಿಷೇಧೇನ ಚಾದ್ವೈತಂ ಪ್ರತ್ಯಗ್ ವಸ್ತ್ವಭಿಧೀಯತೇ॥

ಎಂದು ಹೇಳುವರು. ಇದೂ ಸಹ ಆ ಅರ್ಥದಲ್ಲೇ ಮುಗಿಯುತ್ತದೆ. ಇದರ **ಅರ್ಥ** – ಒಂದೇ ಆದ್ವಿತೀಯವಾಗಿದ್ದ ಪರಬ್ರಹ್ಮವು ದ್ವಿಧಾ ಎರಡಾಗಿ **ಇತಂ** - ತಿಳಿಯಲ್ಪಟ್ಟರೆ ದ್ವೀತ, ಆದರ ಭೇದವೇ ದ್ವೈತವೆಂಬುದು. ಅದನ್ನು **'ನೇತಿ ನೇತಿ'** ಎಂದು ನಿಷೇಧಿಸಿದ್ದರಿಂದ ಅದ್ವೈತವೆಂದು ಆದು ಪ್ರತ್ಯಗಾತ್ಮ ಸ್ವರೂಪವೇ ಎಂದು ಅಭಿಪ್ರಾಯವು. **"ಅಯಮಾತ್ಮಾ ಬ್ರಹ್ಮ"** ಎಂದು ಹೇಳಿದಂತೆ, ಒಂದೇ ಜಂಪ್ರಮಂಡಲವನ್ನು ನಾವು ಕಾಣುತ್ತಲಿದ್ದರೂ ನಮ್ಮ ಕೈಬೆರಳುಗಳ ಸಂದಿಯಲ್ಲಿ ಎರಡು ಇರುವಂತೆ ಕಾಣುವುದು. ನೇತ್ರದ ದೋಷ ದಿಂದ ಒಂದು ಅಕ್ಷರ ಎರಡಾಗಿ ತೋರುವುದುಂಟು, ಹಾಗೆಯೇ ಜೀವ, ಈಶ್ವರ ಎಂದು ಎರಡಾಗಿ ಉಪಾಧಿಭೇದದಿಂದ ತಿಳಿಯಬಹುದು, ಈಶ್ವರ ಎಂದು ಮಾಯೆಯೆಂಬ ಉಪಾಧಿಯಿಂದಲೂ **ಜೀವ** ಎಂದು ದೇಹ, ಇಂದ್ರಿಯ, ಬುದ್ಧಿ, ಈ ಉಪಾಧಿಯಿಂದ ಕಾಣಬರುವ ಚೇತನವು. ಜೀವೇಶ್ವರ ಭೇದದಂತೆ ಬ್ರಹ್ಮಾದಿ ಸ್ತಂಭ ಪರ್ಯಂತ ಶರೀರ ಭೇದಗಳಿಂದ ಜೀವರು–ಅನಂತಕೋಟಿ ಸಂಖ್ಯೆಯಲ್ಲಿ ಬೇರ್ಪಟ್ಟಂತೆ ಇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಶ್ವರೋ ಗುರುರಾತ್ಮೇತಿ ಮೂರ್ತಿಭೇದಾದ್ವಿಭಾಗಿನೇ।
ವ್ಯೋಮವದ್ ವ್ಯಾಪ್ತದೇಹಾಯ ದಕ್ಷಿಣಾಮೂರ್ತಯೇ ನಮಃ॥

ಈ ಸ್ತೋತ್ರದಲ್ಲಿ ಈಶ್ವರ, ಗುರು, ಸಾಧಕನಾದ ಆತ್ಮನು ಎಂದು ಮೂರ್ತಿಭೇದದಿಂದಲೇ ಭಿನ್ನೈಸಿದೆ. ಜ್ಞಾನರೂಪನಾದ ದಕ್ಷಿಣಾಮೂರ್ತಿ ಅದರೂ ಆಕಾಶದಂತೆ ಸರ್ವವ್ಯಾಪಕ, ಅಖಂಡ, ಅಖಂಡಾಕಾಶವು ವ್ಯಾಪಕವಾಗಿದ್ದರೂ ಘಟಾಕಾಶ, ಮಠಾಕಾಶ, ಕಪಾಲದಲ್ಲುವಿನ ಆಕಾಶ (ಛಿದ್ರ) ಭೇರಿ ಛಿದ್ರ, ಮೃದಂಗದ ಛಿದ್ರ, ಎಂದು ಉಪಾಧಿಭೇದದಿಂದಲೇ ಭಿನ್ನೈಸಿ ಕಾಣುವುದು. ಅದರಂತೆ ಬ್ರಹ್ಮ ಅಥವಾ ಪರಮಾತ್ಮನೂ ಕಾಣುವನು. ಹೀಗೆಯೇ ಜಡವರ್ಗವೂ ದ್ವೈತ ಪರಮಾತ್ಮನಲ್ಲಿ ಇರುವುದಿಲ್ಲ. ಆದರೂ ಅಜ್ಞಾನದಿಂದ ಕಾಣುವುದು. **"ನೇಹ ನಾನಾಸ್ತಿ, ಕಂಚನ"** ಎಂಬ ಶ್ರುತಿಯಂತೆ ಈ ಬ್ರಹ್ಮದಲ್ಲಿ ಯಾವುದೊಂದು ಭಿನ್ನವಸ್ತುವೂ ಇಲ್ಲವೆಂದು, ಎಲ್ಲಾ ಬಗೆಯ ದ್ವೈತ ಪ್ರಪಂಚವನ್ನು ಇಲ್ಲವೆಂದು (ನಿಜವಾಗಿಲ್ಲವೆಂದು) ಹೇಳಿರುವುದು ಸ್ಪಷ್ಟವಚನವು. ದ್ವೈತವು ಪ್ರತ್ಯಕ್ಷಾದಿ ಪ್ರಮಾಣದಿಂದ ಇರುವಂತೆ ಕಂಡುಬಂದರೂ ಪರಮಾರ್ಥವಲ್ಲ. ವೇದವು ಸರ್ವ ಪ್ರಮಾಣಗಳಿಗೂ ಮೇಲಾದ ಭಗವಂತನ ವಾಣಿಯೇ ಆಗಿದ್ದು ಅಲ್ಲಗಳೆದಿರುವಾಗ ಏಕೆ ಸಂಶಯ ಪಡಬೇಕು? **'ಅಥಾತ ಆದೇಶೋ ನೇತಿ ನೇತಿ' ನ ಹ್ಯೇತಸ್ಮಾದಿತಿ ನೇತ್ಯನ್ಯತ್ ಪರಮಸ್ತಿ'** ಎಂದು ಯಾವ ಯಾವ ರೀತಿಯಲ್ಲಿ ಮೂರ್ತ ಅಮೂರ್ತರೂಪದಲ್ಲೋ, ವಾಸನಾರೂಪದಲ್ಲೋ ಯಾವ ಯಾವ ಬಗೆಯಿಂದ ತೋರುತ್ತದೆಯೆಂದು ಕಲ್ಪಿಸಿದ್ದರೂ ಕಲ್ಪಿತವಾದ ರೂಪವನ್ನು ಬಿಟ್ಟು ಉಳಿದ ಸತ್ಯವಸ್ತು ಮಾತ್ರ ಉಳಿಯುವುದು. **'ಅನ್ಯತ್ ಪರಮಸ್ತಿ' 'ಸತ್ಯಸ್ಯ ಸತ್ಯಮ್'** ಎಂದು ಎರಡನೇ ಸತ್ಯವಸ್ತುವಾದ ಪರಬ್ರಹ್ಮವೊಂದೇ ಉಳಿಯುವುದು. ಅದೇ ಪರಮಾರ್ಥವು. ಅವಿದ್ಯೆಯಿರುವಾಗ ಪ್ರಪಂಚವು ಅಬಾಧಿತವಾಗಿರುವಂತೆ ಕಾಣುವದು ನಿಜವಾಗಿಲ್ಲ ಎಂದೇ ಅರಿಯಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವೈತವು ಮಿಥ್ಯೆ ಪರಮಾರ್ಥವಲ್ಲ

ದ್ವೈತವು ಇದ್ದರೆ ಪರಬ್ರಹ್ಮವೆಂಬ ಸ್ಥಳದಲ್ಲೇ ಇರಬೇಕು. ಇಲ್ಲಿಲ್ಲ ಎಂದರೆ ಬೇರೆ ಎಲ್ಲಿಯೂ ಇರಲಾರದು, ಸರ್ವಾಧಾರ ಪರಬ್ರಹ್ಮವೇ, ಹೇಗೆಂದರೆ- ಪರಬ್ರಹ್ಮದ ಅಸ್ತಿತ್ವದಿಂದಲೇ ದ್ವೈತಕ್ಕೆ ಅಸ್ತಿತ್ವ. ಅದರ ಪ್ರಕಾಶದಿಂದ ಇದರ ಸ್ಫೂರ್ತಿ, ಆಥವಾ ಜ್ಞಾನ, ಸ್ವತಃ ಸತ್ತಾ ಸ್ಫೂರ್ತಿಗಳು ಇಲ್ಲದ್ದರಿಂದ ಬ್ರಹ್ಮವೇ ಆಧಾರವು, **"ತಸ್ಯ ಭಾಸಾ ಸರ್ವಮಿದಂ ವಿಭಾತಿ"** ಎಂದು ಪ್ರಮಾಣವು. ಆದ್ದರಿಂದ ತತ್ವ ವಿಮರ್ಶಕರಿಗೆ ಬ್ರಹ್ಮವೊಂದೇ ಸತ್ಯ ಎಂದೆದಿಗೂ ಅಳಿಯದಿರುವುದು, ದ್ವೈತ ಪ್ರಪಂಚವು ಸ್ವಪ್ನ ಪ್ರಪಂಚದಂತೆ ತತ್ವ-ಜ್ಞಾನವಾದೊಡನೆ ಅಸತ್ಯವಾಗಿಯೇ ಬಿಡುವುದು. ಸರ್ವದಾ ಇರುವುದಾಗಿದ್ದರೆ ಸೃಷ್ಟಿಗೆ ಮುಂಚೆಯೂ ಪ್ರಳಯವಾದ ಮೇಲೂ ಇರಬೇಕಾಗಿದ್ದಿತು. ಹಾಗಿಲ್ಲ,

ಆದಾವನ್ತೇ ಚ ಯನ್ನಾಸ್ತಿ ವರ್ತಮಾನೇಽಪಿ ತತ್ತಥಾ।
ವಿತಥೈಃ ಸದೃಶಾಃ ಸಂತಃ ಅವಿತಥಾ ಇವ ಲಕ್ಷಿತಾಃ ॥

ಯುಕ್ತಿಯಿಂದಲೂ ದ್ವೈತವು ಸತ್ಯವಲ್ಲ

ಮನೋದೃಶ್ಯಮಿದಂ ದ್ವೈತಂ ಯತ್ಕಿಂಚಿತ್ ಸಚರಾಚರವ ್।
ಮನಸೋ ಹ್ಯಮನೀಭಾವೇ ದ್ವೈತಂ ನೈವೋಪಜಾಯತೇ ॥
(29-30-31 ಕಾರಿಕಾ)

ಯಾವುದೇ ಒಂದು ಚರ, ಆಚರ, ಸ್ಥಾವರ, ಜಂಗಮಾತ್ಮಕ ಪ್ರಪಂಚವು ದ್ವೈತವು ಇದ್ದರೂ ಅದೆಲ್ಲವೂ ಮನಸ್ಸಿನ ದೃಶ್ಯವೇ ಹೊರತು ಬೇರೆ ಏನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲ. ಏಕೆಂದರೆ ಮನಸ್ಸಿನಲ್ಲಿ ಮನನ ಮಾಡದೆ (ಚಿಂತಿಸದೆ) ಬಿಟ್ಟರೆ ಈ ದ್ವೈತವೇನೂ ಕಾಣುವುದಿಲ್ಲ. ಸುಷುಪ್ತಿಯಲ್ಲಿ ಮನಸ್ಸಿನ ವ್ಯಾಪಾರವು ನಿಂತು ಹೋಗುವುದಷ್ಟೆ. ಆವಾಗ ದ್ವೈತವೆಲ್ಲಿ? ದ್ವೈತ ಎಂದರೆ ಗ್ರಾಹ್ಯ. ಗ್ರಾಹಕ, ಗೃಹೀತ. **ಗ್ರಾಹ್ಯ**– ವಿಷಯಗಳು, **ಗ್ರಾಹಕ**- ತಿಳಿಸುವ ಇಂದ್ರಿಯಗಳು ಸಹಕಾರಿಯಾದ ದೀಪ, ಸೌರಾಲೋಕ ಮುಂತಾದವು. (ಹಾಗೂ ಅಪಮ್ ಎಂಬುವ ತಿಳಿಯುವ ಆತ್ಮನು ಗೃಹೀತ) ಈ ಎಲ್ಲಾ ಬಗೆಯ ದ್ವೈತವೂ ಚಿತ್ತನ ದೃಶ್ಯ. ವಸ್ತುತಃ ಇಲ್ಲ, ನಾವು ಏನನ್ನೂ ಚಿಂತಿಸದಿದ್ದಾಗಲೂ ಏನೊಂದೂ ತೋರುವುದಿಲ್ಲವಷ್ಟೆ. ಅದರಿಂದ ಸ್ವಪ್ನದಲ್ಲಾಗಲೀ ಎಚ್ಚರದಲ್ಲಾಗಲೀ ಈ ಭೇದವೆಲ್ಲವೂ ಚಿತ್ತದ ಸ್ಪಂದನವೇ.

"ಚಿತ್ತಸ್ಪಂದಿತ ಮೇವೇದಂ ಗ್ರಾಹ್ಯ ಗ್ರಾಹಕವದ್ವಯಮ್"

ಸ್ವಪ್ನದಲ್ಲಿ ಆನೆ, ಕುದುರೆ, ರಥ ಇತ್ಯಾದಿಗಳು ಕಾಣುತ್ತವೆ, ಕಾಣುವುದೆಲ್ಲಿ? ಚಿತ್ತದಲ್ಲಿ. ಅದರ ವಿಕಾರವೇ ಗ್ರಾಹಕ ಚಕ್ಷುರಾದಿ ಇಂದ್ರಿಯಗಳು ಅಥವಾ ದೀಪ, ಸೂರ್ಯಚಂದ್ರಾದಿಗಳ ಬೆಳಕು ಗ್ರಾಹಕ, ದೀಪದ ಬೆಳಕಿನಲ್ಲಿ ಗಜತುರಗಾದಿಗಳನ್ನು ನಾವು ಕಾಣುವಂತೆ ಹಗಲಲ್ಲೂ ಕಾಣುವೆವು. ಸ್ವಪ್ನದಲ್ಲಿ ವಾಸನಾಮಯ ಅಂದರೆ ಅನುಭವದಿಂದ ಉಂಟಾದ ಸಂಸ್ಕಾರದ ಮಹಿಮೆ ಮಾತ್ರ. ಚಿತ್ತದಲ್ಲಿ ಮೊದಲೇನೂ ಗ್ರಾಹ್ಯಗ್ರಾಹಕ ಎರಡೂ ಇಇದೆ ಎರಡೂ ಇರುವಂತೆ ಕಾಣುವುದು. ಹಾಗೆಯೇ ಜಾಗರದಲ್ಲೂ. ಅದರಿಂದ ಇದು ತಾತ್ವಿಕವಲ್ಲ, ಸ್ಥಿರವಲ್ಲ, ಮಾಯಿಕ, ಇಂದ್ರಜಾಲದಂತೆ ತೋರುತ್ತದೆ.

ಯಥಾ ಸ್ವಪ್ನೇ ದ್ವಯಾಭಾಸಂ ಸ್ಪಂದತೇ ಮಾಯಯೈವಾ ಮನಃ।
ತಥಾ ಜಾಗ್ರದ್ದ್ವಯಾಭಾಸಂ ಸ್ಪಂದತೇ ಮಾಯಯಾ ಮನಃ॥

ಬ್ರಹ್ಮಸೂತ್ರದಲ್ಲಿ **"ನಾಭಾವ ಉಪಲಬ್ಧೇಃ"** ಎಂದಂತೆ ಜ್ಞಾನಕ್ಕೆ

CC-O. In Public Domain. Digitized by eGangotri

ಬೇರೆಯಾಗಿಯೇ ಬಾಹ್ಯವಸ್ತುವನ್ನು ಒಪ್ಪಬೇಕು. ಎಲ್ಲವೂ ಚಿತ್ತದೃಶ್ಯ ವೆಂದರೆ ಚಿತ್ತವೇ ಗ್ರಾಹ್ಯಗ್ರಾಹಕವೆಂದಾಗುವುದು. ವಿಜ್ಞಾನವಾದವೇ ಆಗು ವುದು. ಆದರೂ ನಿತ್ಯವಿಜ್ಞಾನವೆಂಬ ವೇದಾಂತ ಸಿದ್ಧಾಂತದಲ್ಲೂ ಪ್ರಮಾತೃ, ಪ್ರಮಾಣ ಪ್ರಮೇಯ ಇತ್ಯಾದಿ ಭೇದವನ್ನು ನಿತ್ಯವಿಜ್ಞಾನದ ವಿವರ್ತ ವೆಂದಾದರೂ ಶೂನ್ಯವಲ್ಲ. ಕ್ಷಣಿಕ ಜ್ಞಾನಕ್ಕೆ ಬೇರೆಯಾಗಿ ಬಾಹ್ಯ ವಿಷಯವಿಲ್ಲ ವೆಂಬುವ ಬೌದ್ಧಮತದಲ್ಲಿ ಶೂನ್ಯ, ನಮ್ಮ ಸಿದ್ಧಾಂತದಲ್ಲಿ ಅನಿರ್ವಚನೀಯ ಪ್ರತೀತಿ ವಿಷಯವಾಗುವುದು. ಬೌದ್ಧಮತದಂತೆ ಮಾಯಾವಾದ ಅಥವಾ ಶೂನ್ಯವಾದದಂತೆ ವೇದಾಂತ ಹೇಳುವುದಿಲ್ಲ. ಸತ್ತು ಅಲ್ಲ. ಅಸತ್ತು ಅಲ್ಲ, ನಿತ್ಯವಿಜ್ಞಾನವೆಂಬುವ ಬ್ರಹ್ಮ ಮಾತ್ರ ಸತ್ಯ. **"ಸತ್ಯಂ ಜ್ಞಾನಮನಂತಂ ಬ್ರಹ್ಮ ವಿಜ್ಞಾನಮಾನಂದಂ ಬ್ರಹ್ಮ"** ಸದಸದ್ವಿಲಕ್ಷಣ, ನಿತ್ಯವಿಜ್ಞಾನ ಮಾತ್ರದಲ್ಲಿ ನಿತ್ಯಾನಂದರೂಪವೂ ಅಪಾದು.

ಮತ್ತೊಂದು ಯುಕ್ತಿ– ಕಾರಣಕ್ಕಿಂತ ಬೇರೆಯಾಗಿ ಕಾರ್ಯವು ಇಲ್ಲ. ವೇದವು ಮೃತ್ತಿಕಾ, ಸುವರ್ಣ, ಕಬ್ಬಿಣ ಈ ಉಪಾದಾನ ಕಾರಣಗಳನ್ನು ದೃಷ್ಟಾಂತವನ್ನಾಗಿ ಉದಾಹರಿಸಿ ಕಾರ್ಯವು ನಾಮಮಾತ್ರ. ಉಪಾದಾನವೇ ಸತ್ಯ ಎಂದು **"ಮೃತ್ತಿಕೇತ್ಯೇವ ಸತ್ಯಮ್, ಲೋಹಮಣಿರೇವ, ಕೃಷ್ಣಾಯಸಮಿತ್ಯೇವ ಸತ್ಯಮ್" 'ಏವಂ ಸದೇವ ಸತ್ಯಮ್'** ಎಂದು ಸಮರ್ಥಿಸಿ ಹೇಳಿದೆ. ತಂದೆ ಆರುಣಿಯು ಪುತ್ರನಾದ ಶ್ವೇತಕೇತುವಿಗೆ ಉಪದೇಶ ಮಾಡಿದ್ದು ತರ್ಕಬದ್ಧವಾಗಿಯೇ ಇದೆ.

ಒಂದು ಯುಕ್ತಿ– ಯದನುವೃತ್ತಂ ತದ್ವ್ಯವೃತ್ತಾದ್ಭಿದ್ಯತೇ। ಯಥಾ ಕುಸುಮೇಭ್ಯಃ ಸೂತ್ರಮ್।

ಜಾಗ್ರತ್ ಪ್ರಪಂಚವು ಸ್ವಪ್ನಕಾಲದಲ್ಲಿರುವುದಿಲ್ಲ. ಎಚ್ಚರದಲ್ಲಿ ಬಹಿರಿಂದ್ರಿಯ ಮೂಲಕ ಕಂಡ ಗಜ, ಆಶ್ವಾದಿಗಳು ಇಂದ್ರಿಯಗಳ

CC-O. In Public Domain. Digitized by eGangotri

ವ್ಯಾಪಾರವು ನಿಂತಮೇಲೂ ಸ್ವಪ್ನದಲ್ಲಿ ವಾಸನಾವಶದಿಂದ ಕಾಣುವುವು. ಮತ್ತು ವಿಪರೀತವಾಗಿಯೂ ಕಾಣುವುವು, ಅದರಿಂದ ಜಾಗರ ಪ್ರಪಂಚವು ಇಲ್ಲಿಲ್ಲ, ಸ್ವಪ್ನದಲ್ಲಿ ದೇಹದ ಒಳಗೆ ಕಾಣುವ ಗಜಾದಿಗಳು ಎದ್ದಮೇಲೆ ಇಲ್ಲ ವಾಗುವುವು. ಕಂಡ ಪ್ಯಕ್ತಿಗಳೂ ವಸ್ತುಗಳೂ ಸತ್ಯವಲ್ಲವೆಂದೇ ತಿಳಿಯುವುವು.

ಈ ಎರಡು ಅವಸ್ಥೆಗಳಲ್ಲೂ ಕಂಡದ್ದು ಒಂದೂ ಇಲ್ಲದೆ ಸುಷುಪ್ತಿ ಎಂದರೆ ಗಾಢ ನಿದ್ರೆಯಲ್ಲಿ ಮಾಯವಾಗುವದು. ಆಗ ಮಲಗಿದವನು ತನ್ನನ್ನೂ ಪರರನ್ನೂ ಸತ್ಯ. ಅನೃತ ಪ್ರಪಂಚವನ್ನು ಕಿಂಚಿತ್ತೂ ಕಾಣುವುದಿಲ್ಲ. ಆತ್ಮ ಸ್ವರೂಪಕ್ಕೆ ಸೇರಿದ ಆನಂದವನ್ನು ಮಾತ್ರ ಕಾಣುವನು. ಈ ರೀತಿ ಕಾಣುವ ಆತ್ಮನೆ ನಿತ್ಯ ವಿಜ್ಞಾನ ಸ್ವರೂಪನು, ನಿತ್ಯದೃಷ್ಟಿಯಿರುವ ಸಾಕ್ಷಿ ಚೇತನ ಮಾತ್ರ. ಮೂರು ಅವಸ್ಥೆಗಳಲ್ಲೂ ಇದ್ದೇ ಇರುವನು. ಆದ್ದರಿಂದ ಅವಿದ್ಯೆ ಯಿರುವಾಗ ಕಂಡ ಅವಸ್ಥೆಗಳಿಗಿಂತ ಶುದ್ಧ ಪ್ರತ್ಯಗಾತ್ಮನು ತುರೀಯಾತ್ಮನು. ಅದೇ ಪರಬ್ರಹ್ಮ, ಅಯಮಾತ್ಮಾ ಬ್ರಹ್ಮ ಎಂದು ಅಪರೋಕ್ಷವಾಗಿ ಕಾಣುವ ಆತ್ಮನು ಬ್ರಹ್ಮವು ಒಂದೇ ಎಂದು ವೇದವು ಹೇಳುವುದು.

ಈ ರೀತಿಯಾಗಿ ಜೀವಾತ್ಮನನ್ನು ಶೋಧನೆ ಮಾಡಿಕೊಂಡ ಅತ್ಯಂತ ವಿರಕ್ತನಾದ ಸಂನ್ಯಾಸಿಗೆ ಶುದ್ಧ ಪರ ಬ್ರಹ್ಮವೇ ನೀನಾಗಿದ್ದೆಯೆಂದು ಉಪದೇಶಿಸುವುದು ಅತ್ಯಂತ ಉಚಿತವು. ಕರ್ಮಿಗಳಿಗೆ ಅಥವಾ ಧ್ಯಾನಯೋಗಿ ಗಳಿಗೆ ಈ ಉಪದೇಶವು ಅವಶ್ಯವಿಲ್ಲ. ಇವರು ಕ್ರಮವಾಗಿ ಚಿತ್ತ ಶುದ್ಧಿಯಾದ ನಂತರ ಏಕಾಗ್ರತೆಯನ್ನು ಸಂಪಾದಿಸಿಕೊಂಡು ಬುದ್ಧಿಯಲ್ಲಿ ಈ ತತ್ವ ವಿಚಾರ ಪೂರ್ವಕ ತತ್ವಜ್ಞಾನವು ಉಂಟಾಗುವುದು, ಆದ್ದರಿಂದಲೇ **'ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್'** ಎಂದು ಭಗವಂತನು ಕರ್ಮಯೋಗವನ್ನು ಕರ್ಮಿಗಳಿಗೂ ಜ್ಞಾನಯೋಗವನ್ನು ಜ್ಞಾನಿಗಳಿಗೂ ವಿಂಗಡಿಸಿ ಹೇಳಿರುವನು.

CC-O. In Public Domain. Digitized by eGangotri

ಉಪದೇಶದಿಂದ **'ಅಹಂ ಬ್ರಹ್ಮಾಸ್ಮಿ'** ಎಂದು ಬರುವ ಸಾಕ್ಷಾತ್ಕಾರ ದಿಂದಲೇ ಮುಕ್ತಿಯು ಅನ್ಯಥಾ ಇಲ್ಲ, (ಬೃ-ಶ್ರುತಿಯಂತೆ) ಇದೊಂದು ಅನುಭವದ ವಾಕ್ಯವು.

ಮುಕ್ತಿ ಎಂದರೇನು? ಎಂಬುದನ್ನು ಮೊದಲು ಅರಿಯಬೇಕು. ಪರಮಮುಕ್ತಿ, ಇತರ ಮುಕ್ತಿಗಳು ಅದಕ್ಕೆ ಸಮಾನವಾದುವು. ಆನಂದಾತಿ ಶಯವುಳ್ಳವು, ಆದರೂ ಅವಿದ್ಯೆಯು ತತ್ವಜ್ಞಾನದಿಂದ ಹೋಗಿರುವುದಿಲ್ಲ ವಾದ್ದರಿಂದ ಪುನರ್ಜನ್ಮವು ಉಂಟಾಗುವುದು. ಪರಮಮುಕ್ತಿಯಲ್ಲಿ ಪುನ ರ್ಜನ್ಮವು ಬರುವುದಿಲ್ಲ. ಈ ವಿಭಾಗಗಳು ಹೀಗಿವೆ. 'ಭಾಗವತ-ಸಾಲೋಕ್ಯ-ಸಾರ್ಷ್ಟಿ-ಸಾಮೀಪ್ಯ–ಸಾರೂಪ್ಯೈ ತತ್ವಮಪ್ಯುತ ಸಾಕಾರವಾದ ವಿಷ್ಣು ಅಥವಾ ಶಿವನನ್ನು ಪೂಜೆ, ಧ್ಯಾನ ಇವುಗಳ ವಿಶೇಷದಿಂದ ಸಮಾನವಾದ ದಿವ್ಯರೂಪವು ಬರುವುದು. ಇದೇ ಸಾರೂಪ್ಯವೆಂಬುದು ಶಂಖ ಚಕ್ರಗದಾಪದ್ಮಗಳನ್ನು ಧರಿಸಿದ ಚತುರ್ಭುಜವುಳ್ಳ ನೀಲ ಮೇಘಶ್ಯಾಮನಾದ ವಿಷ್ಣುವಿನಂತೆ ದಿವ್ಯ ಮೂರ್ತಿಯುಳ್ಳವರಾಗಿ ಜಯವಿಜಯರು ವೈಕುಂಠದಲ್ಲಿ ದ್ವಾರಪಾಲಕರಾಗಿ ಸೇವಿಸುತ್ತಿರುವರೆಂಬುದು ಭಾಗವತ ಪ್ರಸಿದ್ಧವಾಗಿದೆ, ಹಾಗೆಯೇ ಪಾಶ, ಅಂಕುಶ, ತ್ರಿಶೂಲ, ಡಮರು ಮೃಗ ಚಿಹ್ನೆಗಳನ್ನು ಧರಿಸಿದಂತೆ ಈಶ್ವರ ನನ್ನು ಪೂಜಿಸಿದವರಿಗೆ ಈಶ್ವರನಂತಿರುವ ಸಾಕಾರ ದಿವ್ಯ ಶರೀರವು ಬರು ವುದು. ಇವರು ಕೈಲಾಸದಲ್ಲಿ ದ್ವಾರಪಾಲಕರಾಗಿರುವರು, ಇವರಂತೆಯೇ ಉಪಾಸನಾ ವಿಶೇಷದಿಂದ ವೈಕುಂಠ ಲೋಕದಲ್ಲಿಗೇ ಕೈಲಾಸದಲ್ಲಿಗೇ, ಶಿವಲೋಕದಲ್ಲಿಗೇ ದಿವ್ಯ ಶರೀರವನ್ನು ಹೊಂದಿ ಆನಂದವಾಗಿ ಈಶ್ವರ ಸಾನ್ನಿಧ್ಯದಲ್ಲಿರುವರು. ಇದೇ ಸಾಲೋಕ್ಯ(ಈಶ್ವರನು ಇರುವ ಲೋಕದಲ್ಲಿಗೇ ಇರುವಿಕೆ) ಸಾಮೀಪ್ಯ-ಎಂದರೆ ಈಶ್ವರನ ಅಥವಾ ವಿಷ್ಣುವಿನ ಸಮೀಪದಲ್ಲಿ ಇರುವಿಕೆ, ಸಾರ್ಷ್ಟಿ–ಎಂದರೆ ಈಶ್ವರ, ವಿಷ್ಣು ಇವರಿಗೆ ಸಮಾನವಾದ ಐಶ್ವರ್ಯ, ಅಷ್ಟೈಶ್ವರ್ಯಗಳು ಬರುವುದು. ಆದರೆ ನಿರಂಕುಶವಾದ ಈಶ್ವರತ್ವವು ಬರುವುದಿಲ್ಲ. **'ಜಗದ್ ವ್ಯಾಪಾರ ವರ್ಜ್ಯಮ್'** ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಸೂತ್ರಕಾರರು ಹೇಳಿದಂತೆ ಜಗತ್ತಿನ ಸೃಷ್ಟಿ, ಪಾಲನೆ, ಸಂಹಾರ ಕಾರ್ಯ ಗಳನ್ನು ಮಾಡುವ ಸಾಮರ್ಥ್ಯವು ಬರುವುದಿಲ್ಲ, ಯಾವ ಉಪಾಸಕರಿಗೂ ಬರುವುದಿಲ್ಲ. ಈಶ್ವರನನ್ನು ಸೋಽಹಮ್ ಎಂದು ಉಪಾಸನೆ ಮಾಡು ವವರಿಗೂ ಸತ್ಯ ಸಂಕಲ್ಪಾದಿ ಗುಣಗಳು ಆವಿರ್ಭವಿಸಿದರೂ ಜಗತ್ ಸೃಷ್ಟ್ಯಾದಿ ಕಾರ್ಯಗಳ ಶಕ್ತಿಯು ಬರುವುದಿಲ್ಲ. ಇದೇ ನಿರ್ಣಯವು, ಇವರಿಗೂ ತತ್ವ ಜ್ಞಾನವಾಗಿರುವುದಿಲ್ಲ. ಅತಿಶಯವಾದ ಆನಂದವು ಲಭಿಸುವುದಷ್ಟೆ, ಭೋಗ ವನ್ನು ಅನುಭವಿಸಿ ವೈರಕ್ತರಾದಲ್ಲಿ ಈಶ್ವರಾನುಗ್ರಹದಿಂದ ಪ್ರತ್ಯಗಭಿನ್ನ ಬ್ರಹ್ಮಾನುಭವವು ಬಂದು ಕಲ್ಪವು ಮುಗಿದ ನಂತರ ಹಿರಣ್ಯ ಗರ್ಭನೊಡನೆ ವಿಷ್ಣುವಿನ ಪರಮ ಪದವಿಯನ್ನು ,ಅಂದರೆ ಪರಬ್ರಹ್ಮನೊಡನೆ ಐಕ್ಯವನ್ನು ಹೊಂದುವರು. ಇದೇ ವಿಕತ್ವ ಪರಮಮುಕ್ತಿ. ಇದು ಉಪಾ-ಸಕರಿಗೆ ಪರದಲ್ಲಿ ಕ್ರಮವಾಗಿ ಆಗುವುದರಿಂದ ಕ್ರಮ ಮುಕ್ತಿಯೆಂದು ಭಗವತ್ಪಾದರು ಹೇಳಿರುವರು.

ಪರಮ ಮುಕ್ತಿಯು ಮಹಾವಾಕ್ಯೋಪದೇಶದಿಂದಲಾಗಲೀ. **ಕ್ಷೇತ್ರ ಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ"** ಎಂಬ ಉಪ ದೇಶದಿಂದಲಾಗಲೀ ಬ್ರಹ್ಮಾದಿ ಸ್ತಂಬ ಪರ್ಯಂತ ಜೀವ ಶರೀರಗಳಲ್ಲೂ ತನ್ನ ತನ್ನ ಆತ್ಮವನ್ನೂ ಈಶ್ವರನ ಶುದ್ಧ ಚೈತನ್ಯ ಸ್ವರೂಪವನ್ನೂ ಒಂದಾಗಿ ಅನು ಭವ ಮಾಡಿಕೊಂಡವರಿಗೆ ಭೇದ ಬುದ್ಧಿಯು ಹೋಗಿ ವಿಷ್ಣು ಅಥವಾ ಪರ ಬ್ರಹ್ಮದ ಸ್ವರೂಪವೇ ಅಭವ್ಯಕ್ತವಾಗುವುದು ಇದು ಇಹಲೋಕದಲ್ಲೇ ಬದುಕಿರುವಾಗ ಆಗುವುದು. **"ಅತ್ರ ಬ್ರಹ್ಮಸಮಶ್ನುತೇ" ಬ್ರಹ್ಮ ವಿದ್ ಬ್ರಹ್ಮೈವ ಭವತಿ" 'ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ'** ಎಂದು ಉಪ ನಿಷತ್ತುಗಳು ಹೇಳಿದಂತೆ ಸ್ವಯಂ ಪ್ರಕಾಶವಾದ ಅಖಂಡ ಸಚ್ಚಿದಾನಂದ ರೂಪದಲ್ಲೇ ಐಕ್ಯವನ್ನು ಹೊಂದುವರು. ಇದೇ ಐಕ್ಯ, ತತ್ವಜ್ಞಾನದಿಂದ ಅವಿದ್ಯಾನಿವೃತ್ತಿಯಾದಲ್ಲಿ ಸಕಲ ದುಃಖ ವಿನಿರ್ಮುಕ್ತವಾದ ವಿಕ ಚೈತನ್ಯ ಸ್ವರೂಪ ಲಾಭವೇ ಪರಮ ಮುಕ್ತಿಯೆಂದು ತಿಳಿಯಿರಿ

CC-O. In Public Domain. Digitized by eGangotri

ಶಿವಾನಂದ ಲಹರಿಯಲ್ಲಿ

ಸಾರೂಪ್ಯಂ ತವ ಪೂಜನೇ ಶಿವಾದುಹಾದೇನೇತಿ ಸಂಕೀರ್ತನೇ ।
ಸಾಮೀಪ್ಯಂ ಶಿವಭಕ್ತಧುರ್ಯ ಜನತಾಸಾಂಗತ್ಯ ಸಂಭಾಷಣೇ ॥
ಸಾಲೋಕ್ಯಂ ಚ ಚರಾ ಚರಾತ್ಮಕ ತನುಧ್ಯಾನೇ ಭವಾನೀಪತೇ ।
ಸಾಯುಜ್ಯಂ ಮಮ ಸಿದ್ಧಮತ್ರ ಭವತಿ ಸ್ವಾಮಿನ್ ಕೃತಾರ್ಥೋ
ಽಸ್ಮ್ಯಹಮ್ ॥

ಸಾಯುಜ್ಯವೆಂದರೆ ಪರಬ್ರಹ್ಮನೊಡನೆ ಭೇದವಿಲ್ಲದೆ ಅದರ ಸ್ವರೂಪ ಮಾತ್ರವೇ ಪ್ರಕಾಶವಾಗುವುದು.

ಇತರ ದೇವತಾಸಾಯುಜ್ಯ, ಸಗುಣೇಶ್ವರಸಾಯುಜ್ಯ ಮಾತ್ರ ದೇವತೆಗೂ ತನಗೂ ಭೇದಬುದ್ಧಿಯಿರುವಾಗ ಬರುವುದು ಐಕ್ಯವಲ್ಲ, ಮತ್ತೇನು? ಏಕದೇಹ ದೇಹಿತ್ವವೆಂದರ್ಥವು.

'ಜ್ಞಾನೀತ್ವಾತ್ಮೈವ ಮೇ ಮತಮ್' ಎಂದು ಗೀತೆಯಲ್ಲಿ ಜ್ಞಾನಿಗೂ ಪರಮಾತ್ಮನಿಗೂ ಸ್ವಲ್ಪವೂ ಭೇದವಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದೆ. ಈ ಸ್ಥಿತಿಗೆ ಪರಮಮುಕ್ತಿಯೆಂದು ಹೆಸರು, ಪುನರ್ಜನ್ಮವಿಲ್ಲ. ಈ ಮುಕ್ತಿಗೆ ಲೋಕಾಂತರಕ್ಕೆ ಹೋಗಬೇಕಾದದ್ದಿಲ್ಲ, **'ಅತ್ರ ಬ್ರಹ್ಮ ಸಮಶ್ನುತೇ' 'ನ ತಸ್ಯ ಪ್ರಾಣಾ ಉತ್ಕ್ರಾಮಂತಿ ಅತ್ರೈವ ಸಮವಲೀಯಂತೇ** ಈ ವಚನಗಳಿಂದ ಲೋಕಾಂತರ ಗತಿಯಿಲ್ಲದೆ ಮುಕ್ತಿಯಾಗುವುದೆಂದೂ ತಿಳಿಸಿದೆ.

ಸಾಯುಜ್ಯವು ಸರ್ವಜಗತ್ ಸ್ವರೂಪನಾದ ಶಿವಧ್ಯಾನದಿಂದ ಬರುವುದು, ಅದು ಸಿದ್ಧ ಸ್ವರೂಪವೇ ಅಜ್ಞಾನದಿಂದ ಮುಚ್ಚಿದ್ದಿತು, ಶಿವನ ಸ್ವರೂಪ ಸರ್ವಾತ್ಮನಾದ ಈಶ್ವರಾನುಧ್ಯಾನದಿಂದ ಪ್ರಕಾಶವಾಯಿತು. ಇದು

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವಾತ್ಮನ ನಿಜ ಸ್ವರೂಪವೆ. ಮೊದಲೇ ಸಿದ್ಧವಾಗಿದ್ದಿತು, ಹೊಸದಾಗಿ ಹುಟ್ಟಿಕೊಂಡಿದ್ದಲ್ಲ. ಬೂದಿಯಿಂದ ಮುಚ್ಚಿದ ಕೆಂಡದಂತೆ; ಬೂದಿಯನ್ನು ತೆಗೆದರೆ ಇದ್ದ ಕೆಂಡವೇ ಕಣ್ಣಿಗೆ ಕಾಣುವುದಷ್ಟೆ; ಅದರಂತೆ ಇದು.

ಇತರೆ ಸಾರೂಪ್ಯ, ಸಾಮೀಪ್ಯ ಸಾಲೋಕ್ಯಗಳು ಬೇರೆ ಬೇರೆ ಅಲ್ಪ ಸಾಧನೆಯಿಂದ ಬರುವುದು. ಶಿವೈಕ್ಯವಲ್ಲ ಶಿವಪೂಜೆಯಿಂದ ಸಾರೂಪ್ಯ ಶಿವ ಮಹಾದೇವ ಇತ್ಯಾದಿ ನಾಮ ಕೀರ್ತನೆಯಿಂದ ಶಿವನ ಸಾಮೀಪ್ಯವು, ಶಿವಭಕ್ತಾಗ್ರೇಸರರ ಸಹವಾಸ ಸಂಭಾಷಣಾದಿಗಳಿಂದ ಶಿವಸಾಲೋಕ್ಯ. ಶಿವನು ಇರುವ ಕೈಲಾಸ ಲೋಕದಲ್ಲಿ ನಿವಾಸವು ಬರುವುದು, ವಿಷ್ಣುವಿನ ಸಾರೂಪ್ಯ ಹೊಂದಿದ್ದ ಜಯವಿಜಯರಿಗೆ ಮೂಲವಿಷ್ಣುವಿನ ಐಕ್ಯವು ಬಂದಿಲ್ಲ. ಅದರಿಂದ ಅಜ್ಞಾನಿಗಳಾದ್ದರಿಂದ ಅವಧೂತರನ್ನು ತಿರಸ್ಕರಿಸಿದ್ದರಿಂದ ಶಾಪವಶಾತ್ ಮೂರು ಜನ್ಮವನ್ನು ಎತ್ತಬೇಕಾಯಿತು, ಭಾಗವತದಲ್ಲೂ ಈ ಭೇದಗಳನ್ನು ಹೇಳಿದ್ದಾರೆ. ಅವೆಲ್ಲವೂ ಪುನರ್ಜನ್ಮವನ್ನೇ ಕೊಡುವವು. ಸಕಲ ಅವಿದ್ಯೆ ಸರ್ವನಾಶಕವಾದ ಜ್ಞಾನವು ಈ ಭಕ್ತರಿಗೆ ಬರುವುದಿಲ್ಲ. ಸರ್ವವ್ಯಾಪಕ ನಿರ್ಗುಣ ನಿರಾಕಾರ ಮಹಾವಿಷ್ಣುವಿನ ಅಖಂಡ ಜ್ಞಾನಾನಂದ ಸ್ವರೂಪಜ್ಞಾನವು ಅನುಭವಕ್ಕೆ ಬಂದಾಗಲೇ ಪರಮ ಮುಕ್ತಿ **"ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇಽರ್ಜುನ"** ಎಂದಂತೆ ಪ್ರಾರಬ್ಧಕರ್ಮವನ್ನು ಬಿಟ್ಟುಳಿದ ಸಂಚಿತ ಆಗಾಮಿ ಕರ್ಮಗಳು ಎಲ್ಲವೂ ನಿರ್ಜೀವವಾಗಿ ನಾಶವಾಗುವವು, ಅದರಿಂದಲೇ ಪುನರಾವೃತ್ತಿಯಿಲ್ಲದ ಮುಖ್ಯ ಮುಕ್ತಿಯು.

ಭಾಗವತದಲ್ಲಿ ಭಕ್ತಿಯೋಗವನ್ನು ಸಾತ್ವಿಕ, ರಾಜಸ, ತಾಮಸ ಎಂದು ವಿಂಗಡಿಸಿ ಹೇಳಿ ಅನಂತರ ಭಗವಂತನ ಗುಣಗಳನ್ನು ಶ್ರವಣ ಮಾಡಿದವರಿಗೆ ಸರ್ವಜಂತುಗಳ ಹೃದಯದಲ್ಲಿ ವಾಸ ಮಾಡಿರುವ ಪರಮಾತ್ಮನಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವ ನಿಮಿತ್ತವೂ ಇಲ್ಲದೆ ಅಕೃತ್ರಿಮವಾದ ಭಕ್ತಿಯು, ಅವಿಚ್ಛಿನ್ನವಾಗಿ ಹರಿಯುವ ಗಂಗೆಯು ಸಮುದ್ರದಲ್ಲಿ ಪ್ರವೇಶಿಸುವಂತೆ ಅಪ್ರತಿಹತವಾಗಿ ವಿಚ್ಛೇದವಿಲ್ಲದೆ ಚಿತ್ತವೃತ್ತಿಯು ಹರಿಯುವಲ್ಲಿ ನಿರ್ಗುಣ ವಿಷಯದ ಭಕ್ತಿಯೋಗವಾಗುವುದು. ಇದರಿಂದ ಲೇಪರಮಮುಕ್ತಿಯು.

ಮದ್ಗುಣ ಶ್ರುತಿಮಾತ್ರೇಣ ಮಯಿ ಸರ್ವಗುಣಾಶಯೇ।
ಮನೋ ಗತಿರವಚ್ಛಿನ್ನಾ ಯಥಾ ಗಂಗಾಂಭಸೋಂಬುಧೌ ॥

ಲಕ್ಷಣಂ ಭಕ್ತಿಯೋಗಸ್ಯ ನಿರ್ಗುಣಸ್ಯಾಹ್ಯುದಾಹೃತಮ್।
ಅಹೈತುಕೀ ಅವ್ಯವಹಿತಾ ಯಾ ಭಕ್ತಿಃ ಪುರುಷೋತ್ತಮೇ ॥

ಸ ಏಷ ಭಕ್ತಿಯೋಗಾಖ್ಯಃ ಆತ್ಯಂತಿಕ ಉದಾಹೃತಃ।
ಯೇನಾತಿವ್ರಜ್ಯ ತ್ರಿಗುಣಂ ಮದ್ಭಾವಾಯೋಪಪದ್ಯತೇ॥

ಹಿನ್ನೆಲೆಯಲ್ಲಿ ನಿರಂತರ ಭಕ್ತಿ ಮಾಡುವವನಿಗೆ ತತ್ವಜ್ಞಾನವು ಉದಯಿಸಿ ಪರಮ ಮುಕ್ತಿಯು ಉಂಟಾಗುವುದು; ಭೇದ ದೃಷ್ಟಿಯಿಂದ-

ಯಾವನ್ನವೇದ ಸ್ವಹೃದಿ ಸರ್ವಭೂತೇಷ್ವವಸ್ಥಿತಮ್ ।
ಆತ್ಮನಶ್ಚ ಪರಸ್ಯಾಪಿ ಯಃ ಕರೋತ್ಯಂ ತರೋದರಮ್ ॥
ತಸ್ಯ ಭಿನ್ನದೃಶೋ ಮೃತ್ಯುರ್ವಿದಧೇ ಭಯಮುಲ್ಬಣಮ್ ॥

ಮೇಲ್ಕಂಡ ಭಾಗವತದ ಅರ್ಥ

ಎಷ್ಟು ಕಾಲದವರೆಗೆ ಸಾಧಕನು ತನ್ನ ಹೃದಯದಲ್ಲೂ, ಇತರ ಪ್ರಾಣಿಗಳಲ್ಲೂ ವಾಸಮಾಡಿರುವ ಪರಮಾತ್ಮನನ್ನು ಅರಿಯುವುದಿಲ್ಲವೋ ಅಲ್ಲದೆ ತನಗೂ ಪರಮಾತ್ಮನಿಗೂ ಭೇದವನ್ನೇ ಮಾಡಿಕೊಂಡಿರುವನೋ ಈ ರೀತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಭೇದದೃಷ್ಟಿಯುಳ್ಳವನಿಗೆ ಮೃತ್ಯುವು ಅತ್ಯಂತ ಭಯವನ್ನುಂಟುಮಾಡುವುದು ಎಂದರ್ಥ. **"ಉದರಮಂತರಂ ಕುರುತೇ" 'ಅಥ ತಸ್ಯ ಭಯಂ ಭವತಿ'** ತೈತ್ತಿರೀಯವೂ ಸಹ ಹೀಗೆಯೇ ಹೇಳುವುದು, **"ದ್ವಿತೀಯಾದ್ವೈ ಭಯಂ ಭವತಿ"** ಎಂದು ಎರಡನೆಯದು ನಿಜವಾಗಿದ್ದಲ್ಲಿ ಅವನಿಗೆ ಭಯವು ಉಂಟಾಗುವುದು ಇದು ಅನುಭವವೇದ್ಯವಾಗಿದೆ ಭರ್ತೃಹರಿಯ ವಾಣಿಯನ್ನು ಇಲ್ಲಿ ಸ್ಮರಿಸಬೇಕು.

ಜೀವನ್ಮುಕ್ತಿಯು

"ಅತ್ರ ಬ್ರಹ್ಮ ಸಮಶ್ನುತೇ" ಎಂದು ಇಲ್ಲಿಯೇ ಬದುಕಿರುವಾಗಲೇ ಬ್ರಹ್ಮ ಸ್ವರೂಪವನ್ನು ಹೊಂದುವನೆಂದು ಹೇಳಿದ್ದು ಜೀವನ್ಮುಕ್ತಿಯನ್ನು ಹೇಳುವುದು, ಯಾಜ್ಞವಲ್ಕ್ಯರು ಜನಕನಿಗೆ ಉಪದೇಶಿಸಿದ ವಾಕ್ಯವು **"ಅಭಯಂ ವೈ ಜನಕ ಪ್ರಾಪ್ತೋಽಸಿ"** ಎಲೈ ಜನಕನೇ ಈಗಲೇ ಅಭಯ ಸ್ಥಾನವನ್ನು(ವಿಷ್ಣು ಪದವಿಯನ್ನು)ಹೊಂದಿರುವೆ ಎಂದು ಉಪದೇಶಿಸಿದ್ದಾರೆ. **'ಅಸಿ'** ಎಂದು ವರ್ತಮಾನ ಕಾಲವನ್ನು ಹೇಳಿದೆ. ಮುಂದೆ ಹೊಂದುವೆ ಎಂದು **'ಭವಿಷ್ಯಸಿ'** ಪದವನ್ನು ಪ್ರಯೋಗಿಸಿಲ್ಲ. ತತ್ತ್ವಮಸಿ ಮಹಾವಾಕ್ಯದಲ್ಲೂ **'ಅಸಿ'** ಎಂದು ವರ್ತಮಾನ ಪ್ರಯೋಗವೇ ಇದೆ. ಮುಂದೆ ಬ್ರಹ್ಮನಾಗುವುದಿದ್ದರೆ **ತತ್ತ್ವಂ ಭವಿಷ್ಯಸಿ** ಸತ್ಯಮೇಲೆ ಬ್ರಹ್ಮನಾಗುವೆಯೆಂದು ಹೇಳಬೇಕಾಗಿದ್ದಿತು, ಹಾಗೆ ಹೇಳಲಿಲ್ಲ. ಲೋಕಾಂತರಕ್ಕೆ ಹೋಗಿಯೇ ಈ ಮುಕ್ತಿಯಾಗುವುದಿದ್ದರೆ ಹೀಗೆ ಹೇಳುತ್ತಲಿರಲಿಲ್ಲ. ಲೋಕಾಂತರಕ್ಕೆ ಹೋಗಬೇಕಾದರೆ ಕರ್ಮಗಳು ಉಪಾಸನೆಗಳು ಇರಬೇಕು. ಜ್ಞಾನವು ಬಂದಮೇಲೆ ಇವುಗಳು ಇರುವುದಿಲ್ಲ. ಜ್ಞಾನಿಗೆ ಉತ್ಕ್ರಾಂತಿಯೂ ಇಲ್ಲ. ಇದಕ್ಕೂ

CC-O. In Public Domain. Digitized by eGangotri

"ನ ತಸ್ಯ ಪ್ರಾಣಾ ಉತ್ಕ್ರಾಮಂತಿ" "ಅತ್ರೈವ ಸಮವನೀಯಂತೇ" ಎಂದು ಸ್ಪಷ್ಟವಚನವಿದೆ. **ಅರ್ಥ:-** ಜ್ಞಾನಿಯ ಪ್ರಾಣ, ಇಂದ್ರಿಯ ಮುಂತಾದವು ಶರೀರವನ್ನು ಬಿಟ್ಟು ಏಳುವುದಿಲ್ಲ. ಆದರೆ ಇಲ್ಲೇ ಲಯವಾಗುತ್ತವೆಯೆಂದರ್ಥ. ಈ ವಿಷಯವನ್ನು ಯಾಜ್ಞವಲ್ಕ್ಯರು ತಿಳಿಸಿರುವರು.

ಮುಕ್ತಜೀವನು ಪರಬ್ರಹ್ಮದ ಸ್ವರೂಪವಾದ ಅಖಂಡ ಚೈತನ್ಯ ಸ್ವರೂಪದಿಂದಲೇ ಪರಂಜ್ಯೋತಿಯಲ್ಲಿ ಐಕ್ಯವನ್ನು ಹೊಂದುವನು. **'ಸಂಪದ್ಯಾವಿರ್ಭಾವಃ ಸ್ವೇನ ಶಬ್ದಾತ್'** ಎಂಬ ಸೂತ್ರದಲ್ಲಿ ನಿರ್ಣಯವಾಗಿದೆ. **"ಏಷ ಸಂಪ್ರಸಾದೋಽಸ್ಮಚ್ಛರೀರಾತ್ ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣ ಅಭಿನಿಷ್ಪದ್ಯತೇ, ಸಉತ್ತಮಃ ಪುರುಷಃ"** ಎಂದು ಛಾಂದೋಗ್ಯದಲ್ಲಿ ಸಾಧಕನು ಶರೀರಾಭಿಮಾನವನ್ನು ಜ್ಞಾನದಿಂದ ತ್ಯಜಿಸಿ ಪರಂಜ್ಯೋತಿಯಲ್ಲಿ ಸೇರಿ ಸ್ವರೂಪದಿಂದ ಪ್ರಕಾಶಿಸುವನು ಎಂದರ್ಥ. ಮುಕ್ತಾತ್ಮನು ಪರಂಜ್ಯೋತಿಯಲ್ಲಿ ಸೇರಿದ ಮೇಲೆ ಭೇದವೇನೂ ಇರುವುದಿಲ್ಲ, ಶುದ್ಧಜಲದಲ್ಲಿ ಶುದ್ಧ ಜಲವು ಸೇರಿದರೆ ಭೇದವಿಲ್ಲದೆ ಒಂದಾಗಿ ತೋರುವಂತೆ ಏಕಮೇವಾದ್ವಿತೀಯನಾಗಿ ಬಿಡುವನು. **ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ** ಹೇಗೆ ಗಂಗಾದಿನದಿಗಳು ಸಮುದ್ರದಲ್ಲಿ ಸೇರಿಕೊಂಡ ನಂತರ ತನ್ನ ಹೆಸರುಗಳನ್ನು, ತನ್ನ ಆಕಾರಗಳನ್ನು ಬಿಟ್ಟು ಏಕವಾಗುವುವೋ ಹಾಗೆಯೇ ತತ್ವಜ್ಞಾನಿಯು ತನ್ನ ಹೆಸರು, ತನ್ನ ರೂಪ, ಆಕಾರಗಳನ್ನು ಶರೀರ ಉಪಾಧಿಯಿಂದ ಮೊದಲು ಬಂದಿದ್ದನ್ನು ಬಿಟ್ಟು ಪರಂಜ್ಯೋತಿ ಪರಬ್ರಹ್ಮವಲ್ಲೇ ಏಕವಾಗುವನು. ಅಂದರೆ ಬ್ರಹ್ಮವೇ ಆಗುವನು.

ಈ ರೀತಿಯಾಗುವ ಪರಬ್ರಹ್ಮಸ್ವರೂಪವು ಹೊಸದಾಗಿ ಹುಟ್ಟಿಕೊಂಡಿದ್ದಲ್ಲ. ಬದ್ಧನಾಗಿದ್ದ ಕಾಲದಲ್ಲೇ ಇದ್ದ ಸ್ವರೂಪವು ಅಜ್ಞಾನದಿಂದಲೂ ದೇಹಾದಿಗಳಲ್ಲಿದ್ದ ಆತ್ಮಾಭಿಮಾನದಿಂದಲೂ ಕಾಣಿಸದೆ ಮುಚ್ಚಿ ಹೋಗಿದ್ದಿತು.

Sri Vidyabharathi Book Centre, Shingeri

CC-O. In Public Domain. Digitized by eGangotri

ಬ್ರಹ್ಮವಿದ್ಯೆಯ ಮಹಿಮೆಯಿಂದ ಪುನಃ ಪ್ರಕಾಶವಾಗಿ ಕಾಣಿಸುವುದು. **'ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ'** ಎಂಬ ಶ್ರುತಿಯು ಸಾಧಕನು ಮೊದಲು ಬ್ರಹ್ಮವೇ ಆಗಿದ್ದು ಜ್ಞಾನದಿಂದ ಪುನಃ ಬ್ರಹ್ಮಸ್ವರೂಪವನ್ನು ಹೊಂದುವ ನೆಂದು ಹೇಳಿದ್ದು ಈ ಅಭಿಪ್ರಾಯದಲ್ಲಿ. ಹೊಸದಾಗಿ ಉಪಾಸನೆಯಿಂದ ಈಶ್ವರಭಾವ (ಬ್ರಹ್ಮಭಾವವು) ಬಂದಿದ್ದರೆ ಅನಿತ್ಯವಾಗಿ ಬಿಡುವುದು, ಆದರಿಂದ ಹೊಸದಾಗಿ ಮುಕ್ತಿಯಲ್ಲಿ ಹುಟ್ಟಿಕೊಳ್ಳುವುದಲ್ಲ. **ಉದಾಃ- ಯಥಾ ನದ್ಯಃ ಸ್ಯಂಧಮಾನಾಃ ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ। ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ನಿರಂಜನಃ ಪರಮಂ ಸಾಮ್ಯಮುಪೈತಿ॥** ಎಂದು ಮುಂಡಕೋಪನಿಷತ್ತು ಮೇಲಿನ ವಿಷಯಕ್ಕೆ ಪ್ರಮಾಣ, **ಪರಮಂ ಸಾಮ್ಯಂ** ಎಂದರೆ ಪರಬ್ರಹ್ಮ ವೆಂಬುವ ನಿರ್ದೋಷವಾದ ಸ್ವರೂಪವನ್ನು ಹೊಂದುವನೆಂದು ಅರ್ಥ.

'ಪಂಡಿತಾಃ ಸಮದರ್ಶಿನಃ' 'ನಿರ್ದೋಷಂ ಹಿ ಸಮಂ ಬ್ರಹ್ಮ' ಎಂಬ ಗೀತೆಯಲ್ಲಿ ಸಮವೆಂಬುವಕ್ಕೆ ಬ್ರಹ್ಮವೆಂದು ಅರ್ಥ, ಬ್ರಹ್ಮಭಾವವೇ ಸಾಮ್ಯ. ಪರಮ ಸಾದೃಶ್ಯವೆಂದು ಅರ್ಥವಲ್ಲ. ಭೇದವು ಹೋದಮೇಲೆ ಸಾದೃಶ್ಯವು ಎಲ್ಲಿಂದ ಬರಬೇಕು? ಉಪಮೇಯ ಉಪಮಾನಗಳೆಂಬ ಭೇದವಿದ್ದರೆ ಸಾದೃಶ್ಯವಿದ್ದೀತು. ಜೀವೇಶ್ವರರಿಗೆ ಅಜ್ಞಾನದಶೆಯಲ್ಲಿ ಭೇದವು ಇದ್ದಿದ್ದರೂ ಜ್ಞಾನದಶೆಯಲ್ಲಿ ಭೇದಭ್ರಮೆಯು ಹೋಗಿ ಇದ್ದ ತನ್ನ ಸ್ವರೂಪವೇ ಆಗಿದ್ದ ಪರಬ್ರಹ್ಮ ಭಾವವು ತೋರುವುದೇ ಪರಮಮುಕ್ತಿಯು. ಇದೇ ಜೀವನ್ಮುಕ್ತಿಯು.

ವಿದೇಹ ಮುಕ್ತಿಯೆಂದರೆ:- "ವಿಮುಕ್ತಶ್ಚ ವಿಮುಚ್ಯತೇ" ಎಂದಂತೆ ಮೊದಲು ಬಂದ ಜೀವನ್ಮುಕ್ತಿಯು ಇದ್ದರೂ ಪ್ರಾರಬ್ಧಕರ್ಮವಶದಿಂದ ಬಮುಕಿದ್ದ ದೇಹವು ಈ ಕರ್ಮದ ಭೋಗದಿಂದ ಸಪೆದು ಕೆಳಕ್ಕೆ ಬಿದ್ದು ಹೋದರೆ ವಿದೇಹಮುಕ್ತಿಯೆಂದು ಹೇಳಲ್ಪಡುವುದು. ಜೀವನ್ಮುಕ್ತಿ, ವಿದೇಹ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಕ್ತಿಯೆಂದು ಎರಡು ಬಗೆಯಾಗಿ ಮುಕ್ತಿಯಿರುವುದಿಲ್ಲ. **'ವಿದೇಹ'** ಎಂದರೆ ಜೀವನ್ಮುಕ್ತನ ದೇಹವು ಬಿದ್ದುಹೋದನಂತರ ಇಲ್ಲವೆಂದಾಗುವ ಮುಕ್ತಿ ಎಂದರ್ಥ. ಮೊದಲಿನ ಮುಕ್ತಿಗೇ ಈ ಹೆಸರು. ಸಮ್ಯಕ್ ಜ್ಞಾನವೂ ಏಕರೂಪ, ಮುಕ್ತಿಯೂ ಏಕರೂಪವು.ಎಲ್ಲರಿಗೂ ಮುಕ್ತಿಯಾದರೆ ಆನಂದ ತಾರತಮ್ಯವು ಏನೂ ಇರುವುದಿಲ್ಲ. ಎಲ್ಲರಿಗೂ ಒಂದೇ ತರಹವಾದ ಅಖಂಡ ಸಚ್ಚಿದಾನಂದ ಸ್ವರೂಪಾವಿರ್ಭಾವವೆಂದು ಅರಿಯಬೇಕು. ಸಾಧನವು ಏಕರೂಪ ಆದರ ಫಲವು ಏಕರೂಪವೇ ಎಂದು ಸುರೇಶ್ವರರು. ಹೇಳಿರುವರು,

ಏಕರೂಪಸ್ಯ ಮೋಕ್ಷಸ್ಯ ಭಿನ್ನರೂಪಂ ನ ಸಾಧನಮ್।
ಏಕರೂಪಸ್ಯ ಮೋಕ್ಷಸ್ಯ ಹ್ಯೇಕರೂಪಂ ಹಿ ಸಾಧನಮ್॥

ಏಕರೂಪಂ ಚ ವಿಜ್ಞಾನಂ ಏಕರೂಪಾತ್ಮಮೇಯತಃ।
ಭಿನ್ನರೂಪಾಣಿ ಕರ್ಮಾಣಿ ಬಹುಕಾರಕ ಸಂಶ್ರಯಾತ್॥
(ಸಂಬಂಧಿ ವಾರ್ತಿಕ ೩೭೫, ೩೭೬)

ಸಚ್ಚಿದಾನಂದರೂಪನಾದ ಆತ್ಮನು ಏಕರೂಪವಾದ್ದರಿಂದ ಸಾಧನ ಜ್ಞಾನವೂ ಏಕರೂಪವಾಯಿತು. ಇದು ಏಕರೂಪವಾಗಿರುವಂತೆ ಅದರ ಫಲ ಮೋಕ್ಷವೂ ಏಕರೂಪವೇ ಅವಿದ್ಯಾನಿವೃತ್ತಿಯಾವ ಕೂಡಲೇ ಸಕಲ ದುಃಖಗಳಿಂದ ದೂರವಾಗಿರುವ ಅಖಂಡ ಸಚ್ಚಿದಾನಂದ ಸ್ವರೂಪ ಪ್ರಕಾಶ ವೆಂಬುವ ಪರಮಮೋಕ್ಷವು ಏಕರೂಪವಾಗಿಯೇ ಸರ್ವರಿಗೂ ದಕ್ಕುವುದು.

ಕರ್ಮಗಳು ಪಾತ್ರ ಅನೇಕ ರೂಪವಾದವು ಇವುಗಳ ತಾರತಮ್ಯದಿಂದ ಸಾರ್ವಭೌಮನಿಂದ ಆರಂಭಿಸಿ ಚತುರ್ಮುಖಬ್ರಹ್ಮನ ಪರ್ಯಂತ ಇರುವ ಜೀವರಿಗೆ ಆನಂದದ ತಾರತಮ್ಯವುಂಟಾಗಿರುವುದು. ಇದನ್ನು ಬ್ರಹ್ಮವಲ್ಲಿ-

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ ತೈ. "**ಸೈಷಾನಂದಸ್ಯ ಮೀಮಾಂಸಾ ಭವತಿ**" ಈ ಅನುವಾಕದಲ್ಲಿ ಮೋಕ್ಷವು ಈ ಜಾತಿಯ ತಾರತಮ್ಯ ವುಳ್ಳದ್ದಲ್ಲ. ಎಂದು ವಿಸ್ತಾರವಾಗಿ ಪ್ರಕೃತ ವರ್ಣಿಸಿದೆ,

ಜೀವನ್ಮುಕ್ತರ ವ್ಯವಹಾರವು

ಸರ್ವಭೂತಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತಃ।
ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ ॥

ಸಮಸ್ತ ಪ್ರಾಣಿಗಳಲ್ಲೂ ನೆಲೆಸಿರುವ ಪರಮಾತ್ಮನನ್ನು ಏಕತ್ವವನ್ನು ಅವಲಂಬಿಸಿ ಅಂದರೆ **ಅಹಂ ಬ್ರಹ್ಮಾಸ್ಮಿ** ಎಂದು ಅಭಿನ್ನವಾಗಿ ತನ್ನನ್ನು ಅಪರೋಕ್ಷ ಮಾಡಿಕೊಂಡವನು ಸರ್ವಥಾ ಯಾವ ರೀತಿಯಲ್ಲಾದರೂ ಇರಲಿ ಆ ಯೋಗಿಯು ನನ್ನಲ್ಲಿಯೇ ಇರುತ್ತಾನೆ, ನನಗೆ ಬೇರ್ಪಟ್ಟು ಇರಲಾರನು ಎಂದರ್ಥ.

ತತ್ವಜ್ಞಾನದಿಂದ ಜಗತ್ತೆಲ್ಲವೂ ಸ್ವಪ್ನ ಪ್ರಪಂಚದಂತೆ ಮಿಥ್ಯೆಯೆಂದು ತಿಳಿದರೂ, ಪೂರ್ವದ ವಾಸನಾನುವೃತ್ತಿಯಿಂದ ಯಾಜ್ಞವಲ್ಕ್ಯರಂತೆ ಸರ್ವಕರ್ಮ ಸಂನ್ಯಾಸದಿಂದಲೂ, ಜನಕಮಹಾರಾಜನಂತೆ ಯಾವಜ್ಜೀವ ಲೋಕಸಂಗ್ರಹಾರ್ಥ ಆಚರಿಸಿದ ಕರ್ಮದಿಂದಲೂ (ದತ್ತಾತ್ರೇಯರಂತೆ) ಯಾವುದೇ ಒಂದು ಲೌಕಿಕ ವ್ಯವಹಾರದಲ್ಲಿ ಇದ್ದರೂ ನನ್ನಲ್ಲೇ ಅಭಿನ್ನವಾಗಿಯೇ ಇರುವನು, ಅವನ ಮೋಕ್ಷಕ್ಕೆ ಅಡ್ಡಿಯು ಯಾವತ್ತಿಗೂ ಇರದು, ಯಾರೂ ಅಡ್ಡಿಮಾಡಲಾರರೆಂದರ್ಥವು. ಜ್ಞಾನದಿಂದ ಸಂಚಿತಕರ್ಮಗಳು ಆಗಾಮಿಕರ್ಮಗಳು ನಿರ್ಬೀಜವಾಗಿ ನಾಶವಾದರೂ ಪ್ರಾರಬ್ಧಕರ್ಮವಶಾತ್ ವ್ಯವಹಾರವನ್ನು ಮಾಡಿ ಸುಕೃತ ದುಷ್ಕೃತಗಳನ್ನು ಭೋಗದಿಂದಲೇ ಕಳೆದುಕೊಂಡು ವಿದೇಹಕೈವಲ್ಯ ಹೊಂದುವರು, ವಿದೇಹಕೈವಲ್ಯಕ್ಕೆ ಪ್ರಾರಬ್ಧ ಕರ್ಮವೊಂದೇ ಅಡ್ಡಿಯು. ಪ್ರಾರಬ್ಧಕರ್ಮಗಳು ಸುಕೃತವೇ ವಿಶೇಷವಾಗಿರ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಹುದು. ಉದಾಹರಣೆ:- ಬಿಟ್ಟ ಬಾಣವು ಲಕ್ಷ್ಯವನ್ನು ಭೇದಿಸಿವ್ದರೂ ಅದರಲ್ಲಿಟ್ಟ ವೇಗವು ಕ್ಷಯಿಸುವವರೆಗೂ ಮುಂದೆ ಹೋಗುತ್ತಲೇ ಇರುವುದು ದೇವಾಲಯಗಳಲ್ಲಿ ದೊಡ್ಡ ಘಂಟೆಯನ್ನು ಜೋರಾಗಿ ಬಾರಿಸಿ ನಿಲ್ಲಿಸಿದ್ದರೂ ರೊಯ್ ರೊಯ್ ಎಂದು ಐದು ನಿಮಿಷಕಾಲ ಶಬ್ದ ವಾಗುತ್ತಲೇ ಇರುವುದು. ಇವರಂತೆ ಪ್ರಾರಬ್ಧಕರ್ಮವೂ ಮುಂದುವರೆಯುವುದು. ವೇದವ್ಯಾಸರು **'ಅಸಾಂತರತಮು'** ಎಂಬ ಹೆಸರಿನಲ್ಲಿ ಅವತರಿಸಿ ಅಖಿಂಡ ವೇದಗಳನ್ನು ಶಾಖೋಪಶಾಖೆಗಳಾಗಿ ವಿಂಗಡಿಸಿ ಅಧ್ಯೇತೃಗಳಿಗೆ ಉಪಕರಿಸಿದರು. ಐದನೇ ವೇದದಂತೆಯಿರುವ ಮಹಾಭಾರತವನ್ನು ಸ್ತ್ರೀಯರಿಗೂ ಶೂದ್ರರಿಗೂ ಧರ್ಮಾಧರ್ಮಗಳವಿವೇಕ ಮತ್ತು ಬ್ರಹ್ಮವಿದ್ಯೆ ದೊರೆಯಲು ಆಖ್ಯಾನ ಉಪಖ್ಯಾನಗಳಿಂದ ಸುಖವಾಗಿ ಬೋಧಿಸಿದರು. ಬ್ರಹ್ಮಸೂತ್ರ ಬರೆದು ಉಪನಿಷತ್ತುಗಳ ಅರ್ಥ ನಿರ್ಣಯವನ್ನು ಜಿಜ್ಞಾಸುಗಳಿಗೆ ಮಾಡಿ ಕೊಟ್ಟರು. ಅಷ್ಟಾದಶ ಪುರಾಣಗಳನ್ನು ಬರೆದರು. ಧರ್ಮಶಾಸ್ತ್ರವನ್ನು ಬರೆದರು, ವೈಶಂಪಾಯನರಿಗೆ ಭಾರತವನ್ನು ಕಲಿಸಿದರು. ಶುಕಮುನಿಗಳು ಜ್ಞಾನಿಯಾವ ಮೇಲೂ ಭಾಗವತವನ್ನು ಪರೀಕ್ಷಿತ್ ರಾಜನಿಗೆ ಬೋಧಿಸಿದರು. ಪ್ರತ್ಯಗ್ ದೃಷ್ಟಿಯುಳ್ಳ ವಸಿಷ್ಠರು ದಶರಥನಿಗೂ ಕುಲಪುರೋಹಿತರಾಗಿದ್ದು ಪುತ್ರಕಾಮೇಷ್ಟಿಯನ್ನೂ, ಜಾನಕೀ ವಿವಾಹವನ್ನೂ, ಶ್ರೀರಾಮನ ಪಟ್ಟಾಭಿಷೇಕವನ್ನೂ ಮಾಡಿಸಿದರು. ಇದೊಂದು ವಸಿಷ್ಠರ ಉತ್ತಮ ಪ್ರಾರಬ್ಧ ಕರ್ಮಶೇಷದಿಂದ ನಡೆದಿರುವ ಮಹತ್‌ಕಾರ್ಯ. ಇವರೆಲ್ಲ ಆಧಿಕಾರಿಕ ಪುರುಷರೆಂದು ಸೂತ್ರಕಾರರೂ, ಭಾಷ್ಯಕಾರರೂ ಹೇಳಿರುವರು- ಪ್ರಾರಬ್ಧ ಕರ್ಮಶೇಷದಿಂದ **'ಅಸಾಂತರತಮು'** ವೆಂಬುವ ವೇದವ್ಯಾಸ ಶ್ರೀಕೃಷ್ಣದ್ವೈಪಾಯನರು ವಿಷ್ಣುವಿನ ನಿಯೋಗದಿಂದ ಕಲಿದ್ವಾಪರಯುಗ ಸಂಧಿಕಾಲದಲ್ಲಿ ಹುಟ್ಟಿದರು, ಹೀಗೆಯೇ ಬ್ರಹ್ಮನ ಮಾನಸ ಪುತ್ರರಾದ ವಸಿಷ್ಠರು ನಿಮಿಶಾಪದಿಂದ ಹಿಂದಿನ ದೇಹವು ಬಿದ್ದು ಹೋಗಲು ಮಿತ್ರಾವರುಣರಿಂದ ಪುನಃ ಹುಟ್ಟಿದರು. ಭೃಗು ಮುಂತಾದ ಮುನಿಗಳು .ಬ್ರಹ್ಮನ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾನಸ ಪುತ್ರರಾದರೂ ಸ್ವಯಂ ರುದ್ರನಿಗೆ ವರಪ್ರದಾನ ಮಾಡಿದ್ದರಿಂದ ಸ್ಕಂದನೆಂಬ ಹೆಸರಿನಿಂದ ಪುನಃ ಹುಟ್ಟಿದರು, ಇದರಂತೆಯೇ ದಕ್ಷ, ನಾರದ ಮುಂತಾದ ಮಹನೀಯರು ಪುನಃ ಬೇರೆ ದೇಹವನ್ನು ತೆಗೆದುಕೊಂಡರೆಂಬುದು ವೇದದಲ್ಲೂ ಮಂತ್ರ-ಅರ್ಥವಾದ-ಗಳಲ್ಲಿ ಈ ಬಗೆಯಲ್ಲಿ ಜ್ಞಾನಿಗಳಾದರೂ ಪ್ರಾರಬ್ಧಕರ್ಮವಶದಿಂದ ಹುಟ್ಟಿದರೆಂಬುದು ತಿಳಿಯುವುದು. ಹೀಗೆಂದು ಸೂತ್ರ ಭಾಷ್ಯದಲ್ಲಿ (ಅ-೩-ಪಾದ-೪ಳಿ-ಸೂತ್ರ ೩೨) ಹೇಳಿರುವರು. ಇವರೆಲ್ಲಾ ಅಧಿಕಾರಿಕ ಪುರುಷರು. ಅಂದರೆ ಲೋಕಸ್ಥಿತಿಗೆ ಕಾರಣವಾದ ವೇದ ಮೂಲಕವಾದ ಪ್ರವೃತ್ತಿ ಮಾರ್ಗದಲ್ಲೂ ಇತರ ನಿರ್ವತ್ತಿಮಾರ್ಗದಲ್ಲೂ ನಡೆಯಿಸುವ ಅಧಿಕಾರದಲ್ಲಿ ಶ್ರೀನಾರಾಯಣನಿಂದ ನಿಯುಕ್ತರಾಗಿ ಅಧಿಕಾರವು ಮುಗಿಯುವ ಪರ್ಯಂತರ ಇಹದಲ್ಲಿ ಜೀವಿಸುವರು, ಅಧಿಕಾರಿ ಪುರುಷರು. ಇವರಲ್ಲಿ ಮನುಷ್ಯರೂ ದೇವತೆಗಳೂ, ಋಷಿಗಳೂ ಸಹ ಇರುವರು. ಈಗಿರುವ ಸೂರ್ಯನೂ ಅಧಿಕಾರಿಕ ಪುರುಷನು. ಈ ಸೂರ್ಯನು ಸಹಸ್ರ ಯುಗ ಪರ್ಯಂತರ ಒಂದು ಕಲ್ಪ ಇದ್ದು ನಿಯತವಾಗಿ ಉದಯಾಸ್ತ ಮಾನಗಳನ್ನು ಹೊಂದುತ್ತಾ ಲೋಕಕ್ಕೆ ಬೇಕಾದ ಬೆಳಕನ್ನು ಕೊಡುತ್ತಾ ಆನಂತರ ಕಲ್ಪವು ಕ್ಷಯಿಸಿದೊಡನೆ ಉದಯಾಸ್ತಗಳಿಲ್ಲದೆ ಕೈವಲ್ಯವನ್ನೇ ಹೊಂದುತ್ತಾನೆಂದು ವೇದವು ಹೇಳುವುದು.

ಮೇಲೆ ಹೇಳಿದ ವೇದವ್ಯಾಸರೇ ಮೊದಲಾದವರು ಸ್ವತಂತ್ರರೇ ಆದರೂ ಕೈವಲ್ಯಕ್ಕೆ ಕಾರಣವಾದ ಸಮ್ಯಗ್ ದರ್ಶನವು ಇದ್ದರೂ ಅಧಿಕಾರದಲ್ಲಿ ನಿಯುಕ್ತರಾಗಿದ್ದು ಪ್ರಾರಬ್ಧ ಕರ್ಮವು ಕ್ಷಯಿಸದೇ ಇದ್ದು ಅಧಿಕಾರ ಸಮಾಪ್ತಿ ಪರ್ಯಂತ ಇರುವರು. ಅನಂತರ ಇದು ಮುಗಿದ ಮೇಲೆ ಮುಕ್ತರಾಗುವರು. ವಿದೇಹ ಕೈವಲ್ಯ ಹೊಂದುವರು. ಒಂದೇಸಲ ಫಲವನ್ನು ಕೊಡಲು ಹೊರಟ ಪ್ರಾರಬ್ಧ ಕರ್ಮವನ್ನು ಕರ್ಮಾಶಯವನ್ನು ಕಳೆದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಳ್ಳುತ್ತಾ ಸ್ವತಂತ್ರವಾಗಿಯೇ ಒಂದು ಮನೆಯಿಂದ ಮತ್ತೊಂದು ಮನೆಗೆ ಸಂಚರಿಸುವಂತೆ ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಸಂಚರಿಸುತ್ತಾ ತಮ್ಮ ತಮ್ಮ ನಿಯತಾಧಿಕಾರವನ್ನು ನಡೆಯಿಸಲು ಜನ್ಮಾಂತರ ಸ್ಮೃತಿಯನ್ನು ತಪ್ಪದೇ ನೆನೆಯುತ್ತಾ ಇರುವರು. ದೇಹ ಇಂದ್ರಿಯ, ಪ್ರಕೃತಿಗಳು ತಮ್ಮ ವಶದಲ್ಲಿರುವುದರಿಂದ ಸ್ವತಂತ್ರರೇ ಆಗಿದ್ದು ಏಕಕಾಲದಲ್ಲೇ ಅನೇಕ ಶರೀರ ಗಳನ್ನು ಸೌಭರಿ ಮಹರ್ಷಿಯಂತೆ ನಿರ್ಮಿಸಿಕೊಂಡು ಇರುವರು ಅಥವಾ ತಮ್ಮ ಇಚ್ಛೆಯಂತೆ ಕ್ರಮವಾಗಿ ಒಂದೊಂದು ಶರೀರವನ್ನು ಪದೇ ಪದೇ ಸೃಷ್ಟಿಸಿಕೊಂಡು ಅಧಿಕಾರವನ್ನು ನಿರ್ವಹಿಸುವರು. ಆದರೆ ಇವರು ಜಾತಿ ಸ್ಮರರಲ್ಲ. ಜಾತಿಸ್ಮರರಾದರೆ ಬೇರೆ ಬೇರೆ ಯಾಗಿರುವರು. ಅವರು ಜನ್ಮಾಂತರ ಸ್ಮರಣೆಯುಳ್ಳವರು. ಇವರು ಮೊದಲು ಜನ್ಮವೆತ್ತಿದ ವಸಿಷ್ಠಾದಿಗಳೇ ಬೇರೆ ದೇಹವನ್ನು ತೆಗೆದುಕೊಂಡಾಗಲೂ ಇರುವರು. ಭೇದವಿರದು **"ತ ಏವೈತೇ** ಎಂದು ಸ್ಮೃತಿ ವಾಕ್ಯವು ಹೀಗೆ ಹೇಳಿದೆ.

ಭಾರತದಲ್ಲಿ ಸುಲಭಾ ಎಂಬ ಯೋಗಿನಿಯು (ಬ್ರಹ್ಮವಾದಿನಿಯು)ಜನಕ ಮಹಾರಾಜನೊಡನೆ ವಾದ ಮಾಡಲು ಇಚ್ಛಿಸಿ ತನ್ನ ದೇಹವನ್ನು ಬೇರೆ ಕಡೆ ಇಟ್ಟು ಜನಕನ ದೇಹದೊಳಗೆ (ಸೂಕ್ಷ್ಮ ಶರೀರದ ಮೂಲಕ) ಪ್ರವೇಶಿಸಿ ವಿದ್ಯಾ ವಿಷಯದಲ್ಲಿ ವಾದ ಮಾಡಿ ಅನಂತರ ತನ್ನ ದೇಹವನ್ನೇ ಪ್ರವೇಶಿಸಿ ದಳೆಂದು ಪ್ರತೀತಿ ಇದೆ. ಮೈತ್ರೇಯಿ, ಗಾರ್ಗಿ ಮುಂತಾದವರು ಬ್ರಹ್ಮ ಜ್ಞಾನಿಗಳಾದ ಸ್ತ್ರೀಯರೂ ಆಗಿದ್ದರು ಎಂಬುದು ತಿಳಿದಿದೆ.

ಜ್ಞಾನದಿಂದ ಸಕಲ ಕರ್ಮಗಳ ಬೀಜ ಶಕ್ತಿಯು ಸುಟ್ಟು ಹೋಗಿರುವು ದರಿಂದ ಪುನಃ ಸಂಚಿತ, ಆಗಾಮಿಕರ್ಮಗಳಿಂದ ಜನ್ಮಾಂತರದ ಅಂಕುರವು ಹುಟ್ಟುವುದಿಲ್ಲ. ಭೋಗದಿಂದ ಪ್ರಾರಬ್ಧಕರ್ಮವನ್ನು ಕಳೆದು ಕೊಂಡ ಮೇಲೆ ಪುನಃ ಯಾವ ರೀತಿಯಲ್ಲೂ ಹುಟ್ಟದೆ ಬ್ರಹ್ಮನೊಡನೆ ಏಕವಾಗುವರು. ವೇದವ್ಯಾಸರು ಈಗಲೂ ಚಿರಂಜೀವಿಗಳಲ್ಲಿ ಒಬ್ಬರಾಗಿ ಪರಿಗಣಿಸಲ್ಪಟ್ಟಿರು

Sri Vidyabharathi Book Centre, Sringeri

CC-O. In Public Domain. Digitized by eGangotri

ವರು. ಸುಕೃತ ಕರ್ಮವಾವ ಪ್ರಾರಬ್ಧ ಕರ್ಮವು ಎಷ್ಟುಕಾಲ ಜೀವಂತವಾಗಿ ಇರಿಸುವುದಕ್ಕೆ ಶಕ್ತವಾಗಿದೆ. ಎಂಬುದನ್ನು ಸಾಮಾನ್ಯ ಜನರು ನಿರ್ಧರಿಸಲಾ ರರು, ಯೋಗಿಗಳಾದ ಜ್ಞಾನಿಗಳೇ ಈ ವಿಷಯಕ್ಕೆ ಸಮರ್ಥರು. ತೇತ್ರಾಯುಗದ ಆಂಜನೇಯನನ್ನು. ದ್ವಾಪರದಲ್ಲಿ ಭೀಮ ಸೇನನು ಕಂಡನಂತೆ. ಪರಶುರಾಮರನ್ನೇ ಯುಧಿಷ್ಠಿರನು ಸಂದರ್ಶಿಸಿದ್ದನು, ಹಾಗೂ ಮಾರ್ಕಂಡೇ ಯನನ್ನು ಸಂದರ್ಶಿಸಿದ್ದನೆಂದು ಭಾರತದ ಕಥೆಯಿದೆ. ಇದರಿಂದ ಕರ್ಮದ ಶಕ್ತಿ ಅಪರಿಮಿತವೆಂದು ,ಸೂಕ್ಷ್ಮವೆಂದೂ ಫಲದಿಂದಲೇ ಊಹಿಸ ಬೇಕಾದ ದ್ದೆಂದು ತಿಳಿಯಬೇಕು.

ಹೀಗೆಯೇ ಜ್ಞಾನವು ಉಂಟಾದ ಮೇಲೂ ಪ್ರಾರಬ್ಧ ಕರ್ಮದ ಭೋಗವಾಗುವವರೆಗೂ ಜೀವಂತರಾಗಿದ್ದು ಅನೇಕ ಉತ್ತಮಕಾರ್ಯ-ಗಳನ್ನು ಲೋಕ ಕಲ್ಯಾಣಕಾರಕವಾದ ಮಹತ್ಕಾರ್ಯಗಳನ್ನು ನಡೆಯಿಸಿದ ವರಲ್ಲಿ ಶ್ರೀ ಶಂಕರರೂ, ಅನಂತರದಲ್ಲಿ ಬಂದ ವಿದ್ಯಾಶಂಕರರೂ, ಶ್ರೀ ವಿದ್ಯಾ ರಣ್ಯರೂ, ನರಸಿಂಹಭಾರತಿಗಳೂ, ಶ್ರೀ ಚಂದ್ರಶೇಖರಭಾರತಿ ಮುಂತಾ ದವರು ಪ್ರಸಿದ್ಧರು.

ಶ್ರೀಶಂಕರರು ದಕ್ಷಿಣೋತ್ತರ ಭಾರತದಲ್ಲಿ ಪ್ರಚುರವಾಗಿದ್ದ ವೇದ ಬಾಹ್ಯವಾದ ಬೌದ್ಧ, ಜೈನ. ಮತಗಳನ್ನು ನಿರಾಕರಿಸಿ ವೈದಿಕ ಸಿದ್ಧಾಂತವನ್ನು ಪುನಃ ಉದ್ಧರಿಸಿದ್ದೂ ಇದಕ್ಕಾಗಿ ವಾದಗಳನ್ನು ಮಾಡಿದ್ದೂ, ಪ್ರಸ್ಥಾನತ್ರಯ ಭಾಷ್ಯರಚನೆ ಮಾಡಿದ್ದೂ, ಸಾಮಾನ್ಯ ಜನರಿಗಾಗಿ ಸಣ್ಣ ಸಣ್ಣ ಪ್ರಕರಣ ಗ್ರಂಥಗಳನ್ನು ರಚಿಸಿದ್ದೂ ಸಹ ಉತ್ತಮ ಪ್ರಾರಬ್ಧ ಕರ್ಮಾವಶೇಷದಿಂದಲೇ. ಶ್ರೀ ವಿದ್ಯಾರಣ್ಯರು ತತ್ವಜ್ಞಾನಿಗಳಾದ ಮೇಲೂ ವಿಜಯನಗರ ಸ್ಥಾಪನೆ, ಶ್ರೀಮತ್ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನೆ ಮುಂತಾದ ಹಿಂದೂ ಧರ್ಮದ ಪುನರುದ್ಧಾರ ಕಾರ್ಯಗಳನ್ನು ಮಾಡಿದ್ದು. ಐತಿಹಾಸಿಕರಿಗೆಲ್ಲಾ ತಿಳಿದ ವಿಷಯವಾಗಿದೆ,

CC-O. In Public Domain. Digitized by eGangotri

ಜೀವನ್ಮುಕ್ತನ ವಿಷಯದಲ್ಲಿ ಶ್ರೀ ಸುರೇಶ್ವರಾಚಾರ್ಯರ ಆಶಯ

(ನೈಷ್ಕರ್ಮ್ಯಸಿದ್ಧಿ ೪)

ಪ್ರತ್ಯಗಭಿನ್ನವಾದ ಪರಬ್ರಹ್ಮವನ್ನು "ಅಹಂಬ್ರಹ್ಮಾಸ್ಮಿ" ಎಂದು ಸಾಕ್ಷಾತ್ಕಾರ ಮಾಡಿಕೊಂಡ ಜ್ಞಾನಿಯು ಪುನಃ ಹಿಂದಿನಂತೆ ವರ್ಣಾಶ್ರಮ ಧರ್ಮಗಳಲ್ಲಿ ಪ್ರವರ್ತಿಸಬೇಕೆ? ಅಥವಾ ನಿವೃತ್ತಿ ಹೊಂದಬೇಕೆ? ಅಥವಾ ಸ್ವೇಚ್ಛಾವಿಹಾರಿಯಾಗಿರಬೇಕೆ? ಎಂದು ಪ್ರಶ್ನಿಸಿದರೆ ಉತ್ತರವಿದು-

ಜ್ಞೇಯಾಭಿನ್ನಮಿದಂ ಯಸ್ಮಾತ್ ಜ್ಞೇಯ ವಸ್ತ್ವನುಸಾರ್ಯತಃ ।
ನ ಪ್ರವೃತ್ತಿಂ ನಿವೃತ್ತಿಂವಾ ಕಟಾಕ್ಷೇಣಾಪಿ ವೀಕ್ಷತೇ ॥ (೪-೫೪)

ಅರ್ಥ : ನಾವು ತಿಳಿಯಬೇಕಾದ ವಸ್ತು ಬ್ರಹ್ಮವು ಇರುವಂತೆ ಜ್ಞಾನವು ಅದ್ವಿತೀಯ ಚೈತನ್ಯವನ್ನೇ ಅನುಸರಿಸಿ ಇರುವುದರಿಂದ ಅದು ಪ್ರವೃತ್ತಿ ನಿವೃತ್ತಿ ಎರಡೂ ಇಲ್ಲದ ಬ್ರಹ್ಮವು ಇರುವಂತೆ ಪ್ರವೃತ್ತಿ ನಿವೃತ್ತಿಗಳಿಗೆ ಆಸ್ಪದವಲ್ಲದ ಬ್ರಹ್ಮ ಸ್ವರೂಪದಲ್ಲೇ ಇರುವ ಜ್ಞಾನಿಗೆ ಪ್ರವೃತ್ತಿಗಳು ನಿವೃತ್ತಿ ಇರುವುದಿಲ್ಲ. ವಿಧಿ ನಿಷೇಧಗಳು ಎಲ್ಲವೂ ದೇಹಾತ್ಮಾಭಿಮಾನವಿದ್ದವನಿಗೆ ಎಂದು ಶ್ರೀ ಶಂಕರರು **"ಅನುಜ್ಞಾ ಪರಿಹಾರೌ ದೇಹಸಂಬಂಧಾತ್"** ಎಂಬ ಸೂತ್ರದ ಭಾಷ್ಯದಲ್ಲಿ ಹೇಳಿರುವರು. ಜ್ಞಾನಿಯು ನಿಯೋಗಾನರ್ಹವಾದ ಬ್ರಹ್ಮಾತ್ಮಸ್ವರೂಪವನ್ನು ಪಡೆದು ಕೊಂಡವನಾದ್ದರಿಂದ ಅವಿದ್ಯೆಯೇ ಇರುವುದಿಲ್ಲ, ಕಾಮವೂ ಇಲ್ಲ. ಪ್ರವೃತ್ತಿಯು ವಿಹಿತ ಕರ್ಮಗಳಲ್ಲಿ ಹುಟ್ಟುವುದಿಲ್ಲ. ನಿಷಿದ್ಧ ಕರ್ಮಗಳಲ್ಲಿ ಪ್ರವೃತ್ತಿಯು ಮೊದಲೇ ಇಲ್ಲ, ಸ್ವೇಚ್ಛಾಚಾರವಂತೂ ಹುಟ್ಟುವಂತಿಲ್ಲ. ಅದರಿಂದಲೇ ಸುರೇಶ್ವರರು **'ಕಟಾಕ್ಷೇಣಾಪಿ ನ ವೀಕ್ಷತೇ'** ಎಂದು (ಕಡೆಗಣ್ಣಿನಿಂದಲೂ ನೋಡುವುದಿಲ್ಲ ಎಂದರ್ಥ) ಹೇಳಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ತತ್ವಜ್ಞಾನಕ್ಕೆ ಮೊದಲು ಜ್ಞಾನವು ನಮಗೆ ಬಾಹ್ಯವಸ್ತುಗಳನ್ನು ಅವಲಂಬಿಸಿರುವುದು, ಜ್ಞಾನವು ಉಂಟಾದರೆ ಸಂಸಾರ ಬಂಧನವನ್ನು ಎಲ್ಲಾ ಕಳಚಿಕೊಂಡು ಕೇವಲ ಪರಮಾತ್ಮನನ್ನೇ ಅವಲಂಬಿಸುವುದು. ವಸ್ತುತಃ ಜ್ಞಾನಿಗೆ ತತ್ವಜ್ಞಾನವು ಉದಯಿಸಿದ ಕೂಡಲೇ ಅದು ಶಾಸ್ತ್ರೋಕ್ತವಾದ ಪ್ರವೃತ್ತಿ ಮಾರ್ಗವನ್ನು, ನಿವೃತ್ತಿ ಮಾರ್ಗವನ್ನು ತೊಡೆದು ಹಾಕುವುದು. ಅಮಾನಿತ್ವ, ಅದಂಭಿತ್ವ, ಅಹಿಂಸಾ. ಕ್ಷಮೆ ಮುಂತಾದ ಧರ್ಮಗಳು ಸಹಜವಾಗಿಯೇ ಇರುವುವು. ಶಾಸ್ತ್ರದ ಆಜ್ಞೆಯಿಂದ ಅನುಸರಿಸುವ ಸಾಧನ ಗುಣಗಳಲ್ಲ. ॥೫೬॥

ದೇಶಕಾಲಾದಿಗಳೂ ಸಹ ಅವಿದ್ಯಾದಶೆಯಲ್ಲೇ ಕಂಡಿರುವುದರಿಂದ ಅದು ನಾಶವಾದ ಮೇಲೆ ದೇಶಕಾಲಾದಿಗಳ ಸಂಬಂಧವು ತಪ್ಪಿ ಹೋಗುವುದು. ಸ್ವಯಂ ಪ್ರಕಾಶವಾದ ಆತ್ಮನೊಬ್ಬನೇ ಉಳಿದಿರುವಾಗ ಹೋಗದಿರುವ ಅಜ್ಞಾನವಾಗಲಿ, ಅಜ್ಞಾನ ನಾಶಕವಾದ ಮತ್ತೊಂದು ಜ್ಞಾನವಾಗಲಿ ಹುಟ್ಟ ತಕ್ಕದ್ದು ಇರುವುದಿಲ್ಲ. (॥೫೮॥ ನೈ–೪)

ತತ್ವಜ್ಞಾನವೆಂಬ ಬೆಂಕಿಯಿಂದ ಅಜ್ಞಾನ, ಅದರ ಕಾರ್ಯವಾದ ಸಕಲ ಪ್ರಪಂಚವು ಒಂದೇ ಸಲ ಭಸ್ಮವಾಗಿರುವಾಗ ಕರ್ತವ್ಯವಾದದ್ದು ಜ್ಞಾನಿಗೆ ಯಾವುದು ಇದೆ? ಯಾವುದು ಇಲ್ಲ, ಆದರಿಂದ ವಿಧಿ ಶಾಸ್ತ್ರಕ್ಕೆ ಜ್ಞಾನಿಯು ತಲೆ ಬಾಗಿಲ್ಲ ತಲೆ ಬಾಗುವುದೂ ಇಲ್ಲ. ಅಪರೋಕ್ಷ ಜ್ಞಾನವಾದೊಡನೆ ಬದುಕಿರುವಾಗಲೇ ಅಜ್ಞಾನವೂ ಅದರಿಂದ ಆಗುವ ಬಂಧ ವಿಮೋಚನೆಯೂ ಆಗುವುದೇ ಸದ್ಯೋಮುಕ್ತಿಯ ಲಕ್ಷಣವು ಜೀವನ್ಮುಕ್ತನಿಗೆ ಪ್ರಾರಬ್ಧ ಕರ್ಮವೊಂದು ಉಳಿದರೂ ಅದರಿಂದ ಹಿಂದಿದ್ದ ಅಜ್ಞಾನದ ಕಾರ್ಯವು ಸಂಸ್ಕಾರದಿಂದ ಅನುವರ್ತಿಸಿ ಬರುವುದು. ರಜ್ಜು ಸರ್ಪ ಭ್ರಾಂತಿಯು ರಜ್ಜುಜ್ಞಾನದಿಂದ ಹೋಗಿದ್ದರೂ ಭ್ರಾಂತಿಕಾಲದ ಸಂಸ್ಕಾರದಿಂದ ಸರ್ಪದ ಭಯ, ಕಂಪನವು ಅನುವರ್ತಿಸ ಬಹುದು, ಆದರೂ ಪ್ರಾರಾಬ್ಧ ಕರ್ಮವು ಅದರ ಫಲ ಭೋಗ

CC-O. In Public Domain. Digitized by eGangotri

ದಿಂದಲೇ ಕ್ಷಯಿಸಿ ಬಿಡುವುದು. ಮೇಲ್ಮೇಲೆ ಆಭಾಸವಾಗಿ ತೋರುವ ಶರೀರಾದಿಗಳೂ ಕ್ಷಯಿಸುವುವು. ಆ ಕ್ಷಣವೇ ವಿದೇಹ ಕೈವಲ್ಯವು ಸಿದ್ಧವಾಗುತ್ತದೆ. ಇದೊಂದು ಸಂಪ್ರದಾಯದ ಮತ, ಅಂದರೆ ಜ್ಞಾನಿಗಳಾದ ವೇದವ್ಯಾಸರೇ ಮೊದಲಾದ ಸದ್ಗುರುವು ಶಿಷ್ಯರಿಗೆ ಅನೂಚಾನವಾಗಿ ಶಾಸ್ತ್ರದಂತೆ ಉಪದೇಶಿಸಿರುವ ಮತವು, ವಿಧಿ ನಿಷೇಧ ಶಾಸ್ತ್ರವು ಜ್ಞಾನಿಗೆ ಇಲ್ಲವಾದರೆ ಸ್ವೇಚ್ಛಾವಿಹಾರವನ್ನು ಮಾಡಿದರೂ ದೋಷವಿಲ್ಲವೆಂದಾಗುವುದಿಲ್ಲವೆ? ಎಂದರೆ ಉತ್ತರ : ತತ್ವಜ್ಞಾನಿಗೆ ಯಥೇಷ್ಟ ಆಚರಣೆಯಿರದು.

ಅಲೀಪಕ ಪಕ್ಷ ನಿರಾಕರಣೆ

ಬುದ್ಧಾದ್ವೈತ ಸ ತತ್ವಸ್ಯ ಯಥೇಷ್ಟಾಚರಣಂ ಯದಿ ।
ಶುನಾಂ ತತ್ವವಿದಾಂ ಚೈವ ಕೋ ಭೇದೋಽಶುಚಿಭಕ್ಷಣೇ॥

ಅದ್ವೈತಾತ್ಮತತ್ವವನ್ನು ತಿಳಿದ ಜ್ಞಾನಿಗೂ ಸ್ವೇಚ್ಛಾಚರಣೆಯಿರುವುದಾದರೆ ನಾಯಿಗಳಿಗೂ ತತ್ವಜ್ಞಾನಿಗೂ ಅಶುಚಿ ಪದಾರ್ಥವನ್ನು ತಿನ್ನುವಲ್ಲಿ ಯಾವ ಭೇದವಿದೆಯೆಂದು ಹೇಳುವಿರಿ! ಆದ್ದರಿಂದ ಸ್ವೇಚ್ಛೆಯಿಂದ ಪ್ರವೃತ್ತಿಯೆಂಬುದು ಜ್ಞಾನಿಗಳಿಗೆ ಹುಟ್ಟದು. ಏಕೆಂದರೆ ಪೂರ್ವ ಜನ್ಮದಲ್ಲಿ ಮಾಡಿದ ಪಾಪದಿಂದ ಅಜ್ಞಾನವೂ ಕರ್ತವ್ಯಾಕರ್ತವ್ಯ ವಿವೇಕ ಶೂನ್ಯತೆಯೂ, ಇದರಿಂದ ಯಥೇಚ್ಛಾಚರಣೆಯ ಬುದ್ಧಿಯೂ, ಸಾಮಾನ್ಯ ಜನರಿಗೆ ಬರುವುದು. ಲೋಕದಲ್ಲಿ ಜೂಜು, ಸುರಾಪಾನ, ಸ್ತ್ರೀವ್ಯಸನ ಇತ್ಯಾದಿ ದುರಾಚಾರಗಳು ಹಿಂದೆ ಮಾಡಿದ ಅಧರ್ಮದಿಂದ ಅವಿವೇಕವುಂಟಾಗಿಯೇ ನಡೆಯುವುವು, ಅತ್ಯಂತ ಉತ್ಕೃಷ್ಟವಾದ ಪುಣ್ಯದಿಂದಲೇ ಜ್ಞಾನವೂ, ಸುಖವೂ ಸಾತ್ವಿಕರಿಗೆ ಉಂಟಾಗುವುವು, ಹೀಗಿರುವಾಗ ಅಧರ್ಮದ ಕಾರ್ಯವು ಜ್ಞಾನಿಗಳಲ್ಲಿ ಲವಲೇಶವೂ ಉಂಟಾಗುವುದಿಲ್ಲ. ವಿಹಿತ ಪ್ರವೃತ್ತಿಯನ್ನೇ ತತ್ವಜ್ಞಾನವು ತಡೆಯುತ್ತಿರುವಾಗ ನಿಷಿದ್ಧ ಪ್ರವೃತ್ತಿಯು ಹೇಗೆ ತಾನೆ ಉಂಟಾದೀತು?

CC-O. In Public Domain. Digitized by eGangotri

ಅಥವಾ ಜ್ಞಾಯತೇಽಜ್ಞಾನಂ ಯಥೇಷ್ಟಾಚರಣಂ ತತಃ ।
ಧರ್ಮಕಾರ್ಯೇ ಕಥಂ ತತ್ ಸ್ಯಾತ್ ಯತ್ರಧರ್ಮೋಽಪಿನೇಷ್ಯತೇ ॥

ಭಗವಂತನೂ ಸ್ವೇಚ್ಛಾ ಪ್ರವೃತ್ತಿಯು ಜ್ಞಾನಿಗೆ ಹುಟ್ಟುವುದಿಲ್ಲವೆಂಬುದನ್ನು ತಿಳಿಸಿದ್ದಾನೆ.

ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥
ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ ।
ನ ದ್ವೇಷ್ಟಿ ಸಂಪ್ರವೃತ್ತಾನಿ. ನ ನಿವೃತ್ತಾನಿ ಕಾಂಕ್ಷತಿ ॥

ಎಂದು ಜ್ಞಾನಿಯ ಸ್ಥಿತಿಯನ್ನು ತಿಳಿಸುವಾಗ ಯಾವ ಜ್ಞಾನಿಯ ಆಚರಣೆಗಳು ಇದ್ದರೂ ಅವೆಲ್ಲವೂ ಕಾಮ ಮತ್ತು ಸಂಕಲ್ಪಗಳಿಲ್ಲದೆ ಇರುವವೋ ಅಂತಹ ಪುರುಷನು ಜ್ಞಾನದ ಬೆಂಕಿಯಿಂದ ಸಕಲ ಕರ್ಮಗಳನ್ನು ಬೂದಿ ಮಾಡಿಕೊಂಡಿರುವನು. ಈತನನ್ನೇ ಪಂಡಿತನೆಂದು ಅಧ್ಯಾತ್ಮ ಶಾಸ್ತ್ರದಲ್ಲಿ ಹೇಳುವುದು. ಮತ್ತು ಈತನು ಗುಣಾತೀತನು. ಸತ್ವ ರಜಃ ತಮೋ ಗುಣಗಳಿಂದ ಅಜ್ಞಾನಿಗೆ ಆಗುವ ಸುಖ ದುಃಖ ಮೋಹಗಳನ್ನು ರಾಜಸ ಪ್ರವೃತ್ತಿಯನ್ನು ಈತನು ಕಾಣುವುದಿಲ್ಲ. ಅಂದರೆ ರಜೋಗುಣದ ಕಾರ್ಯ ದುಃಖಿಕಾರಕವಾದ ಪ್ರವೃತ್ತಿಯನ್ನು ತಮೋಗುಣದ ಮೋಹವನ್ನು ದ್ವೇಷಿಸುವುದಿಲ್ಲ. ಸಾತ್ವಿಕದ ಕಾರ್ಯವಾದ ಜ್ಞಾನ ಮತ್ತು ಸುಖಿಗಳನ್ನು ಬಿಟ್ಟು ಹೋಗಿದ್ದನ್ನೂ ಪುನಃ ಅಪೇಕ್ಷಿಸುವುದಿಲ್ಲ. ತತ್ವಜ್ಞಾನಿಯು ನಿರ್ಗುಣ ಬ್ರಹ್ಮವನ್ನೇ ತಾನೆಂದು ತಿಳಿದಿರಲು ಮಾಯೆಯಿಂದ ಹುಟ್ಟುವ ಗುಣ ದೋಷಗಳನ್ನು ಹೇಗೆ ಕಾಣುವನು? ಇಲ್ಲವೆಂದರ್ಥ. ಆದುದರಿಂದ ಸೇಚ್ಛಾಚಾರಕ್ಕೆ ಅವಕಾಶವಿಲ್ಲ. ಮತ್ತು ಮುಮುಕ್ಷುವಾಗಿ ಸಾಧಕನಾಗಿದ್ದಾಗಲೆ ಸ್ವೇಚ್ಛಾಚಾರವನ್ನು ಬಿಟ್ಟಿರುವಾಗ ಜ್ಞಾನಿಯಾದ ಮೇಲೆ ಸರ್ವಥಾ ಆಚರಿಸುವುದಿಲ್ಲ. ಯಾವ ಯಾವ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯದಲ್ಲಿ ಗೃಹ ಕ್ಷೇತ್ರವನಿತಾದಿಗಳಲ್ಲಿ ವಿರಕ್ತನಾಗಿರುವನೋ ಆತನು ಪುನಃ ಸುಖಿಕ್ಕಾಗಿ ಪ್ರವರ್ತಿಸುವುದಿಲ್ಲ. ಮೂರು ಲೋಕದ ಭೋಗಗಳಲ್ಲೂ ವಿರಕ್ತನಾದವನು ಏತಕ್ಕಾಗಿ ಪ್ರವರ್ತಿಸುವನು?

ಉದಾ : ಹಸಿವು ಬಾಯಾರಿಕೆ ಹೆಚ್ಚಾಗಿ ನರಳುತ್ತಲಿದ್ದರೂ ವಿಷ ಮಿಶ್ರವಾದ ಅನ್ನವನ್ನು ಊಟಮಾಡಲು ಯಾರೂ ಅಪೇಕ್ಷಿಸುವುದಿಲ್ಲ, ಮೃಷ್ಟಾನ್ನವನ್ನು ಊಟಮಾಡಿ ತನ್ನ ಆಸೆಯನ್ನು ತೀರಿಸಿ ಕೊಂಡವನು ಎಂದಿಗೂ ತಿನ್ನಲು ಅಪೇಕ್ಷಿಸುವುದಿಲ್ಲ. ಅದರಂತೆ ಜ್ಞಾನಿಯು ನಿತ್ಯತೃಪ್ತನಾದ್ದರಿಂದ ಪುನಃ ಆತನಿಗೆ ಭೋಗದ ಆಸೆ (ರಾಗವು) ಹುಟ್ಟಲು ಅವಕಾಶವಿಲ್ಲ,

ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।
ವೀತರಾಗ ಭಯಕ್ರೋಧಃ ಸ್ಥಿತ ಧೀರ್ಮುನಿರುಚ್ಯತೇ ॥

"ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥ ಎಂದು ಗೀತೆಯಲ್ಲಿ ಸ್ಥಿತ ಪ್ರಜ್ಞಾನ ಲಕ್ಷಣವನ್ನು ಗಮನಿಸಿದರೆ ಮೇಲಿನ ಅರ್ಥವು ಸಿಗುವುದು. ಮತ್ತು ಜ್ಞಾನವಾಗದಿರುವುದಕ್ಕೆ ರಾಗವೇ ಚಿಹ್ನೆ. ಮನಸ್ಸು ಸಹಜವಾಗಿ ವ್ಯಾಯಾಮ, ಖುಷಿ ಪಡುವ ಸ್ಥಳ, ಸಂಗೀತ, ನೃತ್ಯ, ನಾಟ್ಯ, ಮನೋಹರವಾದ ದೃಶ್ಯ ಮುಂತಾದುವುಗಳಲ್ಲಿ ಇಡುವ ರಾಗವೇ ಅದು, ಎಲ್ಲಿ ಬೆಂಕಿ ಇರುವುದೋ ಆ ಮರದ ಪೊಟರೆಯಲ್ಲಿ ಹಸಿರು ಹುಟ್ಟಲು ಅವಕಾಶವಿಲ್ಲ. ಹಾಗೆಯೇ ರಾಗ ವಿದ್ದರೆ ಜ್ಞಾನವಿರುವುದಿಲ್ಲ. ಹುಟ್ಟುವುದಿಲ್ಲ. ಬಹಿರ್ಮುಖನಾಗಿಯೆ ಇರುವವನಿಗೆ ತತ್ವಜ್ಞಾನವು ಉಂಟಾಗುವುದೇ ಇಲ್ಲ, ಜಂಭ. ಅಹಂಕಾರ, ದುರಭಿಮಾನ, ಹಿಂಸಾ ಕಾರ್ಯ ಇತ್ಯಾದಿ, ದೋಷಗಳಿದ್ದರೂ ಜ್ಞಾನವಾಗುವುದಿಲ್ಲ. ಅದರಿಂದ ಇವುಗಳನ್ನು ತ್ಯಜಿಸಿ, ಭೂತದಯೆ, ದಾಕ್ಷಿಣ್ಯ. ಮೈತ್ರಿ ಮುಂತಾದ ಗುಣಗಳನ್ನು ಸಾಧಿಸಿ ಕೊಳ್ಳುವವನಿಗೆ ಮಾತ್ರ ತತ್ವಜ್ಞಾನವು ಹುಟ್ಟುವದು.

CC-O. In Public Domain. Digitized by eGangotri

ಜ್ಞಾನಿಯಾದ ಮೇಲೆ ಸಿದ್ಧಪುರುಷನಿಗೆ ಈ ಗುಣಗಳು ಸಹಜವಾಗಿಯೇ ನಿಲ್ಲುವವು. ಗೀತೆಯ ಸ್ಥಿತಪ್ರಜ್ಞನ ಮತ್ತು ಗುಣಾತೀತನ ಲಕ್ಷಣಗಳನ್ನು ತಿಳಿದುಕೊಂಡರೆ ತತ್ವಜ್ಞಾನಿಯ ಸ್ವರೂಪವು ತಿಳಿಯುವುದು ಈ ರೀತಿಯಲಾ ಭಗವತ್ಪಾದರು ಭಾಷ್ಯದಲ್ಲಿ ತಿಳಿಸಿರುತ್ತಾರೆ.



ಶ್ರೀ ಕೃಷ್ಣಾರ್ಪಣಮಸ್ತು



CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ರ 604899

ಮೈತ್ರಿ ಪ್ರಿಂಟರ್ಸ್ ಅಂಡ್ ಬೈಂಡರ್ಸ್, 1465, 40 ಆಡಿ ರಸ್ತೆ
ಮುನೇಶ್ವರ ಬ್ಲಾಕ್, ಬೆಂಗಳೂರು-560026

Sri Vidyabharathi Book Centre, Sringeri